ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 26 ಶುಕ್ರವಾರ 2022

₹4

ಸಂಪುಟ: 43 | ಸಂಚಿಕೆ: 131 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಗಂಗೋತ್ರಿ ಬಡಾವಣೆಯಲ್ಲಿ 40 ಲಕ್ಷ ವೆಚ್ಚದ ಗ್ರಂಥಾಲಯ ಕಟ್ಟಡ ಉದ್ಘಾಟನೆ



ಮೈಸೂರು, ಆ.25(ಆರ್‌ಕೆಬಿ)– ಮೈಸೂರಿನ ಗಂಗೋತ್ರಿ ಬಡಾವಣೆಯ ಬಿಸಿಲು ಮಾರಮ್ಮ ದೇವಸ್ಥಾನದ ರಸ್ತೆಯಲ್ಲಿ ಪುಟ್ಟೀರಮ್ಮ ಶಾಲೆ ಎದುರು 40 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಗ್ರಂಥಾಲಯ ಕಟ್ಟಡದ ಉದ್ಘಾಟನೆಯನ್ನು ಸಂಸದ ಪ್ರತಾಪ್‌ಸಿಂಹ, ನಗರಪಾಲಿಕೆ ಸದಸ್ಯೆ ವೇದಾವತಿ ಅವರ ಸಮ್ಮುಖದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಗುರುವಾರ ನೆರವೇರಿಸಿದರು.

ಗಂಗೋತ್ರಿ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕಟ್ಟೇರ ಕಾರಿಯಪ್ಪ ಹಾಗೂ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಈ ಗ್ರಂಥಾಲಯ ನಿರ್ಮಾಣಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ರೂ.1.46 ಲಕ್ಷ ಪಾವತಿಸಿ, 2009 ರಲ್ಲಿ ಜೆ.ಎನ್.ನರ್ಮ್ ಯೋಜನೆಯಡಿ ರೂ.25 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದ್ದರು. ಕಟ್ಟಡವು ಕಾಮಗಾರಿ ಕಾರಣಾಂತರಗಳಿಂದ ವಿಳಂಬವಾಗಿ ಪಾಳು ಮನೆಯಂತಾಗಿತ್ತು.

ಗಂಗೋತ್ರಿ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳು, ಕಟ್ಟಡದ ಮುಂದುವರೆದ ಕಾಮಗಾರಿಗೆ ಗಂಗೋತ್ರಿ ಬಡಾವಣೆಯ ಮನೆ–ಮನೆಯಿಂದ 4 ಲಕ್ಷ ರೂ. ಮೊತ್ತದ ಚಂದಾ ವಸೂಲಿ ಮಾಡಿದ್ದರು. ಇದನ್ನು ಮನಗಂಡ ನಗರಪಾಲಿಕೆ ಸದಸ್ಯೆ ವೇದಾವತಿ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಸಮಿತಿಯ ಪದಾಧಿಕಾರಿಗಳು ಹಾಗೂ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ್ದರು. ಕಟ್ಟಡ ಕಾಮಗಾರಿಯನ್ನು ಸುವ್ಯವಸ್ಥಿತವಾಗಿ ಶೀಘ್ರ ಪೂರ್ಣಗೊಳಿಸಲು ಅಗತ್ಯ ಅನುದಾನವನ್ನು ಮಹಾನಗರಪಾಲಿಕೆ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಬಿಡುಗಡೆ ಮಾಡಿ, ಈ ಕಟ್ಟಡಕ್ಕೆ ಮಾಜಿ ಶಾಸಕ ವಾಸು ಅವರು ಸಹ 10 ಲಕ್ಷ ಅನುದಾನ ನೀಡಿದ್ದರು. ಕಟ್ಟಡವನ್ನು ಪೂರ್ಣಗೊಳಿಸಿ, ಅಗತ್ಯ ಪೀಠೋಪಕರಣಗಳ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಈ ಕಟ್ಟಡದ ಉದ್ಘಾಟನೆ ಗುರುವಾರ ಗ್ರಂಥಾಲಯ ಇಲಾಖೆಯ ಸಹಯೋಗದಲ್ಲಿ ನೆರವೇರಿತು. ಕಾರ್ಯಕ್ರಮದಲ್ಲಿ ಗ್ರಂಥಾಲಯ ಇಲಾಖೆ ಉಪನಿರ್ದೇಶಕ ಬಿ.ಮಂಜುನಾಥ್, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಗಂಗೋತ್ರಿ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕಟ್ಟೇರ ಕಾರಿಯಪ್ಪ, ಶ್ರೀನಿವಾಸ್, ಗಂಗಾಧರ್, ಚಾಮರಾಜ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಮೇಶ್, ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ಪ್ರಜ್ವಲ್ ಶ್ರೀವತ್ಸ, ಮುಖಂಡರಾದ ಶಿವಶಂಕರ್, ರಾಜ್ಯ ಸಹಕಾರ ಪ್ರಕೋಷ್ಠ ಸದಸ್ಯ ಶ್ರೀನಿವಾಸ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸೋಮಶೇಖರರಾಜ್ ಅರಸ್, ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಮೀನಾಕ್ಷಿ, ಜಿ.ವಿ ಕೃಷ್ಣ, ಗುರುದತ್, ಸುಬ್ರಮಣ್ಯ, ದೇವರಾಜು, ಇನ್ನಿತರರು ಉಪಸ್ಥಿತರಿದ್ದರು.

ಪತ್ರಕರ್ತ ಡಾ.ಕೂಡ್ಲಿ ಗುರುರಾಜ್ ಡೈನಾಮಿಕ್ಸ್ ಆಫ್ ರಿಪೋರ್ಟಿಂಗ್ ಪುಸ್ತಕ ಲೋಕಾರ್ಪಣೆ



ಮೈಸೂರು, ಆ. 25 (ಆರ್‌ಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಬೆಂಗಳೂರಿನ ಶ್ರೀ ಜಯತೀರ್ಥ ಪಬ್ಲಿಕೇಷನ್ಸ್ ವತಿಯಿಂದ ಪತ್ರಕರ್ತರ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಡಾ. ಕೂಡ್ಲಿ ಗುರುರಾಜ್ ಅವರ ಸುದ್ದಿ, ಬರಹ ಮತ್ತು ವರದಿಗಾರಿಕೆ ಪುಸ್ತಕದ ಇಂಗ್ಲಿಷ್ ಅನುವಾದಿತ 'ಡೈನಾಮಿಕ್ಸ್ ಆಫ್ ರಿಪೋರ್ಟಿಂಗ್' ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಬಿಡುಗಡೆ ಮಾಡಿ ದರು. ಬೆಂಗಳೂರಿನ ಹಿರಿಯ ಪತ್ರಕರ್ತ ವಿಜಯಕುಮಾರ್ ಪಾಟೀಲ ಅವರು ಕನ್ನಡ ಪುಸ್ತಕವನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದ್ದು, ಶ್ರೀ ಜಯತೀರ್ಥ ಪಬ್ಲಿ ಕೇಷನ್ಸ್ ಪ್ರಕಟಿಸಿದೆ. ಕೃತಿ ಲೋಕಾರ್ಪ ಣೆಗೊಳಿಸಿ ಮಾತನಾಡಿದ ಕುಲಪತಿಗಳು, ಪತ್ರಿಕೋದ್ಯಮ ಮತ್ತು ಸಂವಹನ ವಿಷಯವೇ ಒಂದು ಡೈನಾಮಿಕ್ ಆಗಿದೆ. ಅದು ನಿತ್ಯ ಜೀವನದೊಂದಿಗೆ ಹಾಸು ಹೊಕ್ಕಾಗಿದೆ ಎಂದರು. ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಇತರ ಅಭಿವೃದ್ಧಿ ಪ್ರಕ್ರಿಯೆಗೆ ಪತ್ರಿಕೋದ್ಯಮ ಪೂರಕವಾಗಿ ಕೆಲಸ ಮಾಡುತ್ತಿದೆ. ಈ ಅಂಶವನ್ನು ಗಮನ ದಲ್ಲಿರಿಸಿಕೊಂಡು ಡಾ.ಕೂಡ್ಲಿ ಗುರುರಾಜ್ ಈ ಕೃತಿ ರಚಿಸಿದ್ದು, ಪತ್ರಕರ್ತರು ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಸಹಕಾರಿಯಾಗಲಿದೆ. ವರದಿಗಾರಿಕೆಯ ತಂತ್ರ, ತಂತ್ರಜ್ಞಾನ ಬಳಕೆ, ಸವಾಲುಗಳನ್ನು ಎದುರಿಸುವ ಕ್ರಮ, ಮಾಧ್ಯಮ ಕಾನೂನುಗಳು ಹಾಗೂ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಪಾತ್ರ ಕುರಿತಂತೆ ಲೇಖಕರು ಈ ಕೃತಿಯಲ್ಲಿ ವಿವರಿಸಿದ್ದಾರೆ ಎಂದರು. ಯುವ ಪತ್ರಿಕೋದ್ಯಮ ಪದವೀಧರರು ಒಳ್ಳೆಯ ವರದಿ ಮಾಡುವ ಗುಣ ಹೊಂದಿರಬೇಕು. ನಿಖರ, ವಸ್ತುನಿಷ್ಠ ಸುದ್ದಿಯನ್ನು ಸರಿಯಾದ ಸಮಯಕ್ಕೆ ನೀಡುವುದು ಒಳಿತು. ಆ ಮೂಲಕ ಉತ್ತಮ ಸಮಾಜ ನಿರ್ಮಿಸುವತ್ತ ಗಮನಹರಿಸಿ ಎಂದು ಪ್ರೊ. ಹೇಮಂತಕುಮಾರ್ ಇದೇ ಸಂದರ್ಭ ನುಡಿದರು.

ಅಸ್ಸಾಂನ ಸಿಲ್‌ಚಾರ್ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಸಹ ಕುಲಪತಿ ಪ್ರೊ. ಕೆ.ವಿ.ನಾಗರಾಜ್ ಅವರು ಕೃತಿ ಕುರಿತು ಮಾತನಾಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕೃತಿ ಲೇಖಕ ಹಾಗೂ ಹಿರಿಯ ಪತ್ರಕರ್ತ ಡಾ. ಕೂಡ್ಲಿ ಗುರುರಾಜ್, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ರಾಜ್ಯ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಬಿ. ರಾಘವೇಂದ್ರ, ಹಿರಿಯ ಪತ್ರಕರ್ತರು ಪಾಲ್ಗೊಂಡಿದ್ದರು.

ಮೈಸೂರಿನಲ್ಲಿ ಗ್ರಾಮ ಡಿಜಿ ವಿಕಸನಕ್ಕೆ ಚಾಲನೆ

ಮೈಸೂರು, ಆ.25(ಜಿಎ)– ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆ ಮತ್ತು ಶಿಕ್ಷಣ ಸಂಸ್ಥೆ ಸಹಯೋಗದೊಂದಿಗೆ 'ಗ್ರಾಮ ಡಿಜಿ ವಿಕಸನ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಮೈಸೂರು ಜಿಪಂನ ಅರಸು ಸಭಾಂಗಣದಲ್ಲಿ ಆಯೋಜಿಸಿದ ಡಿಜಿ ವಿಕಸನ ಪರಿಚಯ ಕಾರ್ಯಕ್ರಮವನ್ನು ಜಿಪಂ ಸಿಇಓ ಪೂರ್ಣಿಮಾ ಅವರು ಮೈಸೂರು ಜಿಲ್ಲೆಯಲ್ಲಿ ಆಯ್ಕೆಗೊಂಡಿರುವ ಗ್ರಾಮ ಪಂಚಾಯಿತಿಗಳಿಗೆ ಪರಿಕರಗಳನ್ನು ನೀಡುವ ಮೂಲಕ ಗುರುವಾರ ಉದ್ಘಾಟಿಸಿದರು. 'ಗ್ರಾಮ ಡಿಜಿ ವಿಕಸನ' ಕಾರ್ಯ ಕ್ರಮವನ್ನು ಕಳೆದ ಮಾರ್ಚ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ಮೊದಲ ಹಂತದಲ್ಲಿ 1000 ಗ್ರಾಪಂಗಳಲ್ಲಿ ಗ್ರಾಮ ಡಿಜಿ ವಿಕಸನವನ್ನು ಅನುಷ್ಠಾನಕ್ಕೆ ಚಾಲನೆ ನೀಡಿದರು. ಅದರಂತೆ ಮೈಸೂರು ಜಿಲ್ಲೆಯ 29 ಗ್ರಾಪಂಗಳನ್ನು ಮೊದಲ ಹಂತದಲ್ಲಿ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಅವರು ಸೂಚಿಸಿದ ಗ್ರಾಪಂಗಳನ್ನು ಆಯ್ಕೆ ಮಾಡಿಕೊಂಡು ಗ್ರಾಮ ಡಿಜಿ ವಿಕಸನ ಕಾರ್ಯಕ್ರಮದ ಪೂರಕವಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಟಿ.ವಿ, ನಾಲ್ಕು ಮೊಬೈಲ್ ಮತ್ತು 9 ಪಂಚಾಯಿತಿಗಳಿಗೆ ಅಂತರ್ಜಾಲ ಸಂಪರ್ಕವನ್ನು ನೀಡಲಾಗಿದೆ.



ಇಂದು ಮೈಸೂರು ಜಿಲ್ಲೆಯಲ್ಲಿ ಆಯ್ಕೆಗೊಂಡಿರುವ ಹೆಚ್.ಡಿ.ಕೋಟೆ, ಹುಣಸೂರು, ಸರಗೂರು, ಕೆ.ಆರ್.ನಗರ, ಮೈಸೂರು, ನಂಜನಗೂಡು, ಪಿರಿಯಾಪಟ್ಟಣ ಹಾಗೂ ಟಿ.ನರಸೀಪುರಕ್ಕೆ ಒಳಗೊಂಡಿರುವ 29 ಗ್ರಾಮ ಪಂಚಾಯತಿಯ ಪಿಡಿಓಗಳು ಮತ್ತು ಗ್ರಂಥಪಾಲಕರಿಗೆ ಗ್ರಾಮ ಡಿಜಿ ವಿಕಸನ ಕಾರ್ಯಕ್ರಮದ ಪರಿಚಯವನ್ನು ಮಾಡಿಕೊಡಲಾಯಿತು. ಹಾಗೂ ಅವರಿಂದಲೂ ಅನುಷ್ಠಾನ ಮಾಡಲು ಅಗತ್ಯ ಸಲಹೆ , ಸಹಕಾರ , ಮಾರ್ಗದರ್ಶನವನ್ನು ಪಡೆದುಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಪ್ರೇಮ್ ಕುಮಾರ್, ಶಿಕ್ಷಣ ಫೌಂಡೇಷನ್‌ನ ಮೈಸೂರು ಜಿಲ್ಲಾ ನಿರ್ವಾಹಕ ಅರುಣಕಾಂತ ಮತ್ತು ಪುಟ್ಟ ಮಾದಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಡಿ.ಆರ್. ಚಂದ್ರಿಕಾ ನಿಧನ



ಮೈಸೂರು, ಆ.25– ಮೈಸೂರು ಶ್ರೀರಾಂಪುರ ನಿವಾಸಿ ಹಾಗೂ ಕೆನರಾ ಬ್ಯಾಂಕ್ ನಿವೃತ್ತ ಉದ್ಯೋಗಿ ಶ್ರೀಮತಿ ಡಿ.ಆರ್. ಚಂದ್ರಿಕಾ ಅವರು ಬುಧವಾರ ನಿಧನರಾದರು. ಮೃತರು ಪತಿ ಬೆಮೆಲ್ ಕಾರ್ಖಾನೆಯ ನಿವೃತ್ತ ಇಂಜಿನಿಯರ್ ಬಿ.ಆರ್. ಚಂದ್ರಶೇಖರ್ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅಂದೇ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಯಿಷ್‌ನಲ್ಲಿ 3 ದಿನಗಳ ಅಂತಾರಾಷ್ಟ್ರೀಯ ಶ್ರವಣಶಾಸ್ತ್ರ ಸಮ್ಮೇಳನಕ್ಕೆ ಚಾಲನೆ

ಆರಂಭದಲ್ಲಿಯೇ ಮಕ್ಕಳ ಶ್ರವಣದೋಷ ಗುರುತಿಸುವಿಕೆ ತುರ್ತು ಅಗತ್ಯವಿದೆ

ವಿಕಲಚೇತನರ ರಾಜ್ಯ ಆಯುಕ್ತೆ ಕೆ.ಎಸ್.ಲತಾಕುಮಾರಿ ಅಭಿಮತ

ಮೈಸೂರು, ಆ.25(ಆರ್‌ಕೆಬಿ)– ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ (ಆಯಿಷ್) ಮೂರು ದಿನಗಳ ಐಎಎಲ್‌ಪಿ (ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಆಫ್ ಕಮ್ಯುನಿಕೇಷನ್ ಸೈನ್ಸಸ್ ಅಂಡ್ ಡಿಸಾರ್ಡರ್ಸ್) ಅಂತಾರಾಷ್ಟ್ರೀಯ ಶ್ರವಣ ಶಾಸ್ತ್ರ ಸಮ್ಮೇಳನ ಗುರುವಾರ ಆಯಿಷ್ ಸಂಸ್ಥೆಯ ಸಭಾಂಗಣದಲ್ಲಿ ನೆರವೇರಿತು.

'ವಾಕ್ ಮತ್ತು ಶ್ರವಣದೋಷವುಳ್ಳ ವ್ಯಕ್ತಿಗಳ ಅಂಗವೈಕಲ್ಯ ಪ್ರಮಾಣೀಕರಣ' ಕುರಿತ ಈ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿದ ರಾಜ್ಯ ವಿಕಲಚೇತನರ ರಾಜ್ಯ ಆಯುಕ್ತೆ ಕೆ.ಎಸ್. ಲತಾಕುಮಾರಿ ಮಾತನಾಡಿ, ಶ್ರವಣ ದೋಷದ ಆರಂಭಿಕ ಗುರುತಿಸುವಿಕೆ ಮತ್ತು ಚಿಕಿತ್ಸಾ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ಶ್ರವಣ ದೋಷವು ಮಗುವಿನ ಮಾತು ಮತ್ತು ಭಾಷೆಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುವುದಲ್ಲದೆ ಮಗುವಿನ ಸಾಮಾಜಿಕ, ಶೈಕ್ಷಣಿಕ ಮತ್ತು ವ್ಯಕ್ತಿತ್ವದ ಬೆಳವಣಿಗೆಗೂ ಅಡ್ಡಿಯಾಗುತ್ತದೆ. ಶ್ರವಣದೋಷವುಳ್ಳ ಮಗುವಿಗೆ ಆರಂಭಿಕ ಗುರುತಿಸುವಿಕೆ ಮತ್ತು ಮಧ್ಯಸ್ಥಿಕೆ ಕಾರ್ಯಕ್ರಮಗಳು ಯಾವ ಮಕ್ಕಳಿಗೆ ಬೆಳವಣಿಗೆಯ ತೊಂದರೆಗಳನ್ನು ಹೊಂದಿವೆ ಎಂಬುದನ್ನು ನಿರ್ಧರಿಸುವುದು. ಕೆಲವೊಮ್ಮೆ ಅವರ ಕಲಿಕೆಗೆ ಅಡೆತಡೆಗಳಾಗಿ ಪರಿಣಮಿಸಬಹುದು ಅಥವಾ ಮಕ್ಕಳನ್ನು ಅಪಾಯಕ್ಕೆ ತಳ್ಳಬಹುದು ಎಂದು ಹೇಳಿದರು. ಆರಂಭಿಕ ಗುರುತಿಸುವಿಕೆಯು ಮಗುವಿನ ಭಾಷಾ ಬೆಳವಣಿಗೆ ಮತ್ತು ಕಲಿಕೆಗಾಗಿ ಸಂವಹನ ಕೌಶಲ್ಯಗಳನ್ನು ಹೆಚ್ಚಿಸಲು ಭಾಷೆ ಮತ್ತು ಸಂವಹನ ವಿಳಂಬಗಳನ್ನು ತಡೆಯುತ್ತದೆ ಮತ್ತು ಕಡಿಮೆ ಮಾಡುತ್ತದೆ. ಶ್ರವಣದೋಷವುಳ್ಳ ಅಸಾಮರ್ಥ್ಯದಲ್ಲಿ ಆರಂಭಿಕ ಗುರುತಿಸುವಿಕೆ ಮತ್ತು ಹಸ್ತಕ್ಷೇಪವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.





ಮೈಸೂರಿನ ಆಯಿಷ್‌ನಲ್ಲಿ 'ವಾಕ್ ಮತ್ತು ಶ್ರವಣದೋಷವುಳ್ಳ ವ್ಯಕ್ತಿಗಳ ಅಂಗವೈಕಲ್ಯ ಪ್ರಮಾಣೀಕರಣ' ಕುರಿತ ಮೂರು ದಿನಗಳ ಅಂತಾರಾಷ್ಟ್ರೀಯ ಶ್ರವಣಶಾಸ್ತ್ರ ಸಮ್ಮೇಳನಕ್ಕೆ ವಿಕಲಚೇತನರ ರಾಜ್ಯ ಆಯುಕ್ತೆ ಕೆ.ಎಸ್.ಲತಾಕುಮಾರಿ ಚಾಲನೆ ನೀಡಿ, ಮಾತನಾಡಿದರು. ಚಿತ್ರದಲ್ಲಿ ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಅವರನ್ನು ಕಾಣಬಹುದು.

ಸೇವೆಗಳ ಅಗತ್ಯವಿರುವ ಚಿಕ್ಕ ಮಕ್ಕಳನ್ನು ಸಾಧ್ಯವಾದಷ್ಟು ಬೇಗ ಗುರುತಿಸುವ ತುರ್ತು ಅಗತ್ಯವಿದೆ ಎಂದು ತಿಳಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೈಸೂರು, ಹಾಸನ, ಮಂಡ್ಯ, ಮಂಗಳೂರು, ಕೊಡಗು, ರಾಯಚೂರು, ಶಿವಮೊಗ್ಗ, ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳನ್ನು ಸ್ಥಾಪಿಸಿದೆ. ಇದನ್ನು ಇತರ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು ಎಂದು ಹೇಳಿದರು.

ದೇಶದಲ್ಲಿ ಇಷ್ಟು ದೊಡ್ಡ ಸಂಖ್ಯೆಯ ಶ್ರವಣ ದೋಷಗಳೊಂದಿಗೆ, ಶ್ರವಣಶಾಸ್ತ್ರವು ಹೆಚ್ಚು ಮಹತ್ವ ಪಡೆದಿದೆ. ಆಯಿಷ್ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದೆ. ಶ್ರವಣ ವಿಜ್ಞಾನ ಮತ್ತು ಭಾಷಣ–ಭಾಷಾ ರೋಗಶಾಸ್ತ್ರ ಕ್ಷೇತ್ರದಲ್ಲಿ ವಿಶ್ವ ದರ್ಜೆಯ ಕ್ಲಿನಿಕಲ್ ಸೇವೆಗಳನ್ನು ಒದಗಿಸುತ್ತಿದೆ. ಕಳೆದ ಐದು ದಶಕಗಳಲ್ಲಿ, ಆಯಿಷ್‌ನಿಂದ ಪದವಿ ಪಡೆದ ಹಲವಾರು ಶ್ರವಣಶಾಸ್ತ್ರಜ್ಞರು ಮತ್ತು ವಾಕ್–ಭಾಷಾ ರೋಗಶಾಸ್ತ್ರಜ್ಞರು ಪ್ರಪಂಚದಾದ್ಯಂತ ಆರೋಗ್ಯ ಕ್ಷೇತ್ರದಲ್ಲಿ ವೃತ್ತಿಯ ಪ್ರಾಮುಖ್ಯತೆಯನ್ನು ಹರಡಿದ್ದಾರೆ ಎಂದು ತಿಳಿಸಿದರು.

ವಿಕಲಾಂಗತೆಗಳ ಪ್ರಮಾಣೀಕರಣ ಪ್ರಕ್ರಿಯೆಯಲ್ಲಿ ನಮಗೆ ಹೆಚ್ಚಿನ ಸಂಖ್ಯೆಯ ವೈದ್ಯಕೀಯ ವೃತ್ತಿಪರರು ಮತ್ತು ತಂತ್ರಜ್ಞರ ಅಗತ್ಯವಿದೆ ಎಂದ ಅವರು, ಈ ಕಾರ್ಯದಲ್ಲಿ ಆಯಿಷ್ ರಾಜ್ಯ ಸರ್ಕಾರದೊಂದಿಗೆ ಸಹಕರಿಸುತ್ತಿದೆ ಎಂದರು. ಆಡಿಯಾಲಜಿ ಮತ್ತು ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥೋಲಜಿ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಮತ್ತು ವೃತ್ತಿಪರರು ಸೇರಿದಂತೆ ಮೂರು ದಿನಗಳ ಸಮ್ಮೇಳನಕ್ಕೆ 300ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದಾರೆ. ಐಎಎಲ್‌ಪಿ ಶ್ರವಣಶಾಸ್ತ್ರ ಸಮಿತಿಯ ಅಧ್ಯಕ್ಷ ಆರ್.ರಂಗಾಯಿ ಮುಖ್ಯ ಅತಿಥಿಯಾಗಿದ್ದರು. ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಅಧ್ಯಕ್ಷತೆ ವಹಿಸಿದ್ದರು.

ಸಾಲ ಕೊಡುವ 2 ಸಾವಿರ ಆಪ್ ತೆಗೆದು ಹಾಕಿದ ಗೂಗಲ್

ನವದೆಹಲಿ, ಆ.25– ಗೂಗಲ್ ಕಂಪನಿಯು ಸಾಲ ಕೊಡುವ ಎರಡು ಸಾವಿರಕ್ಕೂ ಹೆಚ್ಚು ಆ್ಯಪ್‌ಗಳನ್ನು ಭಾರತದ ಪ್ಲೇಸ್ಟೋರ್‌ನಿಂದ ಈ ವರ್ಷ ತೆಗೆದುಹಾಕಿದೆ.

ನಿಯಮ ಉಲ್ಲಂಘನೆ, ಮಾಹಿತಿಯನ್ನು ತಪ್ಪಾಗಿ ನೀಡಿದ್ದು ಹಾಗೂ ಆಫ್‌ಲೈನ್ ವರ್ತನೆ ಪ್ರಶ್ನಾರ್ಹವಾಗಿ ಇದ್ದಿದ್ದು ಈ ಕ್ರಮಕ್ಕೆ ಕಾರಣ ಎಂದು ಕಂಪನಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಾಲ ಕೊಡುವ ಆ್ಯಪ್‌ಗಳಿಂದ ಉಂಟಾದ ಸಮಸ್ಯೆಯು ಇನ್ನು ಮುಂದೆ ಕಡಿಮೆ ಆಗಬಹುದು. ಏಕೆಂದರೆ ಈ ಸಮಸ್ಯೆ ಬಗ್ಗೆ ಬಹಳ ಜನರ ಗಮನ ಹರಿದಿದೆ ಎಂದು ಗೂಗಲ್ ಕಂಪನಿಯ ಏಷ್ಯಾ ಪೆಸಿಫಿಕ್ ಪ್ರದೇಶದ ಹಿರಿಯ ಅಧಿಕಾರಿ ಸೈಕತ್ ಮಿತ್ರಾ ಹೇಳಿದ್ದಾರೆ.

ಲಂಡನ್ ಸೈಕ್ಲಿಂಗ್ ರೈಡ್‌ನಲ್ಲಿ ಮೈಸೂರಿನ ಸೈಕ್ಲಿಸ್ಟ್ ಮಹೇಶ್ ಚೌದರಿ ವಿಶೇಷ ಸಾಧನೆ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸನ್ಮಾನ



ಮೈಸೂರು, ಆ.25(ಜಿಎ)– ಇತ್ತೀಚೆಗೆ ಲಂಡನ್‌ನಲ್ಲಿ ನಡೆದ 'ಲಂಡನ್–ಎಡಿನ್ ಬರ್ಗ್–ಲಂಡನ್ (ಎಲ್‌ಇಎಲ್) ಅಂತರಾಷ್ಟ್ರೀಯ ಸೈಕ್ಲಿಂಗ್ ರೈಡ್‌ನಲ್ಲಿ ಮೈಸೂರಿನಿಂದ ರಾಮಕೃಷ್ಣ ನಗರದ ನಿವಾಸಿ ಮಹೇಶ್ ಚೌದರಿ ಅವರು ಭಾಗವಹಿಸಿ ರೈಡ್ ಮುಗಿಸುವ ಮೂಲಕ ವಿಶೇಷ ಸಾಧನೆ ಮಾಡಿದ್ದಾರೆ.

ಮಹೇಶ್ ಚೌದರಿ ಅವರನ್ನು ಮೈಸೂರಿನ ಸಿನರ್ಜಿ ಫಿಟ್‌ನೆಸ್ ಕೇಂದ್ರ, ಎಂಸಿಟಿ, ಸೈಕ್ಲೋಪೀಡಿಯಾ ಮತ್ತು ಮೈಸೂರು ಸೈಕ್ಲಿಂಗ್ ಟ್ರೈನಿಂಗ್ ಅಕಾಡೆಮಿ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಸನ್ಮಾನಿಸಲಾಯಿತು. ಪಂದ್ಯಾವಳಿಯು ಸೈಕ್ಲಿಂಗ್ ಕೌಶಲ್ಯದ ಜೊತೆಗೆ ತಾಳ್ಮೆ ಮತ್ತು ನಿರ್ಣಯದ ಪರೀಕ್ಷೆಯಾಗಿದೆ. ಆ.7 ರಿಂದ 12 ವರಗೂ ನಡೆದ ರೈಡ್‌ನಲ್ಲಿ ಪ್ರಪಂಚದಾದ್ಯಂತದ ಸುಮಾರು 1900 ಸೈಕ್ಲಿಸ್ಟ್‌ಗಳು ಅಂತರಾಷ್ಟ್ರೀಯ ಸೈಕ್ಲಿಂಗ್ ರೈಡ್‌ನಲ್ಲಿ ಭಾಗವಹಿಸಿದ್ದು, ಮೈಸೂರಿನಿಂದ ಮಹೇಶ್ ಚೌದರಿ ಅವರು ಭಾಗಹಿಸಿದ್ದರು. ಸೈಕ್ಲಿಂಗ್ ರೈಡ್ ಅನ್ನು 1540 ಕಿಲೋಮೀಟರ್ ಪ್ರಯಾಣಿಸಬೇಕಿತ್ತು. ಇದನ್ನು 128 ಗಂಟೆಗಳಲ್ಲಿ ಸಾಧಿಸಬೇಕಿತ್ತು. ಮಹೇಶ್ ಅವರು 110 ಗಂಟೆ 54 ನಿಮಿಷಗಳಲ್ಲಿ ರೈಡ್ ಮುಗಿಸುವ ಮೂಲಕ ಮೈಸೂರಿಗೆ ಹೆಮ್ಮೆ ತಂದಿದ್ದಾರೆ. ಕಾರ್ಯಕ್ರಮದಲ್ಲಿ ಜಿಎಸ್‌ಟಿ ಉಪ ಆಯುಕ್ತ ರಮೇಶ್ ನರಸಯ್ಯ, ಮೈಸೂರು ಗ್ರಂಥಾಲಯ ಉಪನಿರ್ದೇಶಕ ಬಿ.ಮಂಜುನಾಥ್, ಸಿನರ್ಜಿ ಫಿಟ್‌ನೆಸ್ ಕೇಂದ್ರ ಶ್ಯಾಂ, ಸೈಕ್ಲೋಪೀಡಿಯಾದ ಲೋಕೇಶ್, ಮೈಸೂರು ಸೈಕ್ಲಿಂಗ್ ಟ್ರೈನಿಂಗ್ ಅಕಾಡೆಮಿಯ ನಾಗರಾಜ್, ಮೈಸೂರು ಸೈಕ್ಲಿಂಗ್ ತಂಡದ ಮನುಗೌಡ, ಅಶೋಕ್, ವೀಣಾ ಅಶೋಕ್ ಸೇರಿದಂತೆ ಮತ್ತಿತರರಿದ್ದರು.

ಗೌರಿ–ಗಣೇಶ ಹಬ್ಬದ ಅಂಗವಾಗಿ ನೂರಾರು ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ



ಮೈಸೂರು, ಆ.25(ಆರ್‌ಕೆಬಿ)– ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ಗೌರಿ ಗಣೇಶ ಹಬ್ಬದ ಅಂಗವಾಗಿ ಕಾಮಾಕ್ಷಿ ಆಸ್ಪತ್ರೆ ವತಿಯಿಂದ ಗುರುವಾರ ನೂರಾರು ಆಟೋ ಚಾಲಕರಿಗೆ ಸಮವಸ್ತ್ರವನ್ನು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಶೆಣೈ ವಿತರಿಸಿದರು.

ಆಸ್ಪತ್ರೆಯ ಆವಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಮವಸ್ತ್ರ ವಿತರಿಸಿ ಮಾತನಾಡಿದ ಅವರು, ಹಗಲು ರಾತ್ರಿ ಎನ್ನದೇ ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಆಟೋ ಚಾಲಕರ ಸೇವೆಗೆ ಬೆಲೆ ಕಟ್ಟಲಾಗದು. ಮಧ್ಯರಾತ್ರಿಯಲ್ಲೂ ದೂರದ ಊರುಗಳಿಂದ ಬರುವ ಜನರನ್ನು ಸುರಕ್ಷಿತವಾಗಿ ಅವರ ಮನೆ ಬಾಗಿಲಿಗೆ ತಲುಪಿಸುವ ಕಾಯಕ ಮಾಡುತ್ತಿದ್ದಾರೆ ಎಂದು ಚಾಲಕರ ಕಾರ್ಯವನ್ನು ಶ್ಲಾಘಿಸಿದರು. ಬಿಜೆಪಿ ಮುಖಂಡ ಯಶಸ್ವಿನಿ ಸೋಮಶೇಖರ್ ಮಾತನಾಡಿ, ಬ್ರಿಟಿಷರ ವಿರುದ್ಧ ಇಡೀ ಸಮಾಜವನ್ನು ಜಾಗೃತಗೊಳಿಸಲು ಲೋಕಮಾನ್ಯ ಬಾಲಗಂಗಾಧರ ತಿಲಕರು ಸಾರ್ವಜನಿಕ ಗಣೇಶೋತ್ಸವವನ್ನು ಆರಂಭಿಸಿದರು. ಚದುರಿ ಹೋದ ಸಮಾಜವನ್ನು ಧಾರ್ಮಿಕವಾಗಿಯೂ ಸಂಘಟಿಸಬಹುದು ಎಂದು ತೋರಿಸಿಕೊಟ್ಟರು. ಜನರನ್ನು ಸಮಾಜಮುಖಿಯನ್ನಾಗಿಸುವುದಕ್ಕೆ ಸಾರ್ವಜನಿಕ ಗಣೇಶೋತ್ಸವ ಅತ್ಯುತ್ತಮ ಮಾರ್ಗ ಎಂಬುದನ್ನು ತೋರಿಸಿಕೊಟ್ಟರು. ಬಹುತೇಕ ಹಬ್ಬ ಹರಿದಿನಗಳು ವ್ಯಕ್ತಿಗತವಾಗಿ ಕುಟುಂಬಕ್ಕೆ ಸೀಮಿತವಾಗಿ ಆಚರಿಸಲ್ಪಡುತ್ತವೆ. ಆದರೆ ಕೆಲವೊಂದು ಧಾರ್ಮಿಕ ಆಚರಣೆಗಳನ್ನು ಸಾಮೂಹಿಕವಾಗಿ ಆಚರಿಸಿದರೆ ಅದರಿಂದ ಸಮಾಜಕ್ಕೊಂದು ಅದ್ಭುತ ಶಕ್ತಿ ಲಭಿಸುತ್ತದೆ. ಅದು ರಾಷ್ಟ್ರಶಕ್ತಿಯಾಗಿ ಪರಿವರ್ತನೆಯಾಗುತ್ತದೆ. ಆ ಮೂಲಕ ಭಾರತ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ಮೇಲೆದ್ದು ನಿಲ್ಲಲು ಸಾಧ್ಯವಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಅಖಿಲೇಶ್, ಬಿಜೆಪಿ ಮುಖಂಡರಾದ ಪರಮೇಶ್‌ಗೌಡ, ವಿಕ್ರು ಅಯ್ಯಂಗಾರ್, ಅಜಯ್ ಶಾಸ್ತ್ರಿ, ಹರೀಶ್ ನಾಯ್ಡು, ಗಣೇಶ್, ಶ್ಯಾಮ್, ಆಟೋ ಚಾಲಕರಾದ ಅಶ್ವಥ್, ಮನು, ಪ್ರದೀಪ್, ನವೀನ್, ಮಹದೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.08.2022 ಶುಕ್ರವಾರ, ಮಳೆ ನಕ್ಷತ್ರ : ಮಖೆ, 17.08.2022 ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ : ಆಶ್ಲೇಷ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ, ಗಾಯನ– ದೀಪಿಕಾ ಪಾಂಡುರಂಗಿ, ಪಿ. ಸುರಭಿ, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 10.00 ಡಾ.ಮೈಸೂರ್ ಎಂ.ಮಂಜುನಾಥ್ – ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾ ರಂಗ–ಸಖೀಪದ, ಪ್ರಸ್ತುತಿ–ಎಂ.ಎಸ್. ಭಾರತಿ, 4.30 ವೃತ್ತಿ ಮಾಗದರ್ಶನ–ಕೃಷಿ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಎಸ್.ಎಸ್. ಪ್ರಕಾಶ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಮಣ್ಣಿನ ಸಂರಕ್ಷಣೆಯ ಪ್ರಾಮುಖ್ಯತೆ ಕುರಿತು ಡಾ.ಎಸ್.ಎಸ್. ಪ್ರಕಾಶ್ ಅವರೊಡನೆ ಸಂದರ್ಶನ, 9.00 ಸಂಧ್ಯಾರಾಗ–ಹಿರಿಯ ರಂಗ ಕಲಾವಿದೆ ಶ್ರೀಮತಿ ಹರಿಪ್ರಸಾದ್ ಅವರೊಂದಿಗೆ ಮಾತುಕತೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು :** ಸ್ತನ್ಯಪಾನದ ಬಗ್ಗೆ ರಾಷ್ಟ್ರೀಯ ಸಿಎಂಇ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮಕ್ಕಳ ಆರೋಗ್ಯ ಮತ್ತು ಪಿಸಿಪಿಎನ್‌ಡಿಟಿ ಸಹಾಯಕ ನಿರ್ದೇಶಕ ಡಾ. ಬಸವರಾಜ ದಬಾಡಿ, ಅಧ್ಯಕ್ಷತೆ : ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಿನ್ಸಿಪಾಲ್ ಡಾ. ಹೆಚ್. ಬಸವನಗೌಡಪ್ಪ, ವಿಶೇಷ ಆಹ್ವಾನಿತರು : ಡಾ. ಕೆ.ಹೆಚ್. ಪ್ರಸಾದ್, ಡಾ. ಎಂ.ಎಸ್. ಜಯಂತ್, ಸ್ಥಳ: ಗ್ಯಾಲರಿ–6, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಬೆಳಗ್ಗೆ 9.30ಕ್ಕೆ.

■ **ಮೈಸೂರು ಮಕ್ಕಳ ಕೂಟ, ಎಸ್‌ಡಿಎಂ–ಎಂಎಂಕೆ ಮಹಿಳಾ ಮಹಾವಿದ್ಯಾಲಯ :** ವಾರ್ಷಿಕೋತ್ಸವ ಸಮಾರಂಭ, ಅಧ್ಯಕ್ಷತೆ : ಎಸ್‌ಡಿಎಂಇ ಸೊಸೈಟಿ, ಉಜಿರೆ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ಮುಖ್ಯ ಅತಿಥಿಗಳು : ಅನಿತಾ ಸುರೇಂದ್ರ ಕುಮಾರ್, ಉಪಸ್ಥಿತರು : ಬಾಲಕಿಯರ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಪ್ರೊ. ನಯನಕುಮಾರಿ, ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿ ವಿ. ರಜಿತಾ, ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ಮಹಾರಾಜ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಉದ್ಘಾಟನೆ : ಚಲನಚಿತ್ರ ನಟ ಶ್ರೀನಿ, ಮುಖ್ಯ ಅತಿಥಿಗಳು : ಮುಡಾ ಕಾರ್ಯದರ್ಶಿ ಡಾ. ಎನ್.ಸಿ. ವೆಂಕಟರಾಜು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಅನಿಟ ವಿಮ್ಲ ಬ್ರ್ಯಾಗ್ಸ್, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಜಿ.ಎಚ್.ನಾಗರಾಜು, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ. ಷಹಸೀನಾಬೇಗಂ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ, ರಾಸೇಯೋ, ಕ್ರೀಡೆ, ರೆಡ್ ಕ್ರಾಸ್, ಉದ್ಯೋಗ ಮಾಹಿತಿ ಕೋಶ ರೇಂಜರ್ಸ್ ಸಮಿತಿಗಳ ಚಟುವಟಿಕೆಗಳ ಸಮಾರೋಪ ಸಮಾರಂಭ, ಉದ್ಘಾಟನೆ : ಶಾಸಕ ಎಸ್.ಎ. ರಾಮದಾಸ್, ಸಮಾರೋಪ ನುಡಿ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ. ಎಂ.ಎಸ್. ಗಿರಿಧರರಾವ್, ಸಹಾಯಕ ಪೊಲೀಸ್ ಆಯುಕ್ತ ಎಚ್.ವಿ. ವೀರಣ್ಣ, ನಿವೃತ್ತ ಕುಲಸಚಿವ ಡಾ. ಸುಂದರ್‌ರಾಜ್ ಅರಸು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎನ್. ರಾಗಿಣಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಯುವರಾಜ ಕಾಲೇಜು :** 2021–22ನೇ ಸಾಲಿನ ಜ್ಞಾನವಾಹಿನಿಯ ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಬಿ.ಎನ್. ಯಶೋಧ, ಮುಖ್ಯ ಅತಿಥಿಗಳು : ಮಧ್ಯಪ್ರದೇಶದ ಇಂದೋರ್‌ನ ಕಸ್ತೂರಬಾ ಗಾಂಧಿ ನ್ಯಾಷನಲ್ ಮೆಮೋರಿಯಲ್ ಟ್ರಸ್ಟ್ ಟ್ರಸ್ಟಿ ಪ್ರೊ. ಜಿ.ಬಿ. ಶಿವರಾಜು, ನೃತ್ಯಗಿರಿ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ವಿದುಷಿ ಕೃಪಾ ಫಡ್ಕೆ, ಉಪಸ್ಥಿತರು : ಜಿ. ಕೃಷ್ಣಮೂರ್ತಿ, ಪ್ರೊ. ಹೆಚ್. ಸೋಮಶೇಖರಪ್ಪ, ಪ್ರೊ. ಕೆ.ಬಿ.ಉಮೇಶ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಪುಣ್ಯಕೋಟಿ ಸೇವಾ ಟ್ರಸ್ಟ್, ಐಶ್ವರ್ಯ ಫೌಂಡೇಷನ್, ವಿ.ಎನ್. ಡೆವಲಪರ್ಸ್ :** ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಪ್ರೊ. ಭಾಷ್ಯಂ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ, ಪಾಲಿಕೆ ಸದಸ್ಯ ಸುಬ್ಬಯ್ಯ, ಮುಖ್ಯ ಭಾಷಣ : ಡಾ. ಭೀಮರಾಜ್ ಈರೇಗೌಡ, ಅಧ್ಯಕ್ಷತೆ : ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿ. ಕಾಳಿಂಗು, ಸ್ಥಳ: ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಎದುರು, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ :** ಬೆಸ್ಕಾಂ ನಿವೃತ್ತ ನಿರ್ದೇಶಕ ವಿ. ವೆಂಕಟಸುಬ್ಬರಾವ್ ಅವರಿಂದ ವಿದ್ಯುತ್ ಕ್ಷೇತ್ರದಲ್ಲಿ ಹೊಸ ಸವಾಲುಗಳು ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ರಿಂದ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಯುಕ್ತ ಪಂಚರಾತ್ರೋತ್ಸವ ಕಾರ್ಯಕ್ರಮ, ಸಂಜೆ 6ರಿಂದ 7ರವರೆಗೆ ಆತನೂರಿನ ಪಂಡಿತ್ ಶ್ರೀ ಭೀಮಸೇನಾಚಾರ್ಯ ಅವರಿಂದ 'ಕೃಷ್ಣನ ಬಾಲಲೀಲೆಗಳು' ಕುರಿತು ವಿಶೇಷ ಪ್ರವಚನ, ಪ್ರತಿದಿನ ಸಂಜೆ 7 ಗಂಟೆಯಿಂದ ಶೇಷವಾಹನ ಉತ್ಸವ, ಗಜವಾಹನ ಉತ್ಸವ, ವಾಯು ವಾಹನ ಉತ್ಸವ, ಗರುಡೋತ್ಸವ ಹಾಗೂ ಮಹಾರಥೋತ್ಸವ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಟಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ರತ್ನಪುರಿಯಲ್ಲಿಂದು

■ **ಮಹಾಜನ ವಿದ್ಯಾಸಂಸ್ಥೆ, ರಾಜ್ಯ ಕಾನೂನು ವಿಶ್ವವಿದ್ಯಾಲಯ (ಹುಬ್ಬಳ್ಳಿ), ಎಸ್‌ಬಿಆರ್‌ಆರ್ ಮಹಾಜನ ಕಾಲೇಜು (ರಾಷ್ಟ್ರೀಯ ಸೇವಾ ಯೋಜನೆಯ ಘಟಕ):** ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾ ರಂಭ, ಅಧ್ಯಕ್ಷತೆ : ಶಾಸಕ ಹೆಚ್.ಪಿ. ಮಂಜುನಾಥ್, ಉಪಸ್ಥಿತರು : ಅಮರ್‌ದೀಪ್ ಗ್ಯಾಸ್ ಏಜೆನ್ಸಿ ಮಾಲೀಕ ಮೇಹುಲ್ ಬಿ. ಪಟೇಲ್, ವಕೀಲ ಹೆಚ್.ಎನ್. ಚಂದ್ರಶೇಖರ್, ಗ್ರಾಪಂ ಮಾಜಿ ಸದಸ್ಯ ಸ್ವಾಮಿ, ಸಮಾರೋಪ ಭಾಷಣ: ಲಯನ್ ಸಿ.ಆರ್. ದಿನೇಶ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ರತ್ನಪುರಿ, ಹುಣಸೂರು ತಾ., ಬೆಳಗ್ಗೆ 11ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 26 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 131 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಸೇರಿ ರಾಜ್ಯದಲ್ಲಿ

8 ವಿಶ್ವವಿದ್ಯಾನಿಲಯ ಸ್ಥಾಪನೆ



ರಾಜ್ಯ ಸಚಿವ ಸಂಪುಟ ಸಭೆ ಅನುಮತಿ

- ಈಗಾಗಲೇ ತಲಾ 2 ಕೋಟಿ ರೂ. ಅನುದಾನ ಬಿಡುಗಡೆ
- ನೂತನ ವಿವಿಗಳ ವ್ಯಾಪ್ತಿಯ ಕಾಲೇಜುಗಳ ಪಟ್ಟಿ
- ಗುಣಮಟ್ಟದ ಶಿಕ್ಷಣ ಎಲ್ಲರಿಗೂ ಕಲ್ಪಿಸುವ ಉದ್ದೇಶ



ಬೆಂಗಳೂರು, ಆ. 25 (ಕೆಎಂಶಿ)–ರಾಜ್ಯದಲ್ಲಿ 8 ನೂತನ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸೇರಿದ್ದ ರಾಜ್ಯ ಸಚಿವ ಸಂಪುಟ ಸಭೆ ಅನುಮತಿ ನೀಡಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ್, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ, ಹಾವೇರಿ, ಕೊಪ್ಪಳ, ಬಾಗಲಕೋಟೆ ಮತ್ತು ಬೀದರ್‌ನಲ್ಲಿ ವಿವಿಗಳು ಸ್ಥಾಪನೆಯಾಗಲಿವೆ ಎಂದರು.

ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಕರ್ನಾಟಕ ವಿವಿಗಳ ಕಾಯ್ದೆ 2000ಕ್ಕೆ ತಿದ್ದುಪಡಿಗೆ ಸಂಪುಟ ಸಮ್ಮತಿಸಿದೆ. ಈಗಾಗಲೇ ಈ ಜಿಲ್ಲೆಗಳಲ್ಲಿ ಸ್ನಾತಕೋತ್ತರ ಕೇಂದ್ರಗಳು ಆರಂಭವಾಗಿದ್ದು, ಅಲ್ಲಿಯೇ ವಿಶ್ವವಿದ್ಯಾಲಯ ಸ್ಥಾಪನೆಯಾಗಲಿವೆ.

ಯುಜಿಸಿ ನಿಯಮಾವಳಿಗಳ ಅಡಿಯಲ್ಲೇ ವಿವಿಗಳು ಸ್ಥಾಪನೆಯಾಗುತ್ತಿದ್ದು, ಪ್ರತಿ ವಿವಿ ಸ್ಥಾಪನೆಗೆ ಮೂಲಸೌಕರ್ಯ ಕಲ್ಪಿಸಲು ಯುಜಿಸಿ 20 ರಿಂದ 30 ಕೋಟಿ ರೂ. ಅನುದಾನ ನೀಡಲಿದೆ ಎಂದರು. ಹೊಸ ವಿವಿಗಳ ಪೈಕಿ ಕ್ರಮವಾಗಿ ಚಾಮರಾಜನಗರ ವಿವಿಯಲ್ಲಿ 18, ಹಾಸನ ವಿ.ವಿ.ಯಲ್ಲಿ 36, ಹಾವೇರಿ 40, ಬೀದರ್ 140, ಕೊಡಗು 24, ಕೊಪ್ಪಳ 40 ಮತ್ತು ಬಾಗಲಕೋಟೆ ವಿವಿಗಳು 71 ಕಾಲೇಜುಗಳನ್ನು ಹೊಂದಿರಲಿವೆ. ಇವುಗಳ ಜತೆಗೆ ಮಂಡ್ಯ ವಿವಿ ವ್ಯಾಪ್ತಿಗೆ ಆ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳು ಬರಲಿವೆ ಎಂದು ಅವರು ವಿವರಿಸಿದರು. ಮಂಡ್ಯ ವಿವಿ ಒಂದನ್ನು ಹೊರತುಪಡಿಸಿ ಮಿಕ್ಕ 7 ವಿವಿಗಳ ಆರಂಭವನ್ನು ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಇದಕ್ಕಾಗಿ ಈಗಾಗಲೇ ತಲಾ 2 ಕೋಟಿ ರೂ.ಗಳಂತೆ ಒಟ್ಟು 14 ಕೋಟಿ ರೂಪಾಯಿ ಒದಗಿಸಲಾಗಿದೆ. ಏಕೀಕೃತ ವಿವಿಯಾಗಿದ್ದ ಮಂಡ್ಯದ ಸರಕಾರಿ ಕಾಲೇಜನ್ನು ಪೂರ್ಣ ಪ್ರಮಾಣದ ವಿ.ವಿ.ಯಾಗಿ ಮಾಡುವ ತೀರ್ಮಾನವನ್ನು ಇತ್ತೀಚೆಗೆ ಕೈಗೊಳ್ಳಲಾಗಿತ್ತು ಎಂದು ಅವರು ವಿವರಿಸಿದರು. ಜಿಲ್ಲೆಗೊಂದು ವಿವಿ ಇರಬೇಕು ಎನ್ನುವುದು ಸರಕಾರದ ತೀರ್ಮಾನವಾಗಿದೆ. ಈ ಮೂಲಕ ಶೈಕ್ಷಣಿಕ ಅಸಮತೋಲನ ನಿವಾರಣೆ ಮಾಡಲಾಗುವುದು. ಜೊತೆಗೆ, ಯುವಜನರಿಗೆ ಮನೆ ಬಾಗಿಲಲ್ಲೇ ಗುಣಮಟ್ಟದ ಶಿಕ್ಷಣ ನೀಡುವ ಸದಾಶಯ ಇದರ ಹಿಂದಿದೆ ಎಂದು ಸಚಿವರು ಹೇಳಿದರು. ನೂತನ ವಿವಿಗಳ ಸ್ಥಾಪನೆಗೆ ಆರ್ಥಿಕ ಮತ್ತು ಯೋಜನಾ ಇಲಾಖೆಗಳು ಒಪ್ಪಿಗೆ ನೀಡಿವೆ.



ಸೆ.12ರಿಂದ ವಿಧಾನಮಂಡಲ ಮಳೆಗಾಲದ ಅಧಿವೇಶನ

- ಕೆಪಿಎಸ್‌ಸಿ, ಸಿ, ಡಿ ಗ್ರೂಪ್ ನೌಕರರಿಗೆ ಮೌಖಿಕ ಸಂದರ್ಶನವಿಲ್ಲ
- ಕೃಷಿ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ ವಿಸ್ತರಣೆ
- ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಭೂಮಿ ಸಾಗುವಳಿ ಮಾಡುವ ರೈತರು 'ಭೂಕಬಳಿಕೆದಾರರಲ್ಲ'

ಬೆಂಗಳೂರು, ಆ. 25(ಕೆಎಂಶಿ)–ರಾಜ್ಯ ವಿಧಾನಮಂಡಲ ಮಳೆಗಾಲದ ಅಧಿವೇಶನವನ್ನು ಸೆಪ್ಟೆಂಬರ್ 12ರಿಂದ ನಡೆಸಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಜೆ.ಸಿ.ಮಾಧುಸ್ವಾಮಿ, ಅಧಿವೇಶನ 15 ದಿನಗಳ ಕಾಲ ನಡೆಯಲಿದ್ದು, ಇದರಲ್ಲಿ ಹತ್ತು ದಿನ ಸರ್ಕಾರಿ ಕಾರ್ಯಕಲಾಪ ನಡೆಯಲಿದೆ. ಉಳಿದ ಐದು ದಿನ ಸರ್ಕಾರಿ ರಜೆ ಇರಲಿದೆ ಎಂದರು. ಕೆಪಿಎಸ್‌ಸಿಯಲ್ಲಿ, ಸಿ, ಡಿ ಗ್ರೂಪ್ ನೌಕರರ ನೇಮಕಾತಿ ಸಂದರ್ಭದಲ್ಲಿ ಮೌಖಿಕ ಸಂದರ್ಶನ ಇನ್ನು ಮುಂದೆ ಇರುವುದಿಲ್ಲ. ರಾಜ್ಯ ಸರ್ಕಾರ ಸಿ ಮತ್ತು ಡಿ ದರ್ಜೆ ನೌಕರರ ನೇಮಕಾತಿ ಸಂದರ್ಭದಲ್ಲಿ ಇದನ್ನು ಪಾಲನೆ ಮಾಡುತ್ತಿಲ್ಲ. ಕೆಪಿಎಸ್‌ಸಿ ಕಾಯ್ದೆಗೆ ತಿದ್ದುಪಡಿ ತಂದು ಈ ಮೌಖಿಕ ಸಂದರ್ಶನವನ್ನು ಈ ವರ್ಗದ ನೌಕರರ ನೇಮಕಾತಿ ಸಂದರ್ಭದಲ್ಲಿ ಕೈಬಿಡಲಾಗುವುದು ಎಂದರು. ರಾಜ್ಯದಲ್ಲಿ ಹೊಸತಾಗಿ 4244 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ರಾಜ್ಯ ಪ್ರಾರಂಭಿಸುತ್ತಿರುವ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಅನುದಾನ ದೊರೆಯುವುದಿಲ್ಲ. ಸೇನೆಯಲ್ಲಿ ಸೇವೆ ಸಲ್ಲಿಸುವಾಗಲೇ ಸೈನಿಕರು ಮೃತಪಟ್ಟರೆ ಅವರ ಕುಟುಂಬದ ಒಬ್ಬರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಹುದ್ದೆ ನೀಡಲು ಇಂದಿನ ಸಭೆ ಸಮ್ಮತಿಸಿದೆ. ರಾಜ್ಯದಲ್ಲಿ ಸೇವೆಯಲ್ಲಿದ್ದು, ಮೃತಪಟ್ಟವರ ಸಂಖ್ಯೆ 400 ಮಂದಿ ಇದ್ದು, ಅದರಲ್ಲಿ 200 ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ದೊರೆತಿದೆ. ಉಳಿದ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲಾಗುವುದು. ಇದುವರೆಗೂ ನೀಡುತ್ತಿದ್ದ ಇತರೆ ಸೌಲಭ್ಯ, ಇನ್ನು ಮುಂದೆ ನೀಡುವುದಿಲ್ಲ ಎಂದರು.

ಕೃಷಿ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ: ವಿದ್ಯಾನಿಧಿ ಯೋಜನೆಯಡಿ ರೈತರ ಮಕ್ಕಳಿಗೆ ಓದಲು ನೆರವು ನೀಡಲಾಗುತ್ತಿತ್ತು. ಇದನ್ನೇ ಇನ್ನು ಮುಂದೆ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸಲು ಸಂಪುಟ ▶ 8ನೇ ಪುಟಕ್ಕೆ

ಗುತ್ತಿಗೆದಾರರಿಂದ ಲಂಚ ಬೇಡಿಕೆ ಆರೋಪ

ಸಚಿವರು, ಶಾಸಕರ ವಿರುದ್ಧ ಪುರಾವೆ ನೀಡಿದರೆ ತನಿಖೆಗೆ ಸರ್ಕಾರದ ಅನುಮತಿ

ಸಂಪುಟ ಸಭೆ ನಂತರ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮಾಹಿತಿ

ಬೆಂಗಳೂರು, ಆ. 25 (ಕೆಎಂಶಿ)– ಗುತ್ತಿಗೆದಾರರಿಂದ ಲಂಚ ಪಡೆದಿರುವುದಕ್ಕೆ ಸಚಿವರು, ಶಾಸಕರ ವಿರುದ್ಧ ಪುರಾವೆ ದಾಖಲೆ ಒದಗಿಸಿದರೆ, ಅವರ ವಿರುದ್ಧ ತನಿಖೆಗೆ ಸರ್ಕಾರ ಅನುಮತಿ ನೀಡಲಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ಮಾಡಿದ್ದೇವೆ. ಅವರು ಮಾಡಿರುವ ಆರೋಪ ರಾಜ್ಯದ ಮಾನ ಹೋಗುವ ಪ್ರಶ್ನೆ, ಅವರು ಅಧಿಕೃತ ದಾಖಲೆ ನೀಡಿದರೆ ಒಳ್ಳೆಯದು. ಗಾಳಿಯಲ್ಲಿ ಗುಂಡು ಹೊಡೆಯುವುದನ್ನು ಬಿಟ್ಟು ಮುಖ್ಯಮಂತ್ರಿ ಮತ್ತು ಸರ್ಕಾರದ ಮೇಲೆ ಅನುಮಾನಗಳಿದ್ದರೆ, ಅವರು ನೇರವಾಗಿ ಲೋಕಾಯುಕ್ತಕ್ಕೆ ಇಲ್ಲವೇ ನ್ಯಾಯಾಲಯಕ್ಕೆ ಹೋಗಿ ತನಿಖೆಗೆ ಕೋರಲಿ ಎಂದರು. 224 ಶಾಸಕರೂ ಭ್ರಷ್ಟರು ಎಂದರೆ ಏನ್ ಅರ್ಥ. ಅವರ ಹತ್ರ ದಾಖಲೆ ಇದ್ದರೆ ಕೊಡಲಿ, ಸುಮ್ನೆ ಆರೋಪ ▶ 8ನೇ ಪುಟಕ್ಕೆ



ಸೆ.6ರಂದು ಮೈಸೂರು ಮೇಯರ್ ಚುನಾವಣೆ

ಅಂದೇ ಉಪ ಮೇಯರ್, ನಾಲ್ಕು ಸ್ಥಾಯಿ ಸಮಿತಿಗಳಿಗೂ ಆಯ್ಕೆ



ಮೈಸೂರು,ಆ.25(ಎಂಟಿವೈ)–ಮೈಸೂರು ಮಹಾನಗರ ಪಾಲಿಕೆಯ ನೂತನ ಮೇಯರ್ ಹಾಗೂ ಉಪ ಮೇಯರ್ ಆಯ್ಕೆ ಸೆ.6ರಂದು ನಡೆಯಲಿದೆ. ಅಂದು ಮಧ್ಯಾಹ್ನ 12ಕ್ಕೆ ಪಾಲಿಕೆ ಪ್ರಧಾನ ಕಚೇರಿಯಲ್ಲಿ ಮೇಯರ್, ಉಪಮೇಯರ್ ಸೇರಿದಂತೆ 4 ಸ್ಥಾಯಿ ಸಮಿತಿಗಳ ಚುನಾವಣೆ ನಡೆಸಲು ಸಮಯ ನಿಗದಿಯಾಗಿದೆ.

ಮೇಯರ್ ಚುನಾವಣಾಧಿಕಾರಿಯೂ ಆಗಿರುವ ಪ್ರಾದೇಶಿಕ ಆಯುಕ್ತ ವೈ.ಎಸ್.ಪ್ರಕಾಶ್, ಅಧಿಸೂಚನೆ ಹೊರಡಿಸಿದ್ದು, ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದಾರೆ. ಸೆ.6ರಂದು ಬೆಳಗ್ಗೆ 9ರಿಂದ 10ಗಂಟೆಯೊಳಗೆ ಮೇಯರ್ ಹಾಗೂ ಉಪಮೇಯರ್ ಚುನಾವಣೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದ್ದು, ಬಳಿಕ ನಾಮಪತ್ರ ಪರಿಶೀಲನೆ ಹಾಗೂ ನಾಮಪತ್ರ ಹಿಂಪಡೆಯಲು ಅವಕಾಶ ನೀಡಲಾಗುತ್ತದೆ. ಮಧ್ಯಾಹ್ನ 12 ಗಂಟೆಯ ನಂತರ ಚುನಾವಣಾ ಪ್ರಕ್ರಿಯೆ ಆರಂಭವಾಗಲಿದೆ. ಮೇಯರ್ ಹಾಗೂ ಉಪಮೇಯರ್ ಆಯ್ಕೆ ಪ್ರಕ್ರಿಯೆಯಲ್ಲಿ ಕೈ ಎತ್ತುವ ಮೂಲಕ ಮತ ಚಲಾಯಿಸಲಾಗುತ್ತದೆ. ಬಳಿಕ ನಾಲ್ಕು ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಜರುಗಲಿದೆ. ಸರ್ಕಾರ ಬುಧವಾರಷ್ಟೇ ಮೈಸೂರು ಮಹಾನಗರ ಪಾಲಿಕೆಯ ಮೇಯರ್ ▶ 8ನೇ ಪುಟಕ್ಕೆ

ಆಕಾಂಕ್ಷಿಗಳು

ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿರುವ ಹಿನ್ನೆಲೆಯಲ್ಲಿ ಮೂರು ಪಕ್ಷಗಳಿಂದಲೂ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ.


ಕಾಂಗ್ರೆಸ್‌ನಿಂದ ಶಾಂತಕುಮಾರಿ, ರೂಪಶ್ರೀ, ಶೋಭಾ ಸುನಿಲ್, ರಜನಿ ಅಣ್ಣಯ್ಯ ಮೇಯರ್ ಗದ್ದುಗೆ ಮೇಲೆ ಕಣ್ಣಿಟ್ಟಿದ್ದರೆ, ಬಿಜೆಪಿಯಿಂದ ಶಿವಕುಮಾರ್, ಬಿ.ವಿ.ಮಂಜುನಾಥ್, ಸುಬ್ಬಯ್ಯ ಹಾಗೂ ಜೆಡಿಎಸ್‌ನಿಂದ ಕೆ.ವಿ.ಶ್ರೀಧರ್, ಎಸ್.ಬಿ.ಎಂ. ಮಂಜು, ಎಂ.ಡಿ.ನಾಗರಾಜ್, ಪ್ರೇಮಾ ಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಭಾಗ್ಯ ಮಾದೇಶ್ ಮೇಯರ್ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.



ಕೆಆರ್‌ಎಸ್‌ನಲ್ಲಿ ಸುರಕ್ಷತೆ ಅನುಮಾನ; ಸಿಸಿ ಟಿವಿ ಕ್ಯಾಮರಾಗಳು ಕೆಟ್ಟಿವೆ, ಲೈಟ್‌ಗಳು, ಮೆಟಲ್ ಡಿಟೆಕ್ಟರ್‌ಗಳು, ಲಗೇಜ್ ಸ್ಕ್ಯಾನರ್‌ಗಳು ಹಾಳಾಗಿವೆ

ಈ ಬಾರಿ ಅದ್ದೂರಿ ದಸರಾ; ಜಲಾಶಯಕ್ಕೆ ಹರಿದು ಬರಲಿದೆ ಪ್ರವಾಸಿಗರ ದಂಡು: ಇನ್ನು ಎಚ್ಚರಗೊಳ್ಳದ ಅಧಿಕಾರಿ ವರ್ಗ





ಶ್ರೀರಂಗಪಟ್ಟಣ, ಆ.25(ವಿನಯ್ ಕಾರೇಕುರ)– ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾದ ತಾಲೂಕಿನ ಪ್ರಸಿದ್ಧ ಕೆಆರ್‌ಎಸ್ ಜಲಾಶಯಕ್ಕೆ ಸೂಕ್ತ ಭದ್ರತೆ ಇಲ್ಲದಂತಾಗಿದ್ದು, ಸಾರ್ವಜನಿಕರಲ್ಲಿ ಆತಂಕ ಎದುರಾಗಿದೆ. ಮಂಡ್ಯ ಜಿಲ್ಲೆಯ ಲಕ್ಷಾಂತರ ಹೆಕ್ಟೇರ್ ಕೃಷಿ ಭೂಮಿ, ಮೈಸೂರು, ಬೆಂಗಳೂರು ಸೇರಿದಂತೆ ವಿವಿಧ ನಗರಗಳಿಗೆ ಕುಡಿಯುವ ನೀರು ಪೂರೈಸುವ ಮೂಲಕ ಕೋಟ್ಯಾಂತರ ಜನರಿಗೆ ಆಸರೆಯಾಗಿರುವ ಕೆಆರ್‌ಎಸ್ ಜಲಾಶಯದಲ್ಲಿ ಇತ್ತೀಚಿನ ದಿನಗಳಲ್ಲಿ ಭದ್ರತೆ ಮರೀಚಿಕೆಯಾಗಿದ್ದು, ಆಡಳಿತ ವರ್ಗ, ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿದೆ.

1994ರಲ್ಲಿ ಶ್ರೀಲಂಕಾದ ಉಗ್ರ ಸಂಘಟನೆ ಎಲ್‌ಟಿಟಿಇ ಜಲಾಶಯ ಸ್ಫೋಟಿಸುವುದಾಗಿ ಬೆದರಿಕೆ ಹಾಕಿತ್ತು. ಈ ಹಿನ್ನೆಲೆಯಲ್ಲಿ ಅತೀ ಸೂಕ್ಷ್ಮ ಪ್ರದೇಶವೆಂದು ಘೋಷಿಸಿ, ಸರ್ಕಾರ ಜಲಾಶಯಕ್ಕೆ ಭಾರೀ ಭದ್ರತೆ ಒದಗಿಸಿತ್ತು ಅಲ್ಲದೇ ರಾಜ್ಯದಲ್ಲಿ ಎಲ್ಲೇ ಬೆದರಿಕೆ ಎದುರಾದರೂ ಜಲಾಶಯದಲ್ಲಿ ಕಟ್ಟೆಚ್ಚರ ವಹಿಸಲಾಗುತ್ತಿತ್ತು. ಅಲ್ಲದೇ ಕಳೆದ 4 ವರ್ಷಗಳ ಹಿಂದೆ ಜಲಾಶಯದ ಭದ್ರತೆಗಾಗಿ ಸಿ.ಸಿ.ಕ್ಯಾಮರಾ ಕೂಡ ಅಳವಡಿಸಲಾಗಿತ್ತು. ಸುರಕ್ಷತೆ ದೃಷ್ಟಿಯಿಂದ ಮೆಟಲ್ ಡಿಟೆಕ್ಟರ್, ಲಗೇಜ್ ಸ್ಕ್ಯಾನರ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಅವುಗಳೆಲ್ಲಾ ಈಗ ಕೆಲಸಕ್ಕೆ ಬಾರದವುಗಳಾಗಿವೆ.

ಸಿ.ಸಿ.ಕ್ಯಾಮರಾ, ಮೆಟಲ್ ಡಿಟೆಕ್ಟರ್ ಸ್ಥಗಿತ: ಭದ್ರತಾ ದೃಷ್ಟಿಯಿಂದ ಜಲಾಶಯದಲ್ಲಿ ಅಳವಡಿಸಿದ್ದ 80 ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳು ಕಳೆದ 6 ತಿಂಗಳಿಂದ ಕೆಟ್ಟು ನಿಂತಿವೆ. ಅಲ್ಲದೇ ಇವುಗಳ ಕಾರ್ಯ ನಿರ್ವಹಣೆಗಾಗಿ ಅಳವಡಿಸಲಾಗಿದ್ದ ಬ್ಯಾಟರಿಗಳು ಸಿಡಿಲು ಬಡಿದು ಸುಟ್ಟು ಹೋಗಿದ್ದರೂ, ನೀರಾವರಿ ಇಲಾಖೆ ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಆತ : "ಹೋಟೆಲ್‌ಗಳಿಗೆ ಹೋಗಿ ಕುಳಿತು ವೇಟರ್ ಬಳಿ ತಿಂಡಿಗೆ ಆರ್ಡರ್ ಮಾಡಿ ತಾಸುಗಟ್ಟಲೆ ಕಾಯುವಾಗ ಒಂದು ಪ್ರಶ್ನೆ ಎದುರಾಗುತ್ತದೆ."

ಈತ : "ಏನದು ಅಂಥ ಪ್ರಶ್ನೆ?"

ಆತ : "ನಿಜವಾದ ವೇಟರ್ ಯಾರು? ತಿಂಡಿ ತಂದುಕೊಟ್ಟವರಾ ಅಥವಾ ನಾವಾ....?

ಮೈಸೂರು ಮಿತ್ರ

ಶುಕ್ರವಾರ, 26 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಇಚ್ಛಾಶಕ್ತಿ, ನಿರ್ಧಾರ, ಸಾಧನೆ ಯಶಸ್ವಿ ಜೀವನದ ಸೂತ್ರಗಳು.

– ಅಲ್ಲಸ್ ಹಕ್ಸ್‌ಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮುಳ್ಳು ಇಲ್ಲದೆ ಗುಲಾಬಿ ಇಲ್ಲ, ನೋವು ಇಲ್ಲದೆ ಪ್ರೀತಿಯಿಲ್ಲ

ಶಿರಾ ಬಳಿ ಭೀಕರ ರಸ್ತೆ ಅಪಘಾತ: 9 ಮಂದಿ ಸಾವು

ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ, ಸರ್ಕಾರದಿಂದ ಗಾಯಾಳುಗಳಿಗೆ ಚಿಕಿತ್ಸೆ: ಸಿಎಂ ಬೊಮ್ಮಾಯಿ

ಬೆಂಗಳೂರು, ಆ.25– ತುಮಕೂರು ಜಿಲ್ಲೆಯ ಶಿರಾ ಬಳಿಯ ಕಳ್ಳಂಬೆಳ್ಳದಲ್ಲಿ ಗುರುವಾರ ನಸುಕಿನ ಜಾವ ಸಂಭವಿಸಿದ ಭೀಕರ ಅಪಘಾತದಲ್ಲಿ 9 ಮಂದಿ ಅಸುನೀಗಿದ್ದು, ಮೃತಪಟ್ಟವರ ಕುಟುಂಬಸ್ಥರಿಗೆ ಸರ್ಕಾರದಿಂದ ತಲಾ 5 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.



ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಈ ಬಗ್ಗೆ ಮಾತನಾಡಿದ ಅವರು, ರಸ್ತೆ ಅಪಘಾತದಲ್ಲಿ ಮೃತಪಟ್ಟವರೆಲ್ಲರೂ ರಾಯಚೂರು ಮೂಲದ ಬಡ ಕೂಲಿ ಕಾರ್ಮಿಕರಾಗಿದ್ದಾರೆ. ಘಟನೆ ತೀವ್ರ ದುಃಖ ತಂದಿದೆ. ಈಗಾಗಲೇ ಪ್ರಧಾನಮಂತ್ರಿಗಳು ಮೃತರ ಕುಟುಂಬಸ್ಥರಿಗೆ 2 ಲಕ್ಷ ರೂ. ಹಾಗೂ ಗಾಯಗೊಂಡವರ ಚಿಕಿತ್ಸೆಗೆ 50 ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ರಾಜ್ಯ ಸರ್ಕಾರ ವತಿಯಿಂದ 5 ಲಕ್ಷ ರೂಪಾಯಿ ಕೊಡಲು ನಿರ್ಧರಿಸಿದ್ದು, ಈ ಬಗ್ಗೆ ತುಮಕೂರು ಜಿಲ್ಲಾಧಿಕಾರಿ ಜೊತೆ ಮಾತನಾಡಿದ್ದೇನೆ ಎಂದರು. ಗಾಯಗೊಂಡವರ ಚಿಕಿತ್ಸೆಯ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರವೇ ಭರಿಸಲಿದೆ. ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ಕೊಡಿಸಲು ವ್ಯವಸ್ಥೆ ಮಾಡಲಾಗುತ್ತಿದ್ದು ಇಬ್ಬರನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು.

ಅಪಘಾತ ಹೇಗಾಯಿತು: ಇಂದು ನಸುಕಿನ ಜಾವ 4 ಗಂಟೆ ಸುಮಾರಿಗೆ ತುಮಕೂರು ಬಳಿ ರಾಷ್ಟ್ರೀಯ ಹೆದ್ದಾರಿ–48ನಲ್ಲಿ ಸಂಭವಿಸಿದ ಅಪಘಾತದಲ್ಲಿ ರಾಯಚೂರು ಮೂಲದ 9 ಕಾರ್ಮಿಕರು ಮೃತಪಟ್ಟಿದ್ದು, 14 ಮಂದಿ ಗಾಯಗೊಂಡಿದ್ದಾರೆ.


ರಾಷ್ಟ್ರೀಯ ಹೆದ್ದಾರಿ–48ರ ಬಾಲೇನಹಳ್ಳಿ ಗೇಟ್‌ನಲ್ಲಿ ಟ್ರಕ್‌ಗೆ ಕ್ರೂಸರ್ ಜೀಪ್ ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ ನಾಲ್ವರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸೇರಿದಂತೆ 9 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನು 14 ಮಂದಿ ಗಾಯಗೊಂಡಿದ್ದಾರೆ. ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಹಲವರು ಘಟನೆ ಬಗ್ಗೆ ಸಂತಾಪ ಸೂಚಿಸಿದ್ದು, ಪ್ರಧಾನಿ ಪರಿಹಾರವನ್ನು ಘೋಷಿಸಿದ್ದಾರೆ.

ಸಂತ್ರಸ್ತರೆಲ್ಲರೂ ಕೂಲಿ ಕಾರ್ಮಿಕರಾಗಿದ್ದು, ರಾಯಚೂರು ಜಿಲ್ಲೆಯ ಕುರಕುಂದ ಸೇರಿದಂತೆ ವಿವಿಧ ಗ್ರಾಮಗಳಿಂದ ಬಂದವರು. ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಉದ್ಯೋಗ ಅರಸಿ ಬೆಂಗಳೂರಿಗೆ ತೆರಳುತ್ತಿದ್ದರು. ಮೃತರನ್ನು ಚಾಲಕ ಕೃಷ್ಣಪ್ಪ, ಸುಜಾತ, ವಿನೋದ, ಲಕ್ಷ್ಮಿ ಎಂದು ಗುರುತಿಸಲಾಗಿದ್ದು, ಉಳಿದ ಐವರ ಗುರುತು ಪತ್ತೆಯಾಗಬೇಕಿದೆ. ಗಾಯಾಳುಗಳಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದ್ದು, ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಉಳಿದವರನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಜಿಲ್ಲಾಧಿಕಾರಿ ವೈಎಸ್ ಪಾಟೀಲ್, ಪೊಲೀಸ್ ವರಿಷ್ಠಾಧಿಕಾರಿ ರಾಹುಲ್‌ಕುಮಾರ್ ಶಹಾಪುರವಾಡ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಟ್ರಕ್‌ನ್ನು ಹಿಂದಿಕ್ಕುವ ಯತ್ನದಲ್ಲಿ ಕ್ರೂಸರ್ ಚಾಲಕ ಅಪಘಾತ ಪೀಡಿತ ವಲಯ ಎಂದು ಹೇಳಲಾದ ತಿರುವಿನಲ್ಲಿ ನಿಯಂತ್ರಣ ಕಳೆದುಕೊಂಡು ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಮಲ್ಟಿ ಯುಟಿಲಿಟಿ ವಾಹನದೊಳಗೆ 24 ಜನರು ತಮ್ಮ ವಸ್ತುಗಳನ್ನು ಪ್ಯಾಕ್ ಮಾಡಿಕೊಂಡು ಬೆಂಗಳೂರಿಗೆ ಪ್ರಯಾಣಿಸುತ್ತಿದ್ದರು. ಕಳ್ಳಂಬೆಳ್ಳ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಗೃಹ ಸಚಿವ ಆರಗ ಜ್ಞಾನೇಂದ್ರ ಇದೊಂದು ದುರದೃಷ್ಟಕರ ಘಟನೆ, ಡಿಸಿ ಮತ್ತು ಎಸ್ಪಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚನೆ ನೀಡಿದ್ದೇನೆ ಎಂದಿದ್ದಾರೆ.

ಮೈಸೂರು ಮೇಯರ್‌ಗಾದಿಗೆ ಕಸರತ್ತು

ಮೈಸೂರು, ಆ. 25– ಮೈಸೂರು ಮಹಾನಗರ ಪಾಲಿಕೆ ಮೇಯರ್ ಹಾಗೂ ಉಪ ಮೇಯರ್ ಆಯ್ಕೆಯ ದಿನಾಂಕ ನಿಗಧಿಯಾಗಿದೆ. ಮೇಯರ್ ಸ್ಥಾನ ಸಾಮಾನ್ಯ ಹಾಗೂ ಉಪ ಮೇಯರ್ ಸ್ಥಾನ ಹಿಂದುಳಿದ ವರ್ಗ ಮಹಿಳೆಗೆ ಮೀಸಲಾಗಿದ್ದು, ಸೆ6ರಂದು ಚುನಾವಣೆ ನಡೆಯಲಿದೆ.





ಮೇಯರ್ ಹಾಗೂ ಉಪಮೇಯರ್ ಸ್ಥಾನಕ್ಕೆ ಮೂರು ಪಕ್ಷಗಳಲ್ಲಿ ಕಸರತ್ತು ಆರಂಭವಾಗಿದೆ. ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಲ್ಲಿನ ಆಕಾಂಕ್ಷಿಗಳು ತಮ್ಮ ತಮ್ಮ ಪಕ್ಷದ ನಾಯಕರ ಮುಂದೆ ಅಹವಾಲು ಸಲ್ಲಿಸುತ್ತಿದ್ದಾರೆ.

ಪ್ರಮುಖವಾಗಿ ಜೆಡಿಎಸ್‌ನ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ ಇನ್ನಿತರರು ಇಂದು ಮೈಸೂರಿಗೆ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿಮಿತ್ತ ಆಗಮಿಸಿರುವ ಪಕ್ಷದ ವರಿಷ್ಠರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ನಗರದ ಹೊರವಲಯದ ರೆಸಾರ್ಟ್‌ನಲ್ಲಿ ಭೇಟಿಯಾಗಿದ್ದಾರೆ. ತಮಗೆ ಅವಕಾಶ ಕಲ್ಪಿಸುವಂತೆ ತಮ್ಮ ಪಕ್ಷ ನಿಷ್ಠೆ ಹಾಗೂ ಸೇವೆಯನ್ನು ವಿವರಿಸಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ ಅವರು ಇಂದು ವಿವಾಹ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ರಾತ್ರಿ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದು ನಾಳೆ ಹುಣಸೂರಿನಲ್ಲಿ ನಡೆಯಲಿರುವ ಕೆಂಪೇಗೌಡ ಜಯಂತಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಮಧ್ಯೆ ಮಾಜಿ ಮುಖ್ಯಮಂತ್ರಿ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಮೈಸೂರಿಗೆ ಮರಳಿದ್ದು, ರಾತ್ರಿ ಇಲ್ಲಿಯೇ ವಾಸ್ತವ್ಯ ಹೂಡಿದ್ದಾರೆ.

ಮೇಯರ್ ಚುನಾವಣೆಯಲ್ಲಿ ಪಕ್ಷದ ನಿಲುವಿನ ಬಗ್ಗೆ ಅವರೂ ಸಹ ಕೆಲವರೊಂದಿಗೆ ಚರ್ಚೆ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಬೆಳವಣಿಗೆಗಳನ್ನು ಆಧರಿಸಿ ಪಕ್ಷದಿಂದ ಆಕಾಂಕ್ಷಿಗಳನ್ನು ಕಣಕ್ಕಿಳಿಸುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ ಎಂದು ಬಲ್ಲಮೂಲಗಳು ತಿಳಿಸಿವೆ.

ಇನ್ನು ಬಿಜೆಪಿ ಮುಖಂಡರು ಈಗಾಗಲೇ ಒಮ್ಮೆ ಪಾಲಿಕೆಯ ಅಧಿಕಾರವನ್ನು ಹಿಡಿದಿರುವುದರಿಂದ ಮತ್ತೊಮ್ಮೆ ಮೇಯರ್ ಗಾದಿ ಗಿಟ್ಟಿಸಿಕೊಳ್ಳುವ ಸಾಧ್ಯಸಾಧ್ಯತೆ ಬಗ್ಗೆ ಗಹನವಾದ ಚರ್ಚೆಯಲ್ಲಿ ತೊಡಗಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಜೆಡಿಎಸ್ ಈ ಬಾರಿ ಮೇಯರ್ ಗಾದಿ ಹಿಡಿಯಲು ಎಲ್ಲಾ ರೀತಿಯ ತಂತ್ರಕ್ಕೂ ಸಜ್ಜಾಗಿರುವುದರಿಂದ ಬಿಜೆಪಿಯ ನಡೆ ತೀವ್ರ ಕುತೂಹಲ ಕೆರಳಿಸಿದೆ.

ಹುಡುಗಿ ವಿಚಾರಕ್ಕೆ ಗುಂಪುಗಳ ಮಾರಾಮಾರಿ

ಮೈಸೂರಿನ ಮಹಿಳಾ ಕಾಲೇಜು ಬಳಿ ಮಧ್ಯಾಹ್ನ ಘಟನೆ, ಪೊಲೀಸರಿಂದ ಲಘು ಲಾಠಿ ಪ್ರಹಾರದ ಬಳಿಕ ಪರಿಸ್ಥಿತಿ ತಿಳಿ



ಮೈಸೂರು, ಆ.25(ಆರ್‌ಕೆ)– ಹುಡುಗಿ ವಿಚಾರಕ್ಕಾಗಿ ಎರಡು ಗುಂಪುಗಳು ಬಡಿದಾಡಿಕೊಂಡ ಘಟನೆ ಮೈಸೂರಿನ ನಜರ್‌ಬಾದ್‌ನಲ್ಲಿ ಗುರುವಾರ ಮಧ್ಯಾಹ್ನ ಸಂಭವಿಸಿದೆ. ನಜರ್‌ಬಾದಿನ ನಗರ ಪೊಲೀಸ್ ಕಮೀಷನರ್ ಕಚೇರಿ ಸಮೀಪದಲ್ಲಿರುವ ಮಹಿಳಾ ಕಾಲೇಜೊಂದರ ಬಳಿ ಈ ಘಟನೆ ನಡೆದಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಪೊಲೀಸರು, ಲಘು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಮಹಿಳಾ ಕಾಲೇಜಿನಲ್ಲಿ ನಡೆಯುತ್ತಿದ್ದ ಉತ್ಸವದ ಅಂಗವಾಗಿ ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಪೋಷಕರು, ವಿದ್ಯಾರ್ಥಿನಿಯರೂ ನೆರೆದಿದ್ದರು. ಈ ವೇಳೆ ಕಾಲೇಜಿನ ಹೊರಗಡೆ ಯಾರೋ ಹುಡುಗಿಯೊಬ್ಬಳನ್ನು ಚುಡಾಯಿಸಿದರೆಂಬ ಕಾರಣಕ್ಕೆ ಗದ್ದಲ ಉಂಟಾಯಿತು.

ಆ ಸಂದರ್ಭ ಎರಡು ಗುಂಪುಗಳ ನಡುವೆ ಕಾಲೇಜು ಮುಂದಿನ ನಡು ರಸ್ತೆಯಲ್ಲೇ ಹೊಡೆದಾಟ ಆರಂಭವಾಯಿತು. ಪರಸ್ಪರ ಬಡಿದಾಡಿಕೊಳ್ಳುತ್ತಿದ್ದುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾದ ಕಾರಣ, ಸಾರ್ವಜನಿಕರು ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜೀವನ್ ಹಾಗೂ ಸಿಬ್ಬಂದಿ ನೂಕಾಟ–ತಳ್ಳಾಟ ನಡೆಸುತ್ತಿದ್ದ ಗುಂಪುಗಳತ್ತ ಲಘು ಲಾಠಿ ಪ್ರಹಾರ ನಡೆಸಿದಾಗ ಗುಂಪು ಚದುರಿತು.

ಆ ವೇಳೆ ಕೆಲ ಸಮಯ ಟ್ರಾಫಿಕ್ ಜಾಮ್ ಆಗಿತ್ತು. ಪೊಲೀಸರು ಬಂದ ತಕ್ಷಣ ಗುಂಪು ಸ್ಥಳದಿಂದ ಪೇರಿ ಕಿತ್ತರು. ಪರಿಸ್ಥಿತಿ ಶಾಂತವಾದ ಮೇಲೆ ಉತ್ಸವ ನಡೆಯುತ್ತಿದ್ದ ಕಾಲೇಜಿಗೆ ತೆರಳಿದ ಪೊಲೀಸರು, ವಿಚಾರಣೆ ನಡೆಸಿದರಾದರೂ, ಘಟನೆಗೆ ನಿಖರ ಕಾರಣ ತಿಳಿಯಲಿಲ್ಲ. ಕಡೆಗೆ ಸುತ್ತಲಿನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದ ಪೊಲೀಸರು, ಘರ್ಷಣೆ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಹುಡುಗಿ ವಿಚಾರಕ್ಕಾಗಿ ಜಗಳವಾಗಿ ನಂತರ ಗುಂಪು ಸೇರಿಕೊಂಡು ಬಡಿದಾಡಿದ್ದಾರೆ ಎಂಬುದನ್ನು ಅರಿತ ಪೊಲೀಸರು, ಆ ಶಿಕ್ಷಣ ಸಂಸ್ಥೆ ಸಿಬ್ಬಂದಿಗಳಿಂದ ಅಗತ್ಯ ಮಾಹಿತಿ ಕಲೆ ಹಾಕುತ್ತಿದ್ದಾರೆ. ಬೇರೆ ಕಾಲೇಜುಗಳಿಂದ ವಿದ್ಯಾರ್ಥಿಗಳು ಈ ಮಹಿಳಾ ಕಾಲೇಜು ಬಳಿ ಬಂದಿದ್ದರು ಎಂದು ಅಲ್ಲಿನ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಿದರಲ್ಲದೆ ಮಧ್ಯಾಹ್ನದ ನಂತರ ಇದ್ದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿದರು. ಪರಿಸ್ಥಿತಿ ತಿಳಿಯಾದ ಬಳಿಕ ಕಾಲೇಜು ಸಿಬ್ಬಂದಿ ಸಾಂಸ್ಕೃತಿಕ ಕಾರ್ಯಕ್ರಮ ಮುಂದುವರೆಸಲು ಕೋರಿದರು ಅವಕಾಶ ನೀಡಲಿಲ್ಲ. ನಂತರ ವಿದ್ಯಾರ್ಥಿನಿಯರು ಹಾಗೂ ಅವರ ಪೋಷಕರು ನಿರಾಶೆಯಿಂದಲೇ ಮನೆಗೆ ಹಿಂದಿರುಗಿದರು.

'ಸ್ಟಾರ್ ಆಫ್ ಮೈಸೂರ್' ಟ್ರೋಫಿ....



ಗುರುವಾರ ಮೈಸೂರು ರೇಸ್ ಕ್ಲಬ್‌ನಲ್ಲಿ ನಡೆದ ರೇಸ್‌ನಲ್ಲಿ 'ಸ್ಟಾರ್ ಆಫ್ ಮೈಸೂರ್' ಟ್ರೋಫಿ ಗೆದ್ದ 'ಅಬೆರ್‌ಲೋರ್' ಕುದುರೆ ತರಬೇತುದಾರ ವಿಶಾಲ್ ಯಾದವ್ ಅವರಿಗೆ 'ಸ್ಟಾರ್ ಆಫ್ ಮೈಸೂರ್' ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ.ವಿಕ್ರಮ್ ಮುತ್ತಣ್ಣ ಅವರು ಟ್ರೋಫಿ ಪ್ರದಾನ ಮಾಡಿದರು. ಈ ವೇಳೆ ಎಂಆರ್‌ಸಿ ಅಧ್ಯಕ್ಷರು, ಸ್ಟೀವರ್ಡ್ಸ್, ಕಮಿಟಿ ಮೆಂಬರ್ಸ್ ಉಪಸ್ಥಿತರಿದ್ದರು.

ಅನಧಿಕೃತವಾಗಿ ದಾಸ್ತಾನು ಮಾಡಿದ್ದ 400ರಿಂದ 450 ಚೀಲ ಯೂರಿಯಾ ರಸಗೊಬ್ಬರ ಜಪ್ತಿ

ಮೈಸೂರು,ಆ.25(ಎಂಕೆ)–ಅನಧಿಕೃತ ಗೋಡೌನ್ ಒಂದರಲ್ಲಿ ದಾಸ್ತಾನು ಮಾಡಿದ್ದ 400–450 ಯೂರಿಯಾ ರಸಗೊಬ್ಬರದ ಮೂಟೆಗಳನ್ನು ಕೃಷಿ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಕೃಷಿ ಇಲಾಖೆ ಜಂಟಿ ನಿರ್ದೇಶಕ ಬಿ.ಎಸ್.ಚಂದ್ರಶೇಖರ್ ನೇತೃತ್ವದಲ್ಲಿ ಗುರುವಾರ ರಾತ್ರಿ ನಡೆದ ಕಾರ್ಯಾಚರಣೆಯಲ್ಲಿ ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಸಮೀಪದಲ್ಲಿನ ಅನಧಿಕೃತ ಗೋಡೌನ್‌ನಲ್ಲಿ ಪತ್ತೆಯಾಗಿದೆ.



ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಜಂಟಿ ನಿರ್ದೇಶಕ ಚಂದ್ರಶೇಖರ್, ಮೈಸೂರು ಜಿಲ್ಲೆಗೆ ಕಳೆದ ಎರಡು ದಿನಗಳಲ್ಲಿ ಬಂದಂತಹ ರಸಗೊಬ್ಬರವನ್ನು ಎಂದಿನಂತೆ ಸಂಬಂಧಪಟ್ಟಂತಹ ತಾಲೂಕುಗಳಿಗೆ, ಸೊಸೈಟಿಗಳಿಗೆ, ಖಾಸಗಿ ಮಾರಾಟಗಾರರಿಗೆ, ಫೆಡರೇಷನ್‌ಗಳ ಮೂಲಕ ರೈತರಿಗೆ ತಲುಪಿಸಬೇಕಿದೆ.

ಗೂಡ್ಸ್ ವ್ಯಾಗನ್‌ನಿಂದ ಲಾರಿಗಳಿಗೆ ಲೋಡ್ ಆದಂತಹ ಸಂದರ್ಭದಲ್ಲಿ ಇಲಾಖೆ ಅಧಿಕಾರಿಗಳು ಗಮನಿಸುತ್ತಾರೆ. ಅಲ್ಲದೆ ಲಾರಿ ಎಲ್ಲೆಲ್ಲಿ ಹೋಗಲಿದೆ ಎಂಬುದನ್ನು ಪರಿಶೀಲನೆ ನಡೆಸಲಿದ್ದಾರೆ. ಈ ವೇಳೆ ಅನುಮಾನಾಸ್ಪದವಾಗಿ ಕೆಲ ಲಾರಿಗಳು ಓಡಾಡುವುದು ಅಧಿಕಾರಿಗಳ ಗಮನಕ್ಕೆ ಬಂದಿದ್ದು, ಪರಿಶೀಲಿಸಿದಾಗ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿಯ ಗೋಡೌನ್ ಕಡೆಗೆ ಲಾರಿಗಳು ತಿರುಗಾಡಿರುವುದು ಗಮನಕ್ಕೆ ಬಂದಿದೆ.

ನಂತರ ಮೇಟಗಳ್ಳಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿ, ಪೊಲೀಸ್ ಸಿಬ್ಬಂದಿ ಸಹಾಯದೊಂದಿಗೆ ಅನಧಿಕೃತ ಗೋಡೌನ್ ಪತ್ತೆಹಚ್ಚಲಾಗಿದೆ. ಗೋಡೌನ್ ಬಳಿ ಯಾರು ಇಲ್ಲದೆ ಇರುವುದರಿಂದ ಯಾರು ದಾಸ್ತಾನು ಮಾಡಿದ್ದರು ಎಂಬ ಮಾಹಿತಿ ತಿಳಿದುಬಂದಿಲ್ಲ. ಪತ್ತೆಯಾಗಿರುವ ಯೂರಿಯಾ ರಸಗೊಬ್ಬರವನ್ನು ಡಿಸಿ ಅನುಮತಿ ಮೇರೆಗೆ ವಶಕ್ಕೆ ಪಡೆದು, ಪರೀಕ್ಷೆಗೆ ಕಳುಹಿಸಲಾಗುವುದು. ಅಲ್ಲದೆ ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದರು. ಕಾರ್ಯಾಚರಣೆಯಲ್ಲಿ ಉಪ ಕೃಷಿ ನಿರ್ದೇಶಕ ರಾಜು, ಸಹಾಯಕ ಕೃಷಿ ನಿರ್ದೇಶಕ ಮೊದಲೊತ್ತಾ, ಜಾಗೃತ ಕೋಶದ ಸಹಾಯಕ ಕೃಷಿ ನಿರ್ದೇಶಕ ಎಸ್.ಕೃಷ್ಣ, ಕೃಷಿ ಅಧಿಕಾರಿಗಳಾದ ಜೀವನ್, ಕಾರ್ತಿಕ್ ಇನ್ನಿತರರಿದ್ದರು.

ತೀಸ್ತಾ ಜಾಮೀನು ಅರ್ಜಿ: ಆ.30ಕ್ಕೆ ವಿಚಾರಣೆ ಮುಂದೂಡಿದ 'ಸುಪ್ರೀಂ'

ನವದೆಹಲಿ,ಆ.25–ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಜಾಮೀನು ಅರ್ಜಿ ವಿಚಾರಣೆಯನ್ನು ಆ.30ರಂದು ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂಕೋರ್ಟ್ ಹೇಳಿದೆ. ತೀಸ್ತಾ ಅವರ ಜಾಮೀನು ಅರ್ಜಿಯ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಗುಜರಾತ್ ಸರ್ಕಾರಕ್ಕೆ ಹೇಳಿತ್ತು. ಆದರೆ, ಗುಜರಾತ್ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪ್ರತಿಕ್ರಿಯೆ ಸಿದ್ಧವಿದೆ. ಕೆಲವು ತಿದ್ದುಪಡಿ ಮಾಡಬೇಕಾಗಿರುವುದರಿಂದ ಪ್ರತಿಕ್ರಿಯೆ ಸಲ್ಲಿಸಲು ಸಮಯಾವಕಾಶಬೇಕು ಎಂದು ಮನವಿ ಮಾಡಿದರು. ಪ್ರತಿಕ್ರಿಯೆಯನ್ನು ಆ.27ರ ಒಳಗೆ ಸಲ್ಲಿಸಬೇಕು. ಇನ್ನಷ್ಟು ತಿದ್ದುಪಡಿಗಳಿದ್ದರೆ ಸೋಮವಾರ (ಆಗಸ್ಟ್ 29) ಸಲ್ಲಿಸಬಹುದು ಎಂದು ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ಎಸ್.ಆರ್. ಭಟ್ ಮತ್ತು ಸುಧಾಂಶು ಧೂಲಿಯಾ ಅವರಿದ್ದ ಪೀಠವು ಮೆಹ್ತಾ ಅವರಿಗೆ ಹೇಳಿತು.

ಪ್ರಕರಣದ ಕುರಿತು ಇನ್ನಷ್ಟು ಕಾನೂನಾತ್ಮಕ ಸಾಧ್ಯತೆಗಳನ್ನು ಪರಿಶೀಲಿಸಬೇಕಿದೆ. ಆದ್ದರಿಂದ ಸಮಯ ಬೇಕಾಗಿದೆ ಎಂದು ತುಷಾರ್ ಮೆಹ್ತಾ ಅವರು ವಾದಿಸಿದರು. ಅದಕ್ಕೆ ಪ್ರತಿಯಾಗಿ ತೀಸ್ತಾ ಅವರು ಇನ್ನೂ ಹೆಚ್ಚುಕಾಲ ಜೈಲುವಾಸ ಅನುಭವಿಸುವುದು ತಪ್ಪಾಗುತ್ತದೆ ಎಂದು ತೀಸ್ತಾ ಅವರ ಪರ ವಕೀಲ ಕಪಿಲ್ ಸಿಬಲ್ ವಾದಿಸಿದರು.

ಅಗ್ರಹಾರದಲ್ಲಿ ಶ್ರೀ ರಾಯಲ್ ವಾರಿಯರ್ ಬೇಕರಿ 10ನೇ ಶಾಖೆ ಆರಂಭ

ಬಗೆಬಗೆಯ 'ರುಚಿ–ಶುಚಿಯಾದ ತಿಂಡಿ–ತಿನಿಸುಗಳ ಸವಿಯುವ ಸುವರ್ಣಾವಕಾಶ

ಮೈಸೂರು, ಆ.25–ಮೈಸೂರಿನ ಅಗ್ರಹಾರ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ಹೆಸರಾಂತ ಶ್ರೀ ರಾಯಲ್ ವಾರಿಯರ್ ಬೇಕರಿಯ 10ನೇ ಶಾಖೆಯನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಗುರುವಾರ ಉದ್ಘಾಟಿಸಿದರು.

ಈ ವೇಳೆ ಬೇಕರಿ ಮಾಲೀಕರಾದ ಎಂ.ಎಸ್. ನಾರಾಯಣ್, ಅವರ ಪತ್ನಿ ಶ್ರೀಮತಿ ಶೈಲಜಾ ನಾರಾಯಣ್, ಪುತ್ರ ಎನ್.ಹೃತ್ವಿಕ್, ಕಾಮತ್ ಇತರರು ಹಾಜರಿದ್ದರು. ಇದೇ ವೇಳೆ ಮೈಸೂರು ನಗರ ಪಾಲಿಕೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅವರನ್ನು ಬೇಕರಿ ಮಾಲೀಕರಾದ ಎಂ.ಎಸ್.ನಾರಾಯಣ್, ಪತ್ನಿ ಶ್ರೀಮತಿ ಶೈಲಜಾ ಹಾಗೂ ಪುತ್ರ ಎನ್.ಹೃತ್ವಿಕ್ ಆತ್ಮೀಯವಾಗಿ ಅಭಿನಂದಿಸಿದರು.

ರುಚಿ–ಶುಚಿಯಾದ ನಾನಾ ತಿಂಡಿ–ತಿನಿಸುಗಳಿಂದ ಈಗಾಗಲೇ ಮೈಸೂರಲ್ಲಿ ಮನೆ ಮಾತಾಗಿರುವ ಶ್ರೀ ರಾಯಲ್ ವಾರಿಯರ್ ಬೇಕರಿ, ಇಂದು ಆರಂಭವಾದ ಶಾಖೆಯೂ ಸೇರಿದಂತೆ ಸಾಂಸ್ಕೃತಿಕ ನಗರಿಯಲ್ಲಿ ಹತ್ತು ಶಾಖೆಗಳನ್ನು ಹೊಂದಿದೆ.





ಅಗ್ರಹಾರದಲ್ಲಿ ಶ್ರೀ ರಾಯಲ್ ವಾರಿಯರ್ ಬೇಕರಿ 10ನೇ ಶಾಖೆಯನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಗುರುವಾರ ಉದ್ಘಾಟಿಸಿದರು. ಇದೇ ವೇಳೆ (ಬಲಚಿತ್ರ) ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅವರನ್ನು ಬೇಕರಿ ಮಾಲೀಕ ನಾರಾಯಣ್ ಪತ್ನಿ ಶೈಲಜ, ಪುತ್ರ ಹೃತ್ವಿಕ್ ಅಭಿನಂದಿಸಿದರು.

ವಿಶೇಷ ತಿನಿಸುಗಳ ಆಗರ: ಶ್ರೀ ರಾಯಲ್ ವಾರಿಯರ್ ಬೇಕರಿ ವಿಶೇಷ ತಿನಿಸುಗಳ ಆಗರವಾಗಿದೆ. ವೆನಿಲಾ ಕೇಕ್, ಪೈನಾಪಲ್ ಕೇಕ್, ಸ್ಟ್ರಾಬೆರಿ ಕೇಕ್, ಚಾಕೊಲೇಟ್ ಕೇಕ್, ಪ್ಲೈನ್ ಕೇಕ್, ಕ್ಯಾಶೋ ಕೇಕ್, ಕ್ಯಾರೆಟ್ ಕೇಕ್, ಬಟ್ಟರ್ ಸ್ಕಾಚ್ ಕೇಕ್, ಗೀ ಕೇಕ್, ಡೇಟ್ಸ್ ಕೇಕ್, ಮಿಲ್ಕ್ ಪಡ್ಡಿಂಗ್, ಮಲ್ಟಿಗ್ರೈನ್ ಕೇಕ್, ಚಾಕೋ ಡೊನಟ್, ಪೈನಾಪಲ್ ಹನಿ ಕೇಕ್, ಬನಾನ ಕೇಕ್, ಚಾಕೋ ಮೌಸ್ ಕೇಕ್ ಹೀಗೆ ಹತ್ತಾರು ವಿಶೇಷ ಬಗೆಯ ಕೇಕ್‌ಗಳು, ಮಿಕ್ಸ್‌ಚರ್, ಬನಾನ ಚಿಪ್ಸ್, ಬಟ್ಟರ್ ಮುರ್ಕು, ಜಾಕ್‌ಫ್ರೂಟ್ ಚಿಪ್ಸ್, ಹುರಿಗಾಳು, ಅವರೇಬೇಳೆ, ಕೋಡಬಳೆ, ಚಕ್ಕಲಿ, ನಿಪ್ಪಟ್ಟು ಇತ್ಯಾದಿ ಖಾರದ ತಿಂಡಿಗಳು, ಸ್ವೀಟ್ ಬನ್, ಸಾಲ್ಟ್ ವೋಲ್‌ವೆಟ್, ಜಗ್ಗೇರಿ, ಫ್ರೂಟ್ ಮತ್ತು ಮಲ್ಟಿಗ್ರೈನ್ ಬ್ರೆಡ್, ಖಾರ ಬನ್, ಪೊಟ್ಯಾಟೋ ಬನ್, ಕ್ರೀಮ್ ಬನ್, ಜಾಮ್ ಬನ್, ಮಿನಿ ಸ್ವೀಟ್ ಬನ್, ಮಿನಿ ಖಾರ ಬನ್, ಪಾವ್ ಬನ್, ಬರ್ಗರ್ ಬನ್, ಕೋಕನಟ್ ಬನ್ ಸೇರಿದಂತೆ ಹಲವು ಬಗೆಯ ಬ್ರೆಡ್‌ಗಳು, ಬೇಬಿ ರಸ್ಕ್, ಮಿಲ್ಕ್ ರಸ್ಕ್, ಫ್ರೂಟ್ ರಸ್ಕ್, ವೋಲ್‌ವೆಟ್ ರಸ್ಕ್, ಕೇಕ್ ರಸ್ಕ್, ಮಲ್ಟಿಗ್ರೈನ್ ರಸ್ಕ್ ಸೇರಿದಂತೆ ಹಲವು ಬಗೆಯ ರಸ್ಕ್‌ಗಳು, ವೆನಿಲಾ ಮಫಿನ್ಸ್, ಚಾಕೊಲೇಟ್ ಮಫಿನ್ಸ್, ರೆಡ್ ವೆಲ್‌ವೆಟ್ ಮಫಿನ್ಸ್, ಡ್ರೈಫ್ರೂಟ್ ಮಫಿನ್ಸ್‌ಗಳು ಈ ಬೇಕರಿಯಲ್ಲಿ ಲಭ್ಯವಿದೆ.

ನಿಮ್ಮ ಪತ್ರಗಳು

ಯುದ್ಧದಿಂದ ವಿಶ್ವದ ಆರ್ಥಿಕತೆಗೆ ಪೆಟ್ಟು

ಮಾನ್ಯರೆ,

ಯುದ್ಧದ ಪರಿಣಾಮ ಅತ್ಯಂತ ಭೀಕರವಾಗಿರುತ್ತದೆ. ಯುದ್ಧ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಲಕ್ಷಾಂತರ ಜನಗಳ ಮೇಲೆ ಪರಿಣಾಮ ಬೀರುತ್ತದೆ. ಪ್ರಸ್ತುತ ರಷ್ಯಾ ಮತ್ತು ಉಕ್ರೇನ್ ನಡುವೆ ಕಳೆದ ಆರು ತಿಂಗಳುಗಳಿಂದ ನಡೆಯುತ್ತಿರುವ ಯುದ್ಧ ವಿಶ್ವದ ಆರ್ಥಿಕತೆಗೆ ದೊಡ್ಡ ಪೆಟ್ಟು ನೀಡಿದೆ.

ಈ ಯುದ್ಧದಿಂದ ವಿಶ್ವದ ಆರ್ಥಿಕತೆಯ ದರ 3.2ರಷ್ಟು ಇಳಿಮುಖಗೊಂಡಿದೆ ಎಂದು ಅಂತರರಾಷ್ಟ್ರೀಯ ವಿತ್ತ ನಿಧಿ ಹೇಳಿದ್ದು ಇದು ಮುಂದಿನ ವರ್ಷವೂ ಮುಂದುವರೆಯಲಿದೆ. ಯುರೋಪ್ ಮತ್ತು ಅಮೆರಿಕ ಕೂಡ ಆರ್ಥಿಕ ನಷ್ಟ ಅನುಭವಿಸಲಿವೆ ಎಂದೂ ಹೇಳಲಾಗಿದೆ.

ರಷ್ಯಾ ಮತ್ತು ಉಕ್ರೇನ್ ಯುದ್ಧದ ಪರಿಣಾಮ ಇಂಧನ ಕೊರತೆ, ಹಣದುಬ್ಬರ, ಆಹಾರದ ಅಭಾವ ಅಧಿಕಗೊಂಡಿದೆ. ಪ್ರಸ್ತುತ ಉಕ್ರೇನ್‌ನ 5587 ನಾಗರಿಕರು ಸಾವನ್ನಪ್ಪಿದ್ದು, 7890 ನಾಗರಿಕರು ಗಾಯಗೊಂಡು, 9000 ಸೈನಿಕರು ಮರಣ ಹೊಂದಿದ್ದಾರೆ ಮತ್ತು ರಷ್ಯಾದ 15000 ಸಾವಿರ ಸೈನಿಕರು ಈ ಯುದ್ಧದಲ್ಲಿ ಮಡಿದಿರುವುದು ಯುದ್ಧದ ಭೀಕರತೆಯನ್ನು ಬಿಂಬಿಸುತ್ತದೆ.

4.1 ಕೋಟಿಯಷ್ಟು ಜನ ನಿರಾಶ್ರಿತರರಾಗಿದ್ದು, 6 ಕೋಟಿ ಜನ ವಲಸೆ ಹೋಗಿದ್ದಾರೆ. ವಿಶ್ವದಲ್ಲಿ ವಲಸೆ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಲಿದೆ. 1917ರ ನಂತರ ಮೊದಲ ಬಾರಿಗೆ ರಷ್ಯಾ ವಿದೇಶಿ ಸಾಲವನ್ನು ತೀರಿಸಲು ವಿಫಲವಾಗಿದೆ. ಸೌದಿ ಅರೇಬಿಯದ ನಂತರ ಅತಿ ಹೆಚ್ಚು ತೈಲ ಸರಬರಾಜು ಮಾಡುವ ದೇಶ ರಷ್ಯಾ. ಆದರೆ ಯುದ್ಧದ ಪರಿಣಾಮ ಶೇ.30 ರಷ್ಟು ತೈಲ ಸರಬರಾಜು ಇಳಿಮುಖಗೊಂಡಿದ್ದು, ಇದರ ನೇರ ಪರಿಣಾಮ ಭಾರತದ ಮೇಲೆ ಉಂಟಾಗಲಿದೆ. ವಿಶ್ವಸಂಸ್ಥೆ ಮಧ್ಯೆ ಪ್ರವೇಶ ಮಾಡಿ ಈ ಯುದ್ಧವನ್ನು ಮುಕ್ತಾಯಗೊಳಿಸಿ ವಿಶ್ವದ ಆರ್ಥಿಕ ಪರಿಸ್ಥಿತಿ ಹದಗೆಡದಂತೆ ಎಚ್ಚರವಹಿಸುವಂತಾಗಲಿ.

–ರಾ.ಸುಮ ಭಟ್, ಚಿಕ್ಕಮಗಳೂರು.

ಕೊಡಗಿನ ಪ್ರಕೃತಿಯ ಮೂಲ ಸ್ವರೂಪ ಉಳಿಸಿ

ಮಾನ್ಯರೆ,

ಅಲ್ಪ ಸ್ವಲ್ಪ ಉಳಿದಿರುವ ಹಸಿರನ್ನು ಹಂಚಿ ಕೊಡಗನ್ನು ಹಸಿರು ಮುಕ್ತ ಮಾಡುವುದು ಸರಿಯೇ? ಈಗಾಗಲೇ ಅಭಿವೃದ್ಧಿ ಹೆಸರಲ್ಲಿ ಕೊಡಗು ತತ್ತರಿಸಿದೆ. ಭೂ ಕುಸಿತ, ಅಂತರ್ಜಲ ಕೊರತೆ ಕಾಡುತ್ತಿದೆ. ಕರ್ನಾಟಕದ ಸ್ವಿಟ್ಜರ್‌ಲ್ಯಾಂಡ್ ತನ್ನ ಮೂಲಸ್ವರೂಪ ಹಾಗೇ ಉಳಿಸಿಕೊಳ್ಳಲು ಬಿಡಿ. ಪ್ರಕೃತಿಯ ಮೇಲಿನ ಅತ್ಯಾಚಾರ ಕೈಬಿಡಿ. ಸರ್ಕಾರ ಹೈಕೋರ್ಟ್ ನೋಟೀಸ್ ಜಾರಿಯಂತೆ ಕೊಡಗನ್ನು ಉಳಿಸಲು ವಿಶೇಷ ತಂಡ ಒಂದನ್ನು ಆದಷ್ಟು ಬೇಗ ರಚಿಸಿ ಅಲ್ಲಿನ ಪರಿಸ್ಥಿತಿ ತಿಳಿದು ಸಹಾಯಕ್ಕೆ ಮುಂದಾಗಬೇಕು.

– ಪವನ್ ಕಲ್ಯಾಣ್, ಮಹಾರಾಜ ಕಾಲೇಜು, ಮೈಸೂರು.

ಒಳ್ಳೆಯ ಕನ್ನಡ ಸಿನಿಮಾಗಳನ್ನು ಬೆಂಬಲಿಸೋಣ

ಮಾನ್ಯರೆ,

ಎಲ್ಲರೂ ಅಲ್ಲದಿದ್ದರು, ಕೆಲವು ನಿರ್ಮಾಪಕರು ಹಾಗೂ ನಿರ್ದೇಶಕರು ಒಂದು ಬದ್ಧತೆ ಇಟ್ಟುಕೊಂಡು ಹಲವಾರು ಸಿದ್ಧತೆಗಳೊಂದಿಗೆ ತನು–ಮನ–ಧನ ಎಲ್ಲವನ್ನು ವಿನಿಯೋಗಿಸಿ ಸಿನಿಮಾ ನಿರ್ಮಾಣ ಮಾಡಿ ಬಿಡುಗಡೆ ಮಾಡುತ್ತಾರೆ. ಆದರೆ, ಕಿಡಿಗೇಡಿಗಳು ಅದನ್ನು ಒಂದೆರಡು ದಿನದಲ್ಲಿ ಪೈರಸಿ ಮಾಡಿ ಎಲ್ಲಾ ಕಡೆಗೂ ಕಡ್ಲೆಪುರಿ ಹಂಚಿದ ಹಾಗೆ ಹಂಚಿ ಬಿಟ್ಟರೆ ನಿರ್ಮಾಪಕರ ಗತಿ ಏನು? ಮೊದಲೇ ಕೊರೊನಾದಿಂದಾಗಿ ಕನ್ನಡ ಚಿತ್ರೋದ್ಯಮಕ್ಕೆ ಭಾರೀ ಹೊಡೆತ ಬಿದ್ದು, ಹಲವಾರು ಕಲಾವಿದರ, ತಂತ್ರಜ್ಞರ ಬದುಕು ಬೀದಿಗೆ ಬಂದಿತ್ತು. ಜೊತೆಗೆ ದಶಕಗಳ ಕಾಲ ಸಿನಿ ಪ್ರೇಕ್ಷಕರಿಗೆ ಅಚ್ಚು–ಮೆಚ್ಚಾಗಿದ್ದ ಕೆಲವು ಚಿತ್ರಮಂದಿರಗಳು ತೆರೆಮರೆಗೆ ಸರಿದುವು. ಇವೆಲ್ಲದರ ಹೊರತಾಗಿಯೂ ಈಗಷ್ಟೇ ಚಿತ್ರರಂಗ ಸ್ವಲ್ಪಮಟ್ಟಿಗೆ ಚೇತರಿಸಿಕೊಂಡು ಮೊದಲಿನ ಲಯ ಕಂಡುಕೊಳ್ಳುವತ್ತ ಹೆಜ್ಜೆ ಹಾಕಿದೆ. ಆದ್ದರಿಂದ ಎಲ್ಲರೂ ಚಲನಚಿತ್ರಗಳನ್ನು ಚಿತ್ರಮಂದಿರದಲ್ಲಿಯೇ ನೋಡಿದರೆ ನಿರ್ಮಾಪಕರು ಹಾಗೂ ಸಿನಿಮಾವನ್ನೇ ಅವಲಂಬಿಸಿರುವ ಅಸಂಖ್ಯಾತ ಕಲಾವಿದರು ಮತ್ತು ತಂತ್ರಜ್ಞರಿಗೆ ಅನುಕೂಲವಾಗುತ್ತದೆ. ಒಂದು ವೇಳೆ ಒಂದೊಳ್ಳೆಯ ಚಿತ್ರವನ್ನು ಚಿತ್ರಮಂದಿರದಿಂದ ಬೇಗ ತೆಗೆದುಬಿಟ್ಟರೆ ಅಥವಾ ಆ ಸಮಯದಲ್ಲಿ ನೀವು ಚಿತ್ರಮಂದಿರಕ್ಕೆ ಹೋಗಲು ಆಗಿರದಿದ್ದರೆ, ಆನಂತರ ನೀವು ಆ ಚಿತ್ರವನ್ನು ಯಾವುದರ ಮೂಲಕವಾದರೂ ಸರಿ ಉಚಿತವಾಗಿ ನೋಡಿದರೆ, ಅದರ ನಿರ್ಮಾಪಕರಿಗೆ ನಿಮ್ಮ ಶಕ್ತ್ಯಾನುಸಾರ ಇಂತಿಷ್ಟು ಹಣವನ್ನು ಫೋನ್ ಪೇ, ಗೂಗಲ್ ಪೇ ಅಥವಾ ಅಕೌಂಟ್‌ಗೆ ನೇರ ತಲುಪುವ ಹಾಗೆ ಮಾಡಿ. ಇದರಿಂದ ಅವರನ್ನು ಮತ್ತಷ್ಟು ಒಳ್ಳೆಯ ಚಿತ್ರಗಳನ್ನು ನಿರ್ಮಿಸಲು ಪ್ರೋತ್ಸಾಯಿಸಿದಂತಾಗುತ್ತದೆ. ಇದಕ್ಕೆ ಟೈಟಲ್ ಕಾರ್ಡ್‌ನಲ್ಲಿ ಹಣ ತಲುಪಲು ಬೇಕಾದ ಮೊಬೈಲ್ ನಂಬರ್ ಹಾಗೂ ಬ್ಯಾಂಕ್ ಅಕೌಂಟ್ ಮಾಹಿತಿ ಸೇರಿದಂತೆ ಒಂದೆರಡು ಸಾಲಿನ ಮನವಿ ಪತ್ರ ಹಾಕುವತ್ತ ಸಿನಿಮಾ ತಂಡಗಳು ಗಮನಹರಿಸಲಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಮಾಂಸ ತಿನ್ನುವುದೆಲ್ಲ ದೊಡ್ಡ ಸುದ್ದಿಯೇ!?

ಮಾನ್ಯರೆ,

ಕಳೆದೆರಡು ದಿನಗಳಿಂದ ದೃಶ್ಯ ಸುದ್ದಿ ಮಾಧ್ಯಮಗಳು ಮೊಟ್ಟೆ ಹಾಗೂ ಮಾಂಸಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿವೆ. ಮೊಟ್ಟೆ ಎಸೆದರೆಂದು, ನಾಟಿಕೋಳಿ ಮಾಂಸ ತಿಂದು ದೇವಸ್ಥಾನಕ್ಕೆ ಹೋದರೆಂದು, ಹೋಗಿ ಆಗಬಾರದ್ದು ಆಗಿದೆಯೆಂದು ಅಬ್ಬರಿಸಿ ಬೊಬ್ಬಿರಿಯುತ್ತಿವೆ. ಇಂತಹ ಚಿಕ್ಕಪುಟ್ಟ ವಿಷಯಗಳನ್ನು ರಾಷ್ಟ್ರೀಯ ಸಮಸ್ಯೆ ಅಂತ ಬಿಂಬಿಸಿ ಅದೇ ಸುದ್ದಿಗಳನ್ನು ದಿನಗಟ್ಟಲೇ ಬಿತ್ತರಿಸೋದು ನೋಡುಗರಿಗೆ ಕಿರಿಕಿರಿ ತರಿಸುತ್ತದೆ.

ಮಾಂಸ ತಿನ್ನುವುದು ಬಿಡುವುದು ಯಾವುದೇ ವ್ಯಕ್ತಿಯ ವೈಯಕ್ತಿಕ ವಿಚಾರ. ಇಷ್ಟಕ್ಕೂ ಮಾಂಸ ಸೇವನೆ ಮಾಡಿ ದೇಗುಲ ಪ್ರವೇಶಿಸಿದರೆ ಆಗಬಾರದ್ದು ಹಾಗೆ ಬಿಡುತ್ತದೆ ಎಂಬ ನಂಬಿಕೆಯೂ ಕೂಡ ಅವರವರ ಭಾವನೆಗೆ ಬಿಟ್ಟಿದ್ದು. ಹೀಗಿದ್ದ ಮೇಲೆ ಮಾಂಸ ತಿಂದ ಪ್ರಕರಣವನ್ನು ದೊಡ್ಡದು ಮಾಡುವುದರಲ್ಲಿ ಅರ್ಥವಿಲ್ಲ. ಜನರ ಉನ್ನತಿಗೆ ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾದ ಸುದ್ದಿಗಳಿಗೆ ದೃಶ್ಯ ಮಾಧ್ಯಮಗಳು ಆದ್ಯತೆ ಕೊಡಬೇಕೇ ವಿನಃ, ತೀರಾ ಸಣ್ಣಪುಟ್ಟ ವಿಚಾರಗಳನ್ನು ದೊಡ್ಡದು ಮಾಡಿ, ಅನವಶ್ಯಕ ಗೊಂದಲಗಳನ್ನು ಉಂಟು ಮಾಡಿ ಗಂಟೆಗಟ್ಟಲೇ, ದಿನಗಟ್ಟಲೇ ಸುದ್ದಿಗಳನ್ನು ಪ್ರಸಾರ ಮಾಡುವುದು ಸುದ್ದಿ ಮಾಧ್ಯಮಗಳಿಗೆ ಶೋಭೆ ತರುವ ವಿಚಾರವಲ್ಲ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
26-8-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ




ಮರ್ಧಿನಿ
ಮರ್ಡರ್ ಮಿಸ್ಟ್ರಿಯಲ್ಲೊಂದು ಹಾಡು !

ಮುಗ್ಧ ಯುವತಿಯೊಬ್ಬಳ ಕೊಲೆ. ಅದರ ತನಿಖೆಯ ಸುತ್ತ ಸಾಗುವ ಕಥೆವುಳ್ಳ ಚಿತ್ರ 'ಮರ್ಧಿನಿ'. ಈ ಚಿತ್ರದ ಟ್ರೈಲರ್ ಹಾಗೂ ಹಾಡೊಂದರ ಬಿಡುಗಡೆ ಇತ್ತೀಚೆಗೆ ನಡೆಯಿತು. ಈ ಹಿಂದೆ 'ದೇವ್ರಂಥಾ ಮನುಷ್ಯ' ಚಿತ್ರಕ್ಕೆ ಆ್ಯಕ್ಷನ್‌ಕಟ್ ಹೇಳಿದ್ದ ಕಿರಣ್‌ಕುಮಾರ್ ತಮ್ಮ ಎರಡನೇ ಪ್ರಯತ್ನದಲ್ಲಿ ಮಹಿಳಾ ಪ್ರಧಾನ ಮರ್ಡರ್ ಮಿಸ್ಟ್ರಿಯನ್ನು ತೆರೆ ಮೇಲೆ ತರುತ್ತಿದ್ದಾರೆ. ಈ ಚಿತ್ರಕ್ಕೆ ಅಕ್ಷಯಗೌಡ ಕಥೆ ರಚಿಸಿ, ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ಕರಣ್‌ಗಜ ಅವರ ಸಂಭಾಷಣೆ, ಹಿತನ್‌ಹಾಸನ್‌ರ ಸಂಗೀತ ಈ ಚಿತ್ರಕ್ಕಿದೆ. ರಿತನ್ಯ ಹೂವಯ್ಯ ಲೇಡಿಕಾಪ್ ಆಗಿ ಕಾಣಿಸಿಕೊಂಡಿದ್ದು, ಹಿಂದೆ ಮಾಲಾಶ್ರೀ, ವಿಜಯಶಾಂತಿ ನಿರ್ವಹಿಸಿದಂಥಾ ಪಾತ್ರವಿದು.



ಕನ್ನಡ ಚಿತ್ರರಂಗದೊಂದಿಗೆ 18 ವರ್ಷಗಳ ನಂಟು ಹೊಂದಿರುವ ಜಗ್ಗಿ ಮೊದಲ ಬಾರಿಗೆ ನಿರ್ಮಿಸಿರುವ ಚಿತ್ರವಿದು. ಈ ಕುರಿತಂತೆ ಮಾತನಾಡುತ್ತ 25 ವರ್ಷಗಳ ಹಿಂದೆ ತಂದೆಯ ಬಳಿ 70 ರೂ. ತಗೊಂಡು ಬೆಂಗಳೂರಿಗೆ ಬಂದೆ. ಸುದೀಪ್ ಅಭಿಮಾನಿಯಾಗಿ ಸಾವಿರಾರು ಚಿತ್ರಗಳಿಗೆ ಬ್ಯಾನರ್ ಮಾಡಿದೆ. ಈ ಸಿನಿಮಾ ಮಾಡುತ್ತೇನೆಂದು ಹೊರಟಾಗ ಸುದೀಪ್ ಅವರು ಬೆನ್ನು ತಟ್ಟಿದರು. ಹೊಸ ಪ್ರತಿಭೆಗಳನ್ನು ಬೆಳಕಿಗೆ ತರಬೇಕೆಂದು ನಾಯಕಿ ರಿತನ್ಯ, ಅಕ್ಷಯ್, ಇಂಚರ ಹೀಗೆ ಎಲ್ಲ ಪಾತ್ರಗಳಿಗೆ ಹೊಸ ಮುಖಗಳನ್ನೇ ಹಾಕಿಕೊಂಡಿದ್ದೇವೆ. ಸೆ16ರಂದು ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ. ವೆಂಕಟ್‌ಗೌಡ ವಿತರಣೆಯ ಜವಾಬ್ದಾರಿ ಹೊತ್ತುಕೊಂಡಿದ್ದಾರೆ ಎಂದು ಹೇಳಿದರು.

ನಿರ್ದೇಶಕ ಕಿರಣ್‌ಕುಮಾರ್ ಮಾತನಾಡಿ ಕೋವಿಡ್ ಟೈಂನಲ್ಲಿ ಶುರುವಾದ ಚಿತ್ರ. ಯಾವ ಹಂತದಲ್ಲೂ ಕೊರತೆಯಾಗದಂತೆ ನಿರ್ಮಾಪಕರು ನೋಡಿಕೊಂಡಿ ದ್ದಾರೆ. ಚಿತ್ರಕ್ಕೆ ಒಂದೇ ಹಾಡು ಬೇಕಿತ್ತು. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಕಥೆ ಕೊಲೆಯೊಂದರ ತನಿಖೆಯ ವಿವಿಧ ಹಂತದ ಸುತ್ತ ಸಾಗುತ್ತದೆ. ರಿತನ್ಯ ಅವರು ಮೊದಲ ಅವಕಾಶದಲ್ಲೇ ಖಡಕ್ ಪೊಲೀಸ್ ಅಧಿಕಾರಿ ಯಾಗಿ ಘರ್ಜಿಸಿದ್ದಾರೆ. ಸಂಗೀತ ನಿರ್ದೇಶಕ ಹಿತನ್ ಹಾಸನ್, ಕಥೆಗಾರ, ನಾಯಕ ಅಕ್ಷಯ್ ಗೌಡ ಚಿತ್ರದ ಕುರಿತಂತೆ ಮಾತನಾಡಿದರು. ಅರುಣ್ ಸುರೇಶ್ ಈ ಚಿತ್ರದ ಛಾಯಾಗ್ರಾಹಕರು.



ಉತ್ತರ ಕರ್ನಾಟಕ ಸೊಗಡಿನ ಚಿತ್ರ

ಕನ್ನಡದ ಹಿರಿಯ ನಟ ವೈಜನಾಥ ಬಿರಾದಾರ್ ಅವರ ಐನೂರನೇ ಚಿತ್ರ ನೈಂಟಿಬಿಡಿ ಮನೀಗ್‌ನಡಿ. ಬಾಗಲಕೋಟೆಯ ಅಮ್ಮಾ ಟಾಕೀಸ್ ಬ್ಯಾನರಿನಡಿ ನಿರ್ಮಾಣವಾಗಿರುವ ಈ ಚಿತ್ರದ ಟೀಸರ್ ಹಾಗೂ ಹಾಡೊಂದರ ಬಿಡುಗಡೆ ಇತ್ತೀಚೆಗೆ ಎಸ್.ಆರ್.ವಿ.ಥಿಯೇಟರಿನಲ್ಲಿ ನೆರವೇರಿತು. ಉತ್ತರ ಕರ್ನಾಟಕದ ಶೈಲಿಯಲ್ಲಿ ಮೂಡಿ ಬಂದಿರುವ ಈ ಹಾಡಿಗೆ ಚುಟು ಚುಟು ಖ್ಯಾತಿಯ ಶಿವು ಬೆರ್ಗಿ ಅವರು ಪದಗಳನ್ನು ಪೋಣಿಸಿ, ಸಂಗೀತ ಸಂಯೋಜಿಸಿದ್ದು, ರವೀಂದ್ರ ಸೊರಗಾವಿ ಮತ್ತು ಶಮಿತಾ ಮಲ್ನಾಡ್ ದನಿಯಾಗಿದ್ದಾರೆ. ಭೂಷಣ್ ಅವರ ಕೊರಿಯೋಗ್ರಫಿ ಈ ಹಾಡಿಗಿದೆ. ಉಮೇಶ್ ಬಾದರದಿನ್ನಿ ಮತ್ತು ನಾಗರಾಜ್ ಅರೆಹೊಳೆ ಜಂಟಿಯಾಗಿ ನಿರ್ದೇಶಿಸಿರುವ 'ನೈಂಟಿಬಿಡಿ ಮನೀಗ್‌ನಡಿ' ಒಂದು ಔಟ್ ಆಂಡ್ ಔಟ್ ಕಮರ್ಷಿಯಲ್ ಜೊತೆಗೆ ಕಾಮಿಡಿ, ಥ್ರಿಲ್ಲರ್ ಕಥೆಯಿರುವ ಚಿತ್ರವಾಗಿದೆ. ಚಿತ್ರದ ಪ್ರಮುಖ ತಾರಾಗಣದಲ್ಲಿ ವೈಜನಾಥ ಬಿರಾದಾರ್ ಕಾಣಿಸಿಕೊಂಡಿದ್ದು, ನಾಯಕಿಯಾಗಿ ರಂಗಭೂಮಿ ಕಲಾವಿದೆ ನೀತಾ ನಟಿಸಿದ್ದಾರೆ. ಹಿರಿಯ ನಟರಾದ ಕರಿಸುಬ್ಬು, ಧರ್ಮ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕ ಉಮೇಶ್ ಬಾದರದಿನ್ನಿ ಮಾತನಾಡಿ ಬಿರಾದಾರ್ ಅವರು ನಮಗೊಂದು ಅವಕಾಶ ಕೊಟ್ಟಿದ್ದಾರೆ. ಯಾವ ಹಿರಿಯ ಕಲಾವಿದರೂ ಇಷ್ಟೆಲ್ಲ ಸಾಹಸ ಮಾಡಲು ಇಷ್ಟಪಡುವುದಿಲ್ಲ, ಆದರೆ ಬಿರಾದಾರ್ ಅವರು ನಾವು ಏನೇ ಹೇಳಿದರೂ ಆಗಲ್ಲ ಎನ್ನದೆ ಅಭಿನಯಿಸಿದ್ದಾರೆ. ಅವರು ಈ ಹಾಡಿನಲ್ಲಿ ಮಾಡಿರುವ ನೃತ್ಯ ಕಂಡು ಶರಣ್ ಸೇರಿದಂತೆ ಅನೇಕ ಕಲಾವಿದರು ಅಚ್ಚರಿವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು. ನಾಯಕ ಬಿರಾದಾರ್ ಮಾತನಾಡುತ್ತ ನಾನು ಮೂಲತ: ರಂಗಭೂಮಿ ಕಲಾವಿದ. 1970ರಲ್ಲಿ ಚಿತ್ರರಂಗಕ್ಕೆ ಬಂದೆ. ನಾನು 500ರ ಗಡಿ ತಲುಪಲು ಕನ್ನಡ ಚಿತ್ರರಂಗದ ತಂತ್ರಜ್ಞರು, ಕಲಾವಿದರು, ಮಾಧ್ಯಮದವರು ಎಲ್ಲರೂ ಕಾರಣಕರ್ತರು ಎಂದರು. ಇನ್ನು ಚಿತ್ರದ ನಾಯಕಿ ನೀತಾ ಮಾತನಾಡಿ, ನಾನೂ ರಂಗಭೂಮಿ ಕಲಾವಿದೆ. ಈ ಚಿತ್ರದಲ್ಲಿ ಬಿರಾದಾರ್ ಅವರ ಗೆಳತಿಯ ಪಾತ್ರ ಮಾಡಿದ್ದೇನೆ. ಒಬ್ಬ ವೇಶ್ಯೆಯಾಗಿದ್ದ ನಾನು ಅವರ ಸ್ನೇಹ ಗಳಿಸಿ, ನಂತರ ಅವರನ್ನೇ ಮದುವೆಯಾಗುತ್ತೇನೆ. ನಂತರ ಏನಾಗುತ್ತೆ ಎನ್ನುವುದೇ ಚಿತ್ರದ ಕುತೂಹಲ ಎಂದು ತನ್ನ ಪಾತ್ರದ ಕುರಿತಂತೆ ವಿವರಿಸಿದರು. ಇನ್ನು ಈ ಚಿತ್ರಕ್ಕೆ ವೀರಸಮರ್ಥ ಹಿನ್ನೆಲೆ ಸಂಗೀತ ಸಂಯೋಜಿಸಿದ್ದಾರೆ.



ನನ್ನ ಹುಡುಕಿಕೊಡಿ ಚಿತ್ರಕ್ಕೆ ಚಾಲನೆ

ಕನ್ನಡ ಚಿತ್ರರಂಗಕ್ಕೆ "ತುಳಸೀದಳ" ಸೇರಿದಂತೆ ಅನೇಕ ಯಶಸ್ವೀ ಚಿತ್ರಗಳನ್ನು ನೀಡಿರುವ ಹಿರಿಯ ನಿರ್ದೇಶಕ ವೇಮಗಲ್ ಜಗನ್ನಾಥರಾವ್ ಅವರ ನಿರ್ದೇಶನದ ಮತ್ತೊಂದು ಚಿತ್ರ 'ನನ್ನ ಹುಡುಕಿಕೊಡಿ'. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು. ಚಿತ್ರದ ಮುಹೂರ್ತ ಸನ್ನಿವೇಶಕ್ಕೆ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ.ಹರೀಶ್ ಆರಂಭಫಲಕ ತೋರಿದರು. ನಿರ್ದೇಶಕ ಮಹೇಶ್ ಕುಮಾರ್ ಕಾಮರಾ ಚಾಲನೆ ಮಾಡಿದರು.

ಕನಕಪುರದ ಧನ್ವಿತ್ ಅವರು ಈ ಚಿತ್ರದಲ್ಲಿ ನಾಯಕನಾಗಿ ನಟಿಸುವುದರೊಂದಿಗೆ, ಚಿತ್ರಕ್ಕೆ ಬಂಡವಾಳವನ್ನು ಹೂಡುತ್ತಿದ್ದಾರೆ. ಇದೊಂದು ಥ್ರಿಲ್ಲರ್ ಕಥಾಹಂದರ ಹೊಂದಿದ ಚಿತ್ರ. ಚಿತ್ರದ ನಾಯಕ ಹಾಗೂ ನಿರ್ಮಾಪಕ ಧನ್ವಿತ್ ಹುಟ್ಟುಹಬ್ಬದಂದು ಚಿತ್ರಕ್ಕೆ ಚಾಲನೆ ನೀಡಿದ್ದೇವೆ. ಮುಹೂರ್ತ ಸಮಾರಂಭದೊಂದಿಗೆ ಹೊಸ ನಿರ್ಮಾಣ ಸಂಸ್ಥೆಯ ಉದ್ಘಾಟನೆಯನ್ನೂ ನೆರವೇರಿಸಲಾಗಿದೆ ಮುಂದಿನ ವಾರದಿಂದ ನನ್ನ ಹುಡುಕಿಕೊಡಿ ಚಿತ್ರದ ಚಿತ್ರೀಕರಣವನ್ನು ಆರಂಭಿಸುತ್ತೇವೆ. ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆಯಲಿದೆ. ಮೀನಾಕ್ಷಿ ಜೈಸ್ವಾಲ್ ಹಾಗೂ ಸಾಯಿನಯನ ಈ ಚಿತ್ರದಲ್ಲಿ ನಾಯಕಿಯರಾಗಿ ಕಾಣಿಸಿಕೊಳ್ಳಲಿದ್ದಾರೆ, ಪೋಷಕ ಪಾತ್ರಗಳಲ್ಲಿ ಕನ್ನಡದ ಹಿರಿಯ ಕಲಾವಿದರು ಅಭಿನಯಿಸಲಿದ್ದಾರೆ ಎಂದು ನಿರ್ದೇಶಕ ವೇಮಗಲ್ ಜಗನ್ನಾಥರಾವ್ ಚಿತ್ರದ ಬಗ್ಗೆ ಮಾಹಿತಿ ನೀಡಿದರು. ಚಿತ್ರದ ನಾಯಕ ಹಾಗೂ ನಿರ್ಮಾಪಕ ಧನ್ವಿತ್ ಮಾತನಾಡುತ್ತ ನಾನು ಮೂಲತಃ ಕನಕಪುರದವನು. ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಎಂದು ಹೇಳಿದರು. ನಾಯಕಿಯರಾದ ಮೀನಾಕ್ಷಿ ಜೈಸ್ವಾಲ್, ಸಾಯಿ ನಯನ ಹಾಗೂ ಛಾಯಾಗ್ರಾಹಕ ಸೂರ್ಯಕಾಂತ್ ಎಲ್ಲರೂ ಚಿತ್ರದ ಬಗ್ಗೆ ಮಾತನಾಡಿದರು.

'ಲಕ್ಕಿ ಮ್ಯಾನ್' ಟ್ರೈಲರ್ ಬಿಡುಗಡೆ
ಕೊನೇ ಚಿತ್ರದಲ್ಲಿ ದೇವರಾದ ಪುನೀತ್

ಕಾಕತಾಳೀಯ ಎನ್ನುವಂತೆ ಪುನೀತ್ ಅಗಲಿಕೆಯ ನಂತರ ಅವರು ದೇವರಪಾತ್ರ ನಿರ್ವಹಿಸಿರುವ 'ಲಕ್ಕಿ ಮ್ಯಾನ್' ಚಿತ್ರ ಬಿಡುಗಡೆಯಾಗುತ್ತಿದೆ. ಪ್ರಭುದೇವಾ ಸಹೋದರ ನಾಗೇಂದ್ರಪ್ರಸಾದ್ ನಿರ್ದೇಶನದ ಲಕ್ಕಿಮ್ಯಾನ್ ಟ್ರೈಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಕಿಚ್ಚ ಸುದೀಪ್, ರಾಘವೇಂದ್ರ ರಾಜ್‌ಕುಮಾರ್, ರಾಕ್‌ಲೈನ್ ವೆಂಕಟೇಶ್, ಪ್ರಭುದೇವಾ, ಮೂಗೂರು ಸುಂದರಂ, ರಾಜಸುಂದರಂ ಸೇರಿ ಚಿತ್ರೋದ್ಯಮದ ಅನೇಕ ಗಣ್ಯರು ಭಾಗವಹಿಸಿದ್ದರು. ಈ ಚಿತ್ರದಲ್ಲಿ ಪುನೀತ್ ಅವರು ಭಗವಾನ್ ವಿಷ್ಣು ರೂಪದಲ್ಲಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಪ್ರಭುದೇವಾ ಹಾಡೊಂದರಲ್ಲಿ ಸಖತ್ ಸ್ಟೆಪ್ಸ್ ಹಾಕಿದ್ದಾರೆ. ಡಾರ್ಲಿಂಗ್ ಕೃಷ್ಣ, ಸಂಗೀತಾ ಶೃಂಗೇರಿ, ರೋಶನಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದು, ಪರ್ಸ್ ಪಿಕ್ಚರ್ಸ್ ಲಾಂಛನದಲ್ಲಿ ಪಿ.ಆರ್.ಮೀನಾಕ್ಷಿ ಸುಂದರಂ ಹಾಗೂ ಸುಂದರ ಕಾಮರಾಜ್ ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಕಲಿಯುಗದಲ್ಲಿ ಭಗವಂತ ಮನುಷ್ಯನ ಕಷ್ಟಗಳನ್ನು ಹೇಗೆ, ಯಾವ ರೂಪದಲ್ಲಿ ಬಂದು ಪರಿಹರಿಸುತ್ತಾನೆ ಎಂಬುದನ್ನು ಪುನೀತ್ ಅವರ ಪಾತ್ರದ ಮೂಲಕ ತೋರಿಸಲಾಗಿದೆ. ಅವರು ನಟಿಸಿ ಬಿಡುಗಡೆಯಾಗುತ್ತಿರುವ ಕೊನೆಯ ಚಿತ್ರವೂ ಇದಾಗಿದೆ. ಆದರಲ್ಲೂ ದೇವರ ರೂಪದಲ್ಲಿ ಕಾಣಿಸಿಕೊಂಡಿರುವುದು ಭಾವನಾತ್ಮಕವಾಗಿ ಕುತೂಹಲ ಮೂಡಿಸಿದೆ.

ಈ ಸಂದರ್ಭದಲ್ಲಿ ಅಪ್ಪು-ಪ್ರಭುದೇವಾ ಅಭಿನಯದ ಹಾಡು ಬಿಡುಗಡೆಗೊಳಿಸಿ ಮಾತನಾಡಿದ ರಾಘಣ್ಣ, ನನ್ನ ತಮ್ಮ ಅದೃಷ್ಟವಂತ. ಆತ ನನ್ನ ಬಳಿ ಅಪ್ಪಾಜಿ ಜೊತೆ ಅಭಿನಯಿಸಬೇಕು, ಮಣಿರತ್ನಂ ನಿರ್ದೇಶನದ ಚಿತ್ರದಲ್ಲಿ ನಟಿಸಬೇಕು, ನನ್ನ ಚಿತ್ರಕ್ಕೆ ರೆಹಮಾನ್ ಅವರು ಮ್ಯೂಸಿಕ್ ಮಾಡಬೇಕು, ಪ್ರಭುದೇವಾ ಜೊತೆ ಡ್ಯಾನ್ಸ್ ಮಾಡಬೇಕು ಅಂತ 4 ಬಯಕೆಗಳನ್ನು ಹೇಳಿಕೊಂಡಿದ್ದ. ಚಿಕ್ಕವನಿದ್ದಾಗ ಅಪ್ಪಾಜಿ ಜೊತೆ ಅಭಿನಯಿಸಿದ್ದರೂ ಈಗ ನಟಿಸಬೇಕು ಎನ್ನುವ ಆಸೆಯಿತ್ತು. ಕೊನೆಯ ಆಸೆಯನ್ನಂತೂ ಈಡೇರಿಸಿಕೊಂಡ. ನಾವೆಲ್ಲ ಹೋದರೂ ಆತ ಬದುಕೇ ಇರ್ತಾನೆ ಎಂದರು.



ಸಿನಿಪದಬಂಧ-022

ಆಜ಼ಾದ್ ಜಿ. ಆಚಾರ್ಯ 6361429085

1					■	2				3
	■	■	■	■	4	■	■	■	■	
5		6	■	7			■	8		
■	■		■	■		■	■		■	■
9	■	10		11	■	12			■	13
	■	■	■	14			■	■	■	
	■	15			■	16		17	■	
■	■		■	■	18	■	■		■	■
19			■	20			■	21		22
	■	■	■	■		■	■	■	■	
23					■	24				

ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ಎಡದಿಂದ ಬಲಕ್ಕೆ

1. 2017ರಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ಮಂದಹಾಸ (5)
2. ಸುದೀಪ್-ರಮ್ಯಾ-ಅನು ಪ್ರಭಾಕರ್ ನಟಿಸಿದ 2008ರ ಚಿತ್ರ (5)
5. 2003ರ ಉಪ್ಪಿ "ಸಂಸಾರ" (3)
7. ಹರ್ಷಿಕಾ ಪೂಣಚ್ಚ ನಟಿಸಿದ 2010ರ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ (3)
8. ರಾಗಿಣಿ-ಯೋಗೇಶ್ ಜೋಡಿಯ 2013ರ ಚಿತ್ರ (3)
10. ಅನಂತನಾಗ್-ವಿನಯಪ್ರಸಾದ್ ಜೋಡಿಯ 1993ರ ಚಿತ್ರ ಹಿಂತಿರುಗಿದೆ (3)
12. ಅಂಬರೀಶ್-ರೂಪಾ ಗಂಗೂಲಿ ಜೋಡಿಯ 1991ರ ಚಿತ್ರ (3)
14. ---ಬಿಲ್ಲು ಈ ಚಿತ್ರದಲ್ಲಿ ಡಾ. ರಾಜ್ ಯೋಗಾಸನ ಪ್ರದರ್ಶನವಿದೆ (3)
15. ಡಾಲಿ ಧನಂಜಯ-ಸಂಚಿತಾ ಶೆಟ್ಟಿ ಜೋಡಿಯ 2016ರ ಚಿತ್ರ (3)
16. --- ಕಿತ್ತೂರು ಕನ್ನಡ ಚಿತ್ರರಂಗದ ನಿರ್ದೇಶಕಿ ಹ್ರಸ್ವವಾಗಿದ್ದಾರೆ (3)
19. ಡಾ. ಯು.ಆರ್.ಅನಂತಮೂರ್ತಿ ಕಾದಂಬರಿ ಚಿತ್ರ ಕೊನೆಗೆ ಗಲಿಬಿಲಿಯಾಗಿದೆ (3)
20. ಶಿವರಾಜ್ ಕುಮಾರ್ ನೂರನೇ ಚಿತ್ರ (3)
21. ಶ್ರೀನಗರ್ ಕಿಟ್ಟಿ ನಟಿಸಿದ 2009ರ ಚಿತ್ರ ಹಿಂತಿರುಗಿದೆ (3)
23. ರಾಹುಲ್-ಸಂಯುಕ್ತಾ ಜೋಡಿಯ 2016ರ ಚಿತ್ರ (5)
24. ಶಂಕರನಾಗ್-ಚಂದ್ರಿಕಾ ಜೋಡಿಯ 1990ರ ಚಿತ್ರ (5)

ಮೇಲಿನಿಂದ ಕೆಳಕ್ಕೆ

1. ಅಂಬರೀಶ್-ಡಾಲಿ ಜೋಡಿಯ 1994ರ ಚಿತ್ರ (3)
3. ದತ್ತಣ್ಣ ಅಭಿನಯದ 2006ರ ಚಿತ್ರದಲ್ಲಿ ಕಿಶನ್ ಶ್ರೀಕಾಂತ್ ಬಾಲನಟ (3)
4. ರವಿಚಂದ್ರನ್-ಜೆನ್ನಿಫರ್ ನಟನೆಯ 2007ರ ಚಿತ್ರ (3)
6. ವಿಷ್ಣುವರ್ಧನ್-ಭಾನುಪ್ರಿಯಾ ಅಭಿನಯದ 2004ರ ಚಿತ್ರ ಮೇಲೇರಿದೆ (3)
8. ವಿಷ್ಣುವರ್ಧನ್-ಸುಹಾಸಿನಿ-ಜೈ ಜಗದೀಶ್ ಅಭಿನಯದ ಚಿತ್ರ (3)
9. ಕಿಚ್ಚ ಸುದೀಪ್-ಪಾರುಲ್-ಭಾವನಾ ನಟಿಸಿದ 2013ರ ಚಿತ್ರ (3)
11. ಅಪ್ಪು-ರಮ್ಯಾ ಅಭಿನಯದ 2005ರ ಚಿತ್ರ (3)
12. ಪ್ರಕಾಶ್ ರಾಜ್-ಅಮೂಲ್ಯಾ ನಟಿಸಿದ ಚಿತ್ರ, ನಾನು ನನ್ನ --- (3)
13. 2019ರ ಕಿಚ್ಚ ಸುದೀಪ್ ಚಿತ್ರದಲ್ಲಿ ಸುನಿಲ್ ಶೆಟ್ಟಿ ನಟಿಸಿದ್ದಾರೆ (3)
15. --- ರಾಸ್ಕಲ್, ಶಂಕರ್ ಗುರು ನಿರ್ದೇಶನದಲ್ಲಿ ಡಾಲಿ ಧನಂಜಯ (3)
17. ನಂದೀಶ್ ನಿರ್ದೇಶನದಲ್ಲಿ ವಿಕಾಸ್-ಅನುಪಮಾ ಗೌಡ ನಟಿಸಿದ ಚಿತ್ರ (3)
18. ಗಣೇಶ್-ವೇದಿಕಾ ಜೋಡಿಯ 2008ರ ಚಿತ್ರ (3)
19. ಆರ್ ದೇವಾಡಿಗ ನಿರ್ದೇಶನದಲ್ಲಿ ಕುಮಾರ್ ಗೋವಿಂದ್ ನಟಿಸಿದ ಚಿತ್ರ (3)
22. ಅಂಬರೀಶ್-ಅಂಬಿಕಾ ಜೋಡಿಯ 1986ರ ಚಿತ್ರ (3)

ಸಿನಿ ಪದಬಂಧ 021ರ ಸರಿ ಉತ್ತರ

ಅ	ನು	ಭ	ವ	■	■	■	ಅ	ನು	ಗ್ರ	ಹ
ಧಿ	■	■	ರ	■	ಅ	■	ಯೋ	■	■	ಲೋ
ಪ	■	■	ದ	■	ನು	■	ಗ್ಯ	■	■	ಡ್ಯಾ
ತಿ	ಹು	ಆ	■	■	ರಾ	■	■	ಮು	ನ್ನು	ಡಿ
■	■	■	■	■	ಗ	■	■	■	■	■
■	ಬೆ	ಳು	ವ	ಲ	ದ	ಮ	ಡಿ	ಲ	ಲ್ಲಿ	■
■	■	■	■	■	ಅ	■	■	■	■	■
ಅ	ಶೋ	ಕ	■	■	ಲೆ	■	■	ಅ	ಳು	ಕು
ಭಿ	■	■	ವಿ	■	ಗ	■	ಕಾ	■	■	ರು
ಮಾ	■	■	ರ	■	ಳು	■	ಜು	■	■	ಕ್ಷೇ
ನ	ವ	ಗ್ರ	ಹ	■	■	■	ಮಂ	ಜು	ಮಿ	ತ್ರ

ವಿಜೇತರು: ಶಂಕರ ನಾರಾಯಣ
ನಂ.1041, 7ನೇ ಮೇನ್,
ಕೃಷ್ಣಮೂರ್ತಿಪುರಂ, ಮೈಸೂರು

ಪುನೀತ್ ನೆನಪಲ್ಲಿ 'ಸೈಮಾ' ಪ್ರಶಸ್ತಿ



ಪ್ರತಿವರ್ಷ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ತಾರೆಯರ, ತಂತ್ರಜ್ಞರ ಪ್ರತಿಭೆಯನ್ನು ಗುರ್ತಿಸಿ ಅವರನ್ನು ಗೌರವಿಸುವ ಪ್ರತಿಷ್ಠಿತ "ಸೈಮಾ" ಅವಾರ್ಡ್ಸ್ ಸಮಾರಂಭ ಈ ಸಲ ಪುನೀತ್ ರಾಜಕುಮಾರ್ ನೆನಪಿನೊಂದಿಗೆ ಸೆ.10 ಹಾಗೂ 11ರಂದು ಅದೂ ಬೆಂಗಳೂರಿನ ಅರಮನೆ ಆವರಣದಲ್ಲಿ ಮೊದಲ ಬಾರಿಗೆ ನಡೆಯಲಿದೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಸಂಸ್ಥೆಯ ಮುಖ್ಯಸ್ಥೆ ಬೃಂದಾ ಪ್ರಸಾದ್, ಹತ್ತನೇ ವರ್ಷದ ಸೈಮಾ-2022 ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನಲ್ಲಿ ನಡೆಸುತ್ತಿದ್ದೇವೆ. ಬೆಂಗಳೂರಿನಲ್ಲೇ ಈ ಕಾರ್ಯಕ್ರಮ ನಡೆಸಲು 2 ಪ್ರಮುಖ ಕಾರಣಗಳಿವೆ. ಒಂದು ನಮ್ಮೆಲ್ಲರ ನೆಚ್ಚಿನ ನಟ ಪುನೀತ್ ರಾಜಕುಮಾರ್ ಅವರಿಗೆ ಗೌರವ ಸಲ್ಲಿಸುವಸಲುವಾಗಿ. ಮತ್ತೊಂದು ಕನ್ನಡ ಚಿತ್ರಗಳು ಈಗ ಪ್ಯಾನ್ ಇಂಡಿಯಾದಲ್ಲಿ ಸಾಕಷ್ಟು ಜನಪ್ರಿಯವಾಗುತ್ತಿವೆ ಹಾಗಾಗಿ ಈ ಬಾರಿ ಬೆಂಗಳೂರನ್ನೇ ಆಯ್ಕೆ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ತೆಲುಗು ಖಳನಟ ರಾಣಾ ದಗ್ಗುಬಾಟಿ ಮಾತನಾಡಿ ಒಂದು ಪ್ರಶಸ್ತಿ ಸಮಾರಂಭವನ್ನು ಹತ್ತು ವರ್ಷಗಳ ಕಾಲ ಯಶಸ್ವಿಯಾಗಿ ನಡೆಸುವುದು ಸುಲಭದ ಮಾತಲ್ಲ. ಬೃಂದಾ ಪ್ರಸಾದ್ ಮತ್ತವರ ತಂಡ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಬಾರಿ ಹತ್ತನೇ ವರ್ಷದ 'ಸೈಮಾ' ಅವಾರ್ಡ್ಸ್ ನನಗೆ ಪ್ರಿಯವಾದ ಬೆಂಗಳೂರಿನಲ್ಲಿ ನಡೆಯುತ್ತಿರುವುದಕ್ಕೆ ಖುಷಿಯಾಗಿದೆ ಎಂದರು.

ನಟ ಡಾಲಿ ಧನಂಜಯ ಮಾತನಾಡಿ, ನನಗೆ 'ಸೈಮಾ' ಬರೀ ಪ್ರಶಸ್ತಿ ಅಲ್ಲ, ಅದೊಂದು ನೆನಪು. ನಾನು ಮೊದಲ ಬಾರಿಗೆ ಈ ಪ್ರಶಸ್ತಿ ಸ್ವೀಕರಿಸಲು ಮಲೇಷಿಯಾಗೆ ಹೋಗಿದ್ದು ನನ್ನ ಹೃದಯದಲ್ಲಿ ಇನ್ನೂ ಹಸಿರಾಗಿದೆ. ಈ ಬಾರಿ ನಮ್ಮ ಬೆಂಗಳೂರಿನಲ್ಲಿ ಈ ಸಮಾರಂಭ ನಡೆಯುತ್ತಿರುವುದಕ್ಕೆ ಹೆಮ್ಮೆ ಯೆನಿಸಿದೆ. ಪದೇಪದೆ ಬೆಂಗಳೂರಿನಲ್ಲೇ ಈ ಸಮಾರಂಭ ನಡೆಸಬೇಕು ಎನಿಸುವಂತೆ ನಾವೆಲ್ಲ ಯಶಸ್ವಿಗೊಳಿಸಬೇಕಿದೆ ಎಂದು ಹೇಳಿದರು. ನಟಿ ಶಾನ್ವಿ ಶ್ರೀವಾಸ್ತವ್ ಮಾತನಾಡಿ ನನಗೆ ಬೆಂಗಳೂರು ತುಂಬಾ ಇಷ್ಟ. ಸಾಕಷ್ಟು ಕನ್ನಡ ಚಿತ್ರಗಳಲ್ಲಿ ನಟಿಸಿದ್ದೇನೆ. ಚಿತ್ರೀಕರಣ ಸಮಯದಲ್ಲಿ ಹಲವು ದಿನಗಳನ್ನು ಇಲ್ಲೇ ಕಳೆದಿದ್ದೇನೆ. ಈ ಬಾರಿ ಅಪ್ಪು ಅವರ ಸ್ಮರಣೆಯೊಂದಿಗೆ ಈ ಸಮಾರಂಭ ನಡೆಯುತ್ತಿದೆ ಎಂದು ತಿಳಿಸಿದರು. ನಟಿಯರಾದ ಶ್ರೀಲೀಲಾ, ಫರಿಯಾ ಅಬ್ದುಲ್ಲಾ ಮುಂತಾದವರು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬಾನೆತ್ತರಕ್ಕೆ ಹಾರಿದ ಗಾಳಿಪಟ

ಎರಡು ವಾರಗಳ ಹಿಂದಷ್ಟೇ ಬಿಡುಗಡೆಯಾದ ಗಣೇಶ್ ಅಭಿನಯದ 'ಗಾಳಿಪಟ-2' ಚಿತ್ರವು ಬಾಕ್ಸಾಫೀಸಿನಲ್ಲಿ ಧೂಳೆಬ್ಬಿಸುತ್ತಿದೆ. ಎಲ್ಲಾ ಕೇಂದ್ರಗಳಲ್ಲಿ ಉತ್ತಮ ಗಳಿಕೆ ಮಾಡುತ್ತಿರುವ ಈ ಚಿತ್ರ ಈಗಾಗಲೇ ಹದಿನೈದು ಕೋಟಿಗೂ ಹೆಚ್ಚು ಶೇರ್ ಪಡೆದಿದೆ. ಹಿಂದೆ ಗಾಳಿಪಟ ನಿರ್ದೇಶಿಸಿದ್ದ ಯೋಗರಾಜ ಭಟ್ರೇ ಎರಡನೇ ಭಾಗಕ್ಕೂ ಆಕ್ಷನ್‌ಕಟ್ ಹೇಳಿದ್ದಾರೆ. ವಿಶೇಷವಾಗಿ ಈ ಚಿತ್ರ ಸಾಗರದಾಚೆಯ ದೇಶಗಳಲ್ಲಿ ಅತಿ ಹೆಚ್ಚು ಪ್ರದರ್ಶನ ಕಾಣುವ ಮೂಲಕ ಬಾನೆತ್ತರಕ್ಕೆ ಹಾರಿದೆ. ಗಣೇಶ್ ಅವರಿಗೆ ವಿದೇಶಗಳಲ್ಲೂ ಹೆಚ್ಚಿನ ಸಂಖ್ಯೆಯ ಅಭಿಮಾನಿ ಬಳಗವಿದೆ. ಅದು ಈ ಚಿತ್ರಕ್ಕೂ ಪ್ಲಸ್ ಆಗಿದೆ. ಸತತ ಸೋಲುಗಳನ್ನೇ ಕಂಡಿದ್ದ ನಿರ್ಮಾಪಕ ರಮೇಶ್‌ರೆಡ್ಡಿ ಅವರ ಮುಖದಲ್ಲಿ ಗಾಳಿಪಟ ಸಂತಸವನ್ನಂತೂ ತಂದಿದೆ. ಸ್ನೇಹಿತರ ಪ್ರಾಮುಖ್ಯತೆ, ಸ್ನೇಹದ ಮೌಲ್ಯವನ್ನು ಎತ್ತಿ ಹಿಡಿಯುವ ಕಂಟೆಂಟ್‌ವುಳ್ಳ ಈ ಚಿತ್ರವನ್ನು ಮೊದಲು ಅಭಿಮಾನಿಗಳು ಗೆಲ್ಲಿಸಿದರೆ, ನಂತರ ಫ್ಯಾಮಿಲಿ ಆಡಿಯನ್ಸ್ ಮುಂದೆ ತೆಗೆದುಕೊಂಡು ಹೋಗುತ್ತಿದ್ದಾರೆ.



ಮಾಧ್ಯಮಗಳಿಂದಲೂ ಉತ್ತಮ ವಿಮರ್ಶೆ ಗಳಿಸಿದ್ದ ಈ ಸಿನಿಮಾ ಮೂಲಕ ಮತ್ತೊಮ್ಮೆ ಗಣೇಶ್, ಭಟ್ರು ಜೋಡಿ ಹಿಟ್ ಆಗಿದೆ. ವಿಶ್ವದಾದ್ಯಂತ ಜೋರಾಗೇ ಸದ್ದು ಮಾಡುತ್ತಿರುವ ಚಿತ್ರವೀಗ ಮೂರನೇ ವಾರಕ್ಕೆ ಕಾಲಿಟ್ಟಿದೆ.

ಈ ಸಂದರ್ಭದಲ್ಲಿ ಚಿತ್ರವನ್ನು ಪ್ರೋತ್ಸಾಹಿಸಿ ಗೆಲುವಿಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸುವ ಸುಂದರ ಕಾರ್ಯಕ್ರಮವನ್ನು ಚಿತ್ರದ ನಿರ್ಮಾಪಕರಾದ ರಮೇಶ್‌ರೆಡ್ಡಿ ಆಯೋಜಿಸಿದ್ದರು, ಈ ಸಂದರ್ಭದಲ್ಲಿ ನಿರ್ದೇಶಕ ಯೋಗರಾಜ ಭಟ್ರು, ಕಲಾವಿದರಾದ ಅನಂತನಾಗ್, ಗಣೇಶ್, ಶ್ರೀನಾಥ್, ಪವನ್‌ಕುಮಾರ್, ರಂಗಾಯಣ ರಘು, ನಾಯಕಿಯರಾದ ಶರ್ಮಿಳಾ ಮಾಂಡ್ರೆ, ವೈಭವಿ ಶಾಂಡಿಲ್ಯ, ಪದ್ಮಜಾರಾವ್, ಸಾಹಿತಿ ಜಯಂತ್ ಕಾಯ್ಕಿಣಿ, ಛಾಯಾಗ್ರಾಹಕ ಸಂತೋಷ್ ರೈ ಪತಾಜೆ ಸೇರಿದಂತೆ ಗಾಳಿಪಟ-2 ಇಡೀ ತಂಡವೇ ಹಾಜರಿದ್ದು ಮಾತಾಡಿದರು. ನಿರ್ಮಾಪಕ ರಮೇಶ್ ರೆಡ್ಡಿ ಮಾತನಾಡಿ, ಇದು ಸಕ್ಸಸ್‌ಮೀಟ್ ಅಲ್ಲ, ನೀವು ಬರೆದ ಉತ್ತಮ ಬರಹ ಹಾಗೂ ವಿಮರ್ಶೆಗಳು ನಮ್ಮ ಚಿತ್ರದ ಗೆಲುವಿಗೆ ಸಹಕಾರಿಯಾದವು. ಈ ಮೂಲಕ ನಿಮಗೆಲ್ಲ ಧನ್ಯವಾದ ಹೇಳುತ್ತಿದ್ದೇನೆ. ನಾನು ಈ ಪರೀಕ್ಷೆಯಲ್ಲಿ ಪಾಸಾಗಿದ್ದೇನೆಂದು ಹೇಳಲು ಸಂತಸವಾಗುತ್ತಿದೆ ಎಂದರು.

ಮೈಸೂರು ಮಿತ್ರ ಶುಕ್ರವಾರ 26 ಆಗಸ್ಟ್ 2022

ಹೋಮ್ ಸ್ಟೇನಲ್ಲಿ ಕಳವು: ಮೂವರ ಬಂಧನ



ಶ್ರೀಮಂಗಲ, ಆ.25– ಶ್ರೀಮಂಗಲ ಠಾಣಾ ವ್ಯಾಪ್ತಿಯ ಬೀರುಗ ಗ್ರಾಮದ ಹೋಮ್ ಸ್ಟೇನಲ್ಲಿ ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬೀರುಗ ಗ್ರಾಮದ ನಾಯಿಕಲ್ ನಿವಾಸಿಗಳಾದ ಮಂಜು, ಸಂಜು ಹಾಗೂ ಸುಧೀರ್ ಬಂಧಿತ ಆರೋಪಿಗಳು. ಜಿಲ್ಲಾ ಪೊಲೀಸ್ ಅಧೀಕ್ಷಕ ಎಂ.ಎ.ಅಯ್ಯಪ್ಪ ಹಾಗೂ ಪೊಲೀಸ್ ಉಪಾಧೀಕ್ಷಕ ನಿರಂಜನ್ ರಾಜೆ ಅರಸ್ ಅವರ ಮಾರ್ಗದರ್ಶನದಲ್ಲಿ ಕುಟ್ಟ ವೃತ್ತ ನಿರೀಕ್ಷಕ ಮಂಜಪ್ಪ ಅವರ ನಿರ್ದೇಶನದ ಮೇರೆಗೆ ಶ್ರೀಮಂಗಲ ಠಾಣಾಧಿಕಾರಿ ರವಿಶಂಕರ್ ಹಾಗೂ ಎ.ಎಸ್.ಐ.ಬೋಪಯ್ಯ, ಸಿಬ್ಬಂದಿ ಈ ಪ್ರಕರಣವನ್ನು ಭೇದಿಸಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಗೋಮಾಂಸ ಮಾರಾಟ ಪ್ರಕರಣ

ತಲೆಮರೆಸಿಕೊಂಡಿದ್ದ ಆರೋಪಿ ಸೆರೆ



ನಾಪೋಕ್ಲು, ಆ.25– ಅಕ್ರಮವಾಗಿ ಗೋಮಾಂಸ ಮಾರಾಟ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಆರೋಪಿ ಅಸ್ಸಾಂ ಮೂಲದ ಕಾರ್ಮಿಕ ಚಾನ್ ಮಿಯಾ ಆಲಿ(27) ಎಂಬಾತನನ್ನು ಚೋನಕೆರೆಯ ಬಸ್ ತಂಗುದಾಣದಲ್ಲಿ ಬುಧವಾರ ಸಂಜೆ ಸ್ಥಳೀಯ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಕಾಫಿ ತೋಟದಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದ ಈ ಚೋನಕೆರೆ ಎಂಬಲ್ಲಿ ಸಂಶಯಪದವಾಗಿ ಬ್ಯಾಗು ಸಮೇತ ರಸ್ತೆಯಲ್ಲಿ ತೆರಳುತ್ತಿದ್ದ ಆರೋಪಿಗಳನ್ನು ಖಚಿತ ಮಾಹಿತಿ ಆಧರಿಸಿ ಪೊಲೀಸರು ಮಾಲುಸಹಿತ ಬಂಧಿಸಿದ್ದರು.

ಅಸ್ಸಾಂ ಉದಲ್ ಗಿರಿ ನಿವಾಸಿಗಳಾದ ಸಹಜಾನ್ ಆಲಿ(40) ಸೈದುಲ್ ಇಸ್ಲಾಂ(22) ಬಂಧಿಸಿ ಇವರಲ್ಲಿದ್ದ 12ಕೆ.ಜಿ ಗೋಮಾಂಸ ಹಾಗೂ ಚರ್ಮ ಸಹಿತ ವಶಪಡಿಸಿಕೊಳ್ಳಲಾಗಿತ್ತು. ಇನ್ನೊಬ್ಬ ಆರೋಪಿ ಚಾನ್ ಮಿಯಾ ಆಲಿ(27) ತಲೆಮರೆಸಿಕೊಂಡಿದ್ದ.

ಈ ಸಂದರ್ಭ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದು ಪರ ಸಂಘಟನೆಗಳು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿ ಪ್ರತಿಭಟನೆಯ ಮುನ್ನೆಚ್ಚರಿಕೆ ನೀಡಿದ್ದವು.

ಡಿವೈಎಸ್‌ಪಿ ಅನುಪ್ ಮಾದಪ್ಪ ಅವರ ಮಾರ್ಗದರ್ಶನದಲ್ಲಿ ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಸದಾಶಿವ ಅವರ ನೇತೃತ್ವದಲ್ಲಿ ದಫೇದಾರ ರವಿ, ಲವ, ಪೊಲೀಸ್ ಸಿಬ್ಬಂದಿ ಶರತ್ ಕುಮಾರ್ ಈ ಕಾರ್ಯಾಚರಣೆ ನಡೆಸಿದ್ದರು.

ಜಿಲ್ಲೆಯಲ್ಲಿ ಮುಂದುವರೆದ ನಿಷೇಧಾಜ್ಞೆ

ಜನರಲ್ಲಿ ಧೈರ್ಯ ತುಂಬಿದ ಪೊಲೀಸ್ ಪಥ ಸಂಚಲನ



ಮಡಿಕೇರಿ, ಆ25– ಕೊಡಗು ಜಿಲ್ಲೆಯಲ್ಲಿ ಸೆಕ್ಷನ್ 144 ಅಡಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದು, ಕಾನೂನು ಬಾಹಿರ ಕೃತ್ಯಗಳಿಗೆ ಯಾವುದೇ ಅವಕಾಶವಾಗದಂತೆ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ ಕುಮಾರ್ ನೇತೃತ್ವ ವಹಿಸಿದ್ದಾರೆ.

ರಾಜಕೀಯ ಪಕ್ಷಗಳು ಮಡಿಕೇರಿ ಚಲೋ ಹಾಗೂ ಜನಜಾಗೃತಿ ಸಮಾವೇಶ ಕರೆ ನೀಡಿದ ಹಿನ್ನೆಲೆಯಲ್ಲಿ ಆ.27ರ ಸಂಜೆ 6 ಗಂಟೆಯವರೆಗೆ ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಧೈರ್ಯ ತುಂಬುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ನಗರದಲ್ಲಿ ಬೃಹತ್ ಪಥ ಸಂಚಲನ ನಡೆಸಿತು. ನಗರದ ಎ.ವಿ. ಶಾಲೆ ಬಳಿಯಿಂದ ಹೊರಟ ಪೊಲೀಸ್ ಪಥ ಸಂಚಲನಕ್ಕೆ ಎಡಿಜಿಪಿ ಅಲೋಕ್ ಕುಮಾರ್ ಚಾಲನೆ ನೀಡಿದರಲ್ಲದೇ, ಸ್ವತಃ ತಾವೇ ಪಥ ಸಂಚಲನವನ್ನು ಮುನ್ನಡೆಸಿದರು.

ಮಾರುಕಟ್ಟೆ ರಸ್ತೆ, ಮಹದೇವಪೇಟೆ, ಇಂದಿರಾ ಗಾಂಧಿ ವೃತ್ತ, ಸ್ಕ್ವಾಡ್ರನ್ ಲೀಡರ್ ಎ.ಬಿ. ದೇವಯ್ಯ ವೃತ್ತ, ಮೇಜರ್ ಮಂಗೇರಿರ ಮುತ್ತಣ್ಣ ವೃತ್ತ, ಜನರಲ್ ತಿಮ್ಮಯ್ಯ ವೃತ್ತ ಸೇರಿದಂತೆ ನಗರದ ಪ್ರಮುಖ ಬೀದಿಗಳಲ್ಲಿ ಸಾವಿರಾರು ಪೊಲೀಸ್ ಸಿಬ್ಬಂದಿಗಳು ಪಥ ಸಂಚಲನ ನಡೆಸುವ ಮೂಲಕ ಕಾನೂನು ಸುವ್ಯವಸ್ಥೆ ಕಾಪಾಡಲು ಇಲಾಖೆ ಸಮರ್ಥವಾಗಿದೆ ಎಂದು ಸಾರ್ವಜನಿಕರಿಗೆ ಸಂದೇಶ ನೀಡಿದರು. ಯಾವುದೇ ರೀತಿಯ ಕೃತ್ಯಗಳಿಗೆ ಅವಕಾಶ ಇಲ್ಲ, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಪಥ ಸಂಚಲ ನದ ಮೂಲಕ ಅಭಯ ನೀಡಲಾಯಿತು.

ಇದೇ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಎಡಿಜಿಪಿ ಅಲೋಕ್ ಕುಮಾರ್, ಕೊಡಗು ಸೂಕ್ಷ್ಮ ಜಿಲ್ಲೆಯಾಗಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಸೆಕ್ಷನ್ 144 ಅಡಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಪೊಲೀಸ್ ಇಲಾಖೆ ಜಿಲ್ಲೆಯನ್ನು ಸಂಪರ್ಕಿಸುವ ವಿವಿಧ ಕಡೆಗಳಲ್ಲಿ 20ಕ್ಕೂ ಹೆಚ್ಚು ಚೆಕ್ ಪೋಸ್ಟ್‌ಗಳನ್ನು ತೆರೆದಿದ್ದು, ಕಟ್ಟು ನಿಟ್ಟಿನ ತಪಾಸಣೆ ಮಾಡಲಾಗುತ್ತಿದೆ ಎಂದರು.

ಕೊಡಗು ಪ್ರವಾಸಿ ಜಿಲ್ಲೆಯಾಗಿರುವ ಕಾರಣ ಹೊರ ಊರುಗಳಿಂದ ಬರುವವರ ಉದ್ದೇಶಗಳನ್ನು ತಿಳಿದುಕೊಂಡು ಅವರ ಸಂಚಾರಕ್ಕೆ ಅವಕಾಶ ಮಾಡಿ ಕೊಡಲಾಗುತ್ತಿದೆ. ಈ ದಿಸೆಯಲ್ಲಿ ಈಗಾಗಲೇ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕೇರಳ–ಕೊಡಗು ಗಡಿ ಭಾಗಗಳ ಕುಟ್ಟ, ಮಾಕುಟ್ಟ, ಕರಿಕೆ ಭಾಗಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪಥ ಸಂಚಲನದಲ್ಲಿ ದಕ್ಷಿಣ ವಲಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಮಧುಕರ್ ಪವಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಅಯ್ಯಪ್ಪ, ಚಾಮರಾಜನಗರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಜಿಲ್ಲೆಯ ಎಲ್ಲಾ ಠಾಣೆಗಳ ಅಧಿಕಾರಿಗಳು, ಕೊಡಗು ಕಮಾಂಡೋ ಪಡೆ, ಜಿಲ್ಲಾ ಸಶಸ್ತ್ರ ಪೊಲೀಸ್ ಸಿಬ್ಬಂದಿಗಳು, ಕೆಎಸ್‌ಆರ್‌ಪಿ ಪೊಲೀಸ್ ತುಕಡಿಗಳ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಜಿಲ್ಲೆಯಲ್ಲಿ ವಾರಾಂತ್ಯ ನಿಷೇಧಾಜ್ಞೆ ಬೇಡ

ಮಡಿಕೇರಿ ಆ.25– ಕೊಡಗು ಜಿಲ್ಲೆಯಲ್ಲಿ ಆ.27 ರ ಸಂಜೆ 6 ಗಂಟೆಯವರೆಗೆ ನಿಷೇಧಾಜ್ಞೆ ಜಾರಿ ಮಾಡಿರುವುದರಿಂದ ಪ್ರವಾಸೋದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಆರ್ಥಿಕ ಹಿನ್ನಡೆ ಉಂಟಾಗಲಿದೆ. ಆದ್ದರಿಂದ ನಿಷೇಧಾಜ್ಞೆ ತೆರವುಗೊಳಿಸಬೇಕೆಂದು ಕೊಡಗು ಪ್ರವಾಸೋದ್ಯಮ ಅವಲಂಬಿತರ ಒಕ್ಕೂಟ ಒತ್ತಾಯಿಸಿದೆ. ಪತ್ರಿಕಾ ಪ್ರಕಟಣೆ ನೀಡಿರುವ ಒಕ್ಕೂಟದ ಅಧ್ಯಕ್ಷ ಕೆ.ಕೆ.ಮಂಜುನಾಥ್ ಕುಮಾರ್ ಕೋವಿಡ್ ಸಂಕಷ್ಟದ ದಿನಗಳಿಂದ ಈಗಷ್ಟೇ ಹೊರ ಬಂದು ಪ್ರವಾಸೋದ್ಯಮ ಚೇತರಿಸಿಕೊಳ್ಳುತ್ತಿರುವ ಹೊತ್ತಿನಲ್ಲೇ ನಿಷೇಧಾಜ್ಞೆಯಂತಹ ಕ್ರಮಗಳನ್ನು ಕೈಗೊಂಡರೆ ಸಾಕಷ್ಟು ನಷ್ಟ ಅನುಭವಿಸಬೇಕಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರವಾಸೋದ್ಯಮ ಕ್ಷೇತ್ರವನ್ನೇ ನಂಬಿ ಕೊಡಗಿನ ಸಾವಿರಾರು ಮಂದಿ ಜೀವನ ಸಾಗಿಸುತ್ತಿದ್ದಾರೆ. ವಾರಾಂತ್ಯದಲ್ಲಷ್ಟೇ ಹೆಚ್ಚಿನ ವ್ಯಾಪಾರವಾಗುತ್ತಿದ್ದು, ಈ ಸಂದರ್ಭದಲ್ಲೇ ನಿಷೇಧಾಜ್ಞೆ ಜಾರಿಯಲ್ಲಿದ್ದರೆ ಪ್ರವಾಸಿಗರ ಆಗಮನ ಕ್ಷೀಣಿಸಲಿದೆ. ಅಲ್ಲದೆ ಜಿಲ್ಲೆಯ ಬಗ್ಗೆ ತಪ್ಪು ಅಭಿಪ್ರಾಯಗಳು ರವಾನೆಯಾಗುವುದರಿಂದ ಪ್ರವಾಸೋದ್ಯಮಕ್ಕೆ ದೊಡ್ಡ ಹೊಡೆತ ಬೀಳಲಿದೆ. ಆಟೋ ಚಾಲಕನಿಂದ ಹಿಡಿದು ಹೊಟೇಲ್, ರೆಸಾರ್ಟ್ ಮಾಲೀಕನವರೆಗೂ ದೊಡ್ಡ ನಷ್ಟ ಎದುರಾಗಲಿದೆ ಎಂದಿದ್ದಾರೆ.

ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯಕ್ಕೆ ಶ್ರೀ ಕೃಷ್ಣ ಮಂಟಪ ಕೊಡುಗೆ



ಮಡಿಕೇರಿ ನಗರದ ಗೌಳಿಬೀದಿಯ ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯಕ್ಕೆ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಶನಿವಾರಸಂತೆಯ ಉದ್ಯಮಿ ಚಾಮೇರ ಪವನ್ ದೇವಯ್ಯ ಆಕರ್ಷಕ ಹಲಸಿನ ಮರದ ಮಂಟಪವನ್ನು ನೀಡಿದರು.

ಪಾಠ ಮಾಡುತ್ತಿದ್ದಾಗಲೇ ಶಿಕ್ಷಕಿ ಹೃದಯಾಘಾತದಿಂದ ಸಾವು



ವಿರಾಜಪೇಟೆ, ಆ.25– ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗಲೇ ಹೃದಯಾಘಾತದಿಂದ ಶಿಕ್ಷಕಿ ಸಾವನ್ನಪ್ಪಿರುವ ಘಟನೆ ಪಟ್ಟಣದ ರೋಟರಿ ಶಾಲೆಯಲ್ಲಿ ಸಂಭವಿಸಿದೆ. ಶಾಲೆಯ ಹಿರಿಯ ಶಿಕ್ಷಕಿ ಕೆ.ಇಂದಿರ ಸುಬ್ಬಯ್ಯ (55) ಎಂಬವರೇ ಸಾವನ್ನಪ್ಪಿದವರು.

ಇಂದಿರ ಸುಬ್ಬಯ್ಯ ಅವರು ಇಂದು ಶಾಲೆಯಲ್ಲಿ ಎಂದಿನಂತೆ ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ, ಹೃದಯಾಘಾತದಿಂದ ಕುಸಿದು ಬಿದ್ದರೆನ್ನಲಾಗಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ದಾಗಲು ಮಾಡಲಾಯಿತಾದರೂ ಅಷ್ಟರಲ್ಲಿ ಅವರು ಮೃತಪಟ್ಟಿದ್ದಾರೆ.

ಕಾಂಗ್ರೆಸ್‌ನಿಂದ ಅಮೃತ ನಡಿಗೆ

ಸ್ವಾತಂತ್ರ್ಯ ತಂದುಕೊಡುವಲ್ಲಿ ಕಾಂಗ್ರೆಸ್ ಮಹತ್ತರ ಪಾತ್ರ : ಚೆಲುವರಾಯಸ್ವಾಮಿ



ಹನೂರು, ಆ.25– ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವ ದಿಸೆಯಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರ ಮಹತ್ತರವಾಗಿದೆ. ಮಹಾತ್ಮ ಗಾಂಧಿ, ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿ ಸೇರಿದಂತೆ ಅನೇಕ ಮಹನೀಯರು ಕಾಂಗ್ರೆಸ್ ಪಕ್ಷದ ಮೂಲಕ ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ ಎಂದು ಮಾಜಿ ಸಚಿವ ಚೆಲುವರಾಯಸ್ವಾಮಿ ತಿಳಿಸಿದರು.

ದೇಶದ 75ನೇ ಸ್ವಾತಂತ್ರ್ಯ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ಪಕ್ಷದ ವತಿಯಿಂದ ದೊಡ್ಡಿಂದುವಾಡಿ ಗ್ರಾಮದಿಂದ ಹನೂರಿನವರೆಗೆ ಕೈಗೊಳ್ಳಲಾಗಿದ್ದ ಅಮೃತ ನಡಿಗೆ ಕಾರ್ಯಕ್ರಮಕ್ಕೆ ದೊಡ್ಡಿಂದುವಾಡಿ ಗ್ರಾಮದಲ್ಲಿ ಚಾಲನೆ ನೀಡಿ ಬಳಿಕ ಮಾತನಾಡಿದರು.

ಕಾಂಗ್ರೆಸ್ ಸ್ವಾತಂತ್ರ್ಯದ ಬಳಿಕವೂ ಕೂಡ ದೇಶದ ಜನತೆಯ ಒಳಿತಿಗೆ ಶ್ರಮಿಸಿದೆ. ಬಿಜೆಪಿ ದಿನನಿತ್ಯ ಬಳಕೆಯ ವಸ್ತುಗಳ ಬೆಲೆಯನ್ನು ಹೆಚ್ಚಳ ಮಾಡುವ ಮೂಲಕ ದೇಶದ ಜನತೆಯನ್ನು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಬಡವರ ಕಲ್ಯಾಣಕ್ಕೆ ಶ್ರಮಿಸಿದ್ದಾರೆ. ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಉತ್ತಮ ಕಾರ್ಯಗಳನ್ನು ಕೈಗೊಂಡಿರುವ ಶಾಸಕ ಆರ್. ನರೇಂದ್ರ ಅವರನ್ನು ಮತ್ತೊಮ್ಮೆ ಶಾಸಕರನ್ನಾಗಿ ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ಶಾಸಕ ಪುಟ್ಟರಂಗಶೆಟ್ಟಿ ಮಾತನಾಡಿ, ಕಾಂಗ್ರೆಸ್ ಹುಟ್ಟಿದ್ದೆ ಭಾರತ ದೇಶದ ಸ್ವಾತಂತ್ರ್ಯ ತಂದು ಕೊಡಲು. ಕಾಂಗ್ರೆಸ್ ಪಕ್ಷದ ಅನೇಕ ಮಹನೀಯರ ತ್ಯಾಗ ಬಲಿದಾನದಿಂದ ಸ್ವಾತಂತ್ರ್ಯ ಸಿಕ್ಕಿದೆ. ಬಿಜೆಪಿ ಸರ್ಕಾರ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದೆ. ಬಿಜೆಪಿ ಜಾತಿ ಕೋಮು ಗಲಭೆ ಬಣ್ಣ ಕಟ್ಟಿ ಅಶಾಂತಿಯನ್ನು ಉಂಟು ಮಾಡುತ್ತಿದೆ. ಇತ್ತೀಚಿಗೆ ಗಣೇಶ ಉತ್ಸವದಲ್ಲಿ ಸಾವರ್ಕರ್ ಫೋಟೋವನ್ನು ಹಾಕುತ್ತೇವೆ ಎಂದು ಹೊಸ ತಗಾದೆ ತೆಗೆದಿದ್ದಾರೆ. ಸಾವರ್ಕರ್ ಯಾರು, ಅವರ ಕೊಡುಗೆ ಏನು. ಭಗತ್ ಸಿಂಗ್ ಅಂತಹ ಮೇರು ಸ್ವಾತಂತ್ರ್ಯ ಹೋರಾಟಗಾರರು ಇವರಿಗೆ ನೆನಪಿಗೆ ಬರುವುದಿಲ್ಲವೆ ಎಂದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್ ಪಕ್ಷದವರು ಇಂದಿನ ಯುವ ಪೀಳಿಗೆಗೆ ದೇಶಪ್ರೇಮವನ್ನು ಬೆಳೆಸುವ ನಿಟ್ಟಿನಲ್ಲಿ ಅಮೃತ ನಡಿಗೆ ಪಾದಯಾತ್ರೆಯನ್ನು ಕೈಗೊಂಡಿರುವುದು ಶ್ಲಾಘನೀಯವಾದದ್ದು. ಸಾವರ್ಕರ್ ಲಂಡನ್ ಜೈಲಿನಲ್ಲಿ ತನ್ನನ್ನು ಬಿಡುಗಡೆಗೊಳಿಸಿ ಭಾರತಕ್ಕೆ ಕಳಿಸಬೇಡಿ ಎಂದಿದ್ದರು. ಅನೇಕ ಬಾರಿ ಬ್ರಿಟಿಷರಿಗೆ ಕ್ಷಮಾಪಣಾ ಪತ್ರವನ್ನು ಬರೆದಿದ್ದಾರೆ. ಇಂಥವರನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಬಿಜೆಪಿ ಬಿಂಬಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಕಾಂಗ್ರೆಸ್ ಸ್ವತಂತ್ರ ನಂತರ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರೋಗ್ಯ ಕ್ಷೇತ್ರ ಸೇರಿದಂತೆ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಆರೋಗ್ಯ ಕ್ಷೇತ್ರದಲ್ಲಿ ಕಾಲರ, ಕುಷ್ಟರೋಗ, ಸಿಡುಬು ಮುಂತಾದ ಮಾರಕ ರೋಗಗಳನ್ನು ನಿರ್ನಾಮ ಮಾಡಿದೆ. ಏಡ್ಸ್ ರೋಗದಿಂದ ದೇಶದ ಜನವೇ ಆತಂಕಕ್ಕೆ ಒಳಗಾಗಿದ್ದರು. ಆದರೆ ಇಂತಹ ರೋಗವನ್ನು ವ್ಯವಸ್ಥಿತವಾಗಿ ಹತ್ತಿಕ್ಕುವ ನಿಟ್ಟಿನಲ್ಲಿ ದಾಪುಗಾಲಿಟ್ಟಿತ್ತು ಎಂದರು.

ದೊಡ್ಡಿಂದುವಾಡಿ ಗ್ರಾಮದಿಂದ ಹನೂರಿನವರೆಗೆ ಅಪಾರ ಸಂಖ್ಯೆಯ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಪಾದಯಾತ್ರಿಗಳಿಗೆ ಗ್ರಾಮಗಳಲ್ಲಿ ನೀರು, ಮಜ್ಜಿಗೆ, ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಶಾಸಕ ಆರ್.ನರೇಂದ್ರ, ಮಾಜಿ ಶಾಸಕರಾದ ಬಾಲರಾಜು, ಜಯಣ್ಣ, ಎ.ಆರ್. ಕೃಷ್ಣಮೂರ್ತಿ ಸೇರಿದಂತೆ ವಿವಿಧ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

15 ವರ್ಷಗಳ ಬಳಿಕ ಭರ್ತಿಯಾದ ದೊಡ್ಡಕೆರೆ, ಚಿಕ್ಕಕೆರೆಗೆ ಪೂಜೆ

ಚಾಮರಾಜನಗರ, ಆ.25– ತಾಲೂಕಿನ ಅವಳಿ ಜಲಾಶಯಗಳ ವ್ಯಾಪ್ತಿಗೆ ಬರುವ ದೊಡ್ಡಕೆರೆ, ಚಿಕ್ಕಕೆರೆ ಹಾಗೂ ಸಿಂಡಕೆರೆ 15 ವರ್ಷಗಳ ನಂತರ ಭರ್ತಿಯಾದ ಹಿನ್ನೆಲೆಯಲ್ಲಿ ಅಚ್ಚುಕಟ್ಟುದಾರ ಹಾಗೂ ಗ್ರಾಮಸ್ಥರು ಸಂಭ್ರಮದಿಂದ ಗಂಗಾ ಪೂಜೆ ನೆರವೇರಿಸಿದರು.

ಕೆರೆಗಳಿಗೆ ಪೂಜೆ ಸಲ್ಲಿಸಿದ ಕೋಮುವಾರು ಯಜಮಾನ ಆರ್.ಪುಟ್ಟಮಲ್ಲಪ್ಪ ಮಾತನಾಡಿ, ಈ ಭಾಗದ ಜೀವನಾಡಿಗಳಾದ 3 ಕೆರೆಗಳು ತುಂಬಿ ಬಹಳ ವರ್ಷಗಳೇ ಕಳೆದಿತ್ತು ಈ ಬಾರಿ ಜೂನ್, ಜುಲೈ ತಿಂಗಳಲ್ಲಿ ಹೆಚ್ಚು ಮಳೆಯಾಗಿವೆ. ಸುವರ್ಣಾವತಿ, ಚಿಕ್ಕಹೊಳೆ ಜಲಾಶಯ ಹೆಚ್ಚಿನ ನೀರು ಹರಿಸಿದ ಹಿನ್ನೆಲೆಯಲ್ಲಿ ನಮ್ಮ ಕೆರೆಗಳು ಭರ್ತಿಯಾಗಿ ಈ ಭಾಗ ಅಂತರ್ಜಲ ವೃದ್ಧಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಾಡಾಧ್ಯಕ್ಷ ಜಿ.ನಿಜಗುಣರಾಜು, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ



ಎಂ.ರಾಮಚಂದ್ರ ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ, ಯಜಮಾನರು, ಮುಖಂಡರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಚಾ.ನಗರದಲ್ಲೂ ವಿಜೃಂಭಣೆಯ ದಸರಾ

ಚಾಮರಾಜನಗರ, ಆ.25– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಭಾಗವಾಗಿ ಚಾಮರಾಜನಗರ ಜಿಲ್ಲೆಯಲ್ಲೂ ನಾಲ್ಕು ದಿನಗಳ ಕಾಲ ದಸರಾವನ್ನು ವಿಜೃಂಭಣೆಯಿಂದ ಆಚರಿಸುವ ಸಂಬಂಧ ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರ ಅಧ್ಯಕ್ಷತೆಯಲ್ಲಿ ಚಾಮರಾಜನಗರ ದಸರಾ ಆಚರಣೆ ಸಂಬಂಧ ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಕಲಾವಿದರು, ಸಾಹಿತಿಗಳು, ಇತರೆ ಪ್ರಮುಖರು ಹಾಗೂ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಲಾಯಿತು.

ಸಂಘ ಸಂಸ್ಥೆಗಳ ಮುಖಂಡರು, ಪ್ರತಿನಿಧಿಗಳು, ಕಲಾವಿದರು, ಸಾಹಿತಿಗಳು, ಇತರರು ಸಭೆಯ ಆರಂಭದಲ್ಲಿಯೇ ದಸರ ಮಹೋತ್ಸವ ಆಯೋಜನೆ ಬಗ್ಗೆ ತಮ್ಮ ಸಲಹೆ ಅಭಿಪ್ರಾಯಗಳನ್ನು ನೀಡಿದರು.

ಈ ಬಾರಿ ದಸರಾವನ್ನು ಅದ್ದೂರಿಯಿಂದ ಆಚರಿಸಬೇಕು. ಮುಖ್ಯ ವೇದಿಕೆ, ನೂತನವಾಗಿ ನಿರ್ಮಾಣವಾಗಿರುವ ವರನಟ ಡಾ. ರಾಜ್‌ಕುಮಾರ್ ರಂಗಮಂದಿರ, ಜೆ.ಎಚ್. ಪಟೇಲ್ ಸಭಾಂಗಣದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜನೆ ಮಾಡಬೇಕು. ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಆಹಾರ ಮೇಳ ಏರ್ಪಡಿಸಿ ಅಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡಬೇಕು ಎಂದರು.

ಎಲ್ಲರ ಸಲಹೆ ಅಭಿಪ್ರಾಯಗಳನ್ನು ಆಲಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಮಾತನಾಡಿ, ಕಳೆದ ಎರಡು ವರ್ಷಗಳ ಕಾಲ ಕೋವಿಡ್ ಹಿನ್ನೆಲೆಯಲ್ಲಿ ದೊಡ್ಡ ಮಟ್ಟದಲ್ಲಿ ದಸರಾ ಮಹೋತ್ಸವ ಆಚರಣೆಯಾಗಿರಲಿಲ್ಲ. ದಸರಾ ಆಯೋಜನೆ ಕುರಿತು ನೀವು ನೀಡಿರುವ ಸಲಹೆ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಈ ಬಾರಿ ನಾಲ್ಕು ದಿನಗಳ ಕಾಲ ವಿಜೃಂಭಣೆಯಿಂದ ದಸರಾ ಮಹೋತ್ಸವ ಏರ್ಪಾಡಿಗೆ ತಯಾರಿ ನಡೆಸಲಾಗುವುದು ಎಂದರು.

ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಹೆಚ್ಚುವರಿ ಡಿಸಿ ಎಸ್.ಕಾತ್ಯಾಯಿನಿದೇವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಗುರುಲಿಂಗಯ್ಯ, ಜಿಲ್ಲಾ ಕಸಾಪ ಅಧ್ಯಕ್ಷ ಶೈಲಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಎನ್. ಬಾಲರಾಜು, ಕಲಾವಿದರು, ಸಾಹಿತಿಗಳು, ಸಂಘ ಸಂಸ್ಥೆಗಳ ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ ಮತ್ತಿತರರು ಭಾಗವಹಿಸಿದ್ದರು.

ತೆರಕಣಾಂಬಿಯಲ್ಲಿ ವೀರ ಸಾವರ್ಕರ್ ರಥಕ್ಕೆ ಸ್ವಾಗತ



ಗುಂಡ್ಲುಪೇಟೆ, ಆ.25– ದೇಶಕ್ಕೆ ಸ್ವಾತಂತ್ರ್ಯ ತರಲು ಜೀವಾರ್ಪಣೆ ಮಾಡಿದ ನಾಯಕರ ಬಗ್ಗೆ ಕಾಂಗ್ರೆಸ್ ಅವಹೇಳನಕರವಾಗಿ ಮಾತನಾಡುತ್ತಿದ್ದು, ಕೂಡಲೇ ಇದನ್ನು ನಿಲ್ಲಿಸಿ ಎಂದು ಶಾಸಕ ನಿರಂಜನಕುಮಾರ್ ಆಗ್ರಹಿಸಿದ್ದಾರೆ.

ತಾಲೂಕಿನ ತೆರಕಣಾಂಬಿ ಗ್ರಾಮಕ್ಕೆ ಆಗಮಿಸಿದ ವೀರಸಾವರ್ಕರ್ ರಥವನ್ನು ಸ್ವಾಗತಿಸಿ, ಸಾವರ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ದೇಶಕ್ಕೆ ಸ್ವಾತಂತ್ರ್ಯ ಕೊಡಿಸಲು ಸಾವಿರಾರು ದೇಶ ಭಕ್ತರು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಸಾರ್ವಕರ್ ಅಂಥವರು 50 ವರ್ಷ ಶಿಕ್ಷೆ ಅನುಭವಿಸಿದ್ದರೂ ಕಾಂಗ್ರೆಸ್‌ನವರು ದೇಶಕ್ಕೆ ತಾವು ಮಾತ್ರ ಸ್ವಾತಂತ್ರ್ಯ ತಂದು ಕೊಟ್ಟಿರುವುದಾಗಿ ಹೇಳುತ್ತಾ ಜನತೆಯನ್ನು ದಾರಿ ತಪ್ಪಿಸುತ್ತಿದ್ದಾರೆ. ಅಲ್ಲದೆ ಹೋರಾಟಗಾರರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ಕೂಡಲೇ ಇದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಭಗತ್ ಸಿಂಗ್ ಯುವಕ ಸಂಘದ ವತಿಯಿಂದ ನಿರ್ಮಿಸಿದ್ದ ವೀರಸಾವರ್ಕರ್ ನಾಮಫಲಕಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ರಾಜಮ್ಮ, ಸದಸ್ಯ ಗೋವಿಂದು, ಬಿಜೆಪಿ ಮಂಡಲಾಧ್ಯಕ್ಷ ಜಗದೀಶ್, ಮಾಜಿ ಅಧ್ಯಕ್ಷ ಎನ್.ಮಲ್ಲೇಶ್, ಯುವಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಚಾಮುಲ್ ಮಾಜಿ ನಿರ್ದೇಶಕ ಶಶಿಕುಮಾರ್, ತಾಪಂ ಮಾಜಿ ಸದಸ್ಯರಾದ ಆರ್.ಮಹೇಶ್, ಸಿ.ಮಹದೇವಪ್ರಸಾದ್, ಮುಖಂಡರಾದ ಶೈಲಜಾ ಮಲ್ಲೇಶ್, ತಮ್ಮಯ್ಯ, ಟಿ.ಎಸ್.ವೆಂಕಟೇಶ್, ಕೆ.ಎಲ್.ಮಹದೇವಸ್ವಾಮಿ ಹಲವರಿದ್ದರು.'

ಸಾರ್ವಜನಿಕವಾಗಿ ಗಣಪತಿ ಪ್ರತಿಷ್ಠಾಪಿಸಲು ಅನುಮತಿ ಕಡ್ಡಾಯ



ಮಂಡ್ಯ,ಆ.25– ಗೌರಿ–ಗಣೇಶ ಹಬ್ಬದ ಅಂಗವಾಗಿ ನಗರದ ವ್ಯಾಪ್ತಿಯಲ್ಲಿ ಗಣೇಶ ಮೂರ್ತಿಯನ್ನು ಸಾರ್ವಜನಿಕವಾಗಿ ಪ್ರತಿಷ್ಠಾಪಿಸಲು ಮೂರು ದಿನ ಮುಂಚಿತವಾಗಿ ಲಿಖಿತವಾಗಿ ಅರ್ಜಿ ಸಲ್ಲಿಸಿ, ಮಂಡ್ಯ ನಗರ ಸಭೆಯಲ್ಲಿ ಸ್ಥಾಪಿಸಿರುವ ಕಂದಾಯ, ಲೋಕೋಪಯೋಗಿ, ಇಂಧನ, ಅಗ್ನಿಶಾಮಕ, ಪೊಲೀಸ್ ಇಲಾಖೆ ಮತ್ತು ನಗರಸಭೆಯ ಎಲ್ಲಾ ಇಲಾಖೆಗಳನ್ನು ಒಳಗೊಂಡ ಏಕಗವಾಕ್ಷಿ ಕೊಠಡಿಯಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಸರ್ಕಾರದ ನಿರ್ದೇಶನದಂತೆ ಪಿಒಪಿ ಮತ್ತು ರಾಸಾಯನಿಕ ಬಣ್ಣ ಲೇಪಿತವಾದಂತಹ ವಿಗ್ರಹಗಳನ್ನು ಮಾರಾಟ ಮತ್ತು ಸ್ಥಾಪನೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. 5 ಅಡಿ ಎತ್ತರದೊಳಗಿನ ಜೇಡಿ ಮಣ್ಣಿನಿಂದ ತಯಾರಿಸಿದ ನೈಸರ್ಗಿಕ ಬಣ್ಣದ ಗಣೇಶ ಮೂರ್ತಿಗಳನ್ನು ಮಾತ್ರ ಮಾರಾಟ ಮತ್ತು ಪ್ರತಿಷ್ಠಾಪಿಸಬೇಕು. ಚಪ್ಪರಕ್ಕೆ ಪರಿಸರ ಸ್ನೇಹಿ ವಸ್ತುಗಳನ್ನೇ ಬಳಸಿ, ಎಲ್ಲೂ ಪ್ಲಾಸ್ಟಿಕ್ ಬಳಕೆ ಮಾಡಬಾರದು. ಯಾವುದೇ ಜಲಮೂಲ, ನದಿ, ಕಾಲುವೆ, ಬಾವಿಗಳಲ್ಲಿ ಮೂರ್ತಿಯನ್ನು ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ನಗರಸಭೆಯಿಂದ ವ್ಯವಸ್ಥೆ ಮಾಡುವ ವಾಹನಗಳಲ್ಲಿ ಅಥವಾ ಸೂಚಿಸುವ ಸ್ಥಳಗಳಲ್ಲಿ ಮಾತ್ರ ಮೂರ್ತಿಗಳನ್ನು ವಿಸರ್ಜನೆ ಮಾಡಬೇಕು. ಹೂವು, ವಸ್ತ್ರ, ಹಾರ ಇತ್ಯಾದಿ ನೀರಿಗೆ ವಿಸರ್ಜಿಸಬಾರದೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಪ್ರಗತಿ ಪರಿಶೀಲನಾ ಸಭೆ

ನಿಗದಿತ ಅವಧಿಯೊಳಗೆ ಗುರಿ ಸಾಧಿಸಲು ಡಿಸಿ ಸೂಚನೆ



ಮಂಡ್ಯ, ಆ.25– ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದಡಿ ಇಲಾಖೆಗಳಿಗೆ ನಿಗದಿಪಡಿಸಿರುವ ಗುರಿಯನ್ನು ಸಾಧಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್.ಅಶ್ವತಿ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೌಶಲ್ಯಾಭಿವೃದ್ಧಿ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಪ್ರಗತಿಯಲ್ಲಿರುವ ಕಾರ್ಯಗಳನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕುರಿತು ವಿವಿಧ ಇಲಾಖೆಗಳಿಂದ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಸಭೆಯಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಆಸಿಫಾ, ಸೈಯದ್ ಮಹತಾಬ್, ಜಿಪಂ ಉಪಕಾರ್ಯದರ್ಶಿ ಸಂಜೀವಪ್ಪ, ಜಿಲ್ಲಾ ನಿರೂಪಣಾಧಿಕಾರಿ ಚೇತನ್ ಕುಮಾರ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ವೇಣುಗೋಪಾಲ್, ಲೀಡ್ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ಎಂ.ಪಿ. ದೀಪಕ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಆರ್. ಅಶೋಕ್ ಸೇರಿದಂತೆ ಇತರರಿದ್ದರು.

ಜಾನುವಾರುಗಳಿಗೆ ಕಾಲುಬಾಯಿ ಜ್ವರ ಲಸಿಕೆ ಹಾಕಿಸಿ



ಭಾರತೀನಗರ, ಆ.25– ರೈತರು ತಮ್ಮ ಜಾನುವಾರುಗಳಿಗೆ ಕಡ್ಡಾಯವಾಗಿ ಕಾಲುಬಾಯಿ ಜ್ವರ ಲಸಿಕೆ ಹಾಕಿಸಬೇಕು ಎಂದು ಪಶುಸಂಗೋಪನಾ ಇಲಾಖೆ ತಾಲೂಕು ಸಹಾಯಕ ನಿರ್ದೇಶಕ ಡಾ.ಬಿ.ಬಿ. ಪ್ರವೀಣ್‌ಕುಮಾರ್ ಸಲಹೆ ನೀಡಿದರು.

ಇಲ್ಲಿಗೆ ಸಮೀಪದ ಅರೆಚಾಕನಹಳ್ಳಿ ಗ್ರಾಮದಲ್ಲಿ 'ಜಿಲ್ಲಾಧಿಕಾರಿಗಳ ನಡೆ, ಹಳ್ಳಿಗಳ ಕಡೆ' ಕಾರ್ಯಕ್ರಮದ ಅಂಗವಾಗಿ ತಾಲೂಕು ಪಶುಸಂಗೋಪನಾ ಇಲಾಖೆಯಿಂದ ನಡೆದ ಬರಡುರಾಸು ಶಿಬಿರ ಮತ್ತು ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಾನುವಾರುಗಳಿಗೆ ಲಸಿಕೆ ಹಾಕಿಸುವ ಮೂಲಕ ಮುಂಜಾಗೃತಾ ಕ್ರಮ ವಹಿಸಬೇಕು. ಇಲ್ಲದಿದ್ದರೆ ಅವುಗಳಿಗೆ ರೋಗ ಹರಡುವ ಸಾಧ್ಯತೆಗಳು ಎದುರಾಗುತ್ತವೆ ಎಂದು ಎಚ್ಚರಿಸಿದರು.

ಹೈನುಗಾರಿಕೆಗೆ ಸರ್ಕಾರ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಹೈನುಗಾರಿಕೆಯಿಂದ ಉತ್ತಮ ಲಾಭಾಂಶವನ್ನು ಕಾಣಬಹುದು. ಹಾಗಾಗಿ, ರೈತರು ಹೈನುಗಾರಿಕೆಯಲ್ಲಿ ತೊಡಗಬೇಕು ಎಂದು ಹೇಳಿದರು. ಶಿಬಿರದಲ್ಲಿ 300ಕ್ಕೂ ಹೆಚ್ಚು ರಾಸುಗಳಿಗೆ ಜಂತುಹುಳು ನಾಶಕ ಔಷಧಿ ನೀಡಲಾಯಿತು. ಅರೆಚಾಕನಹಳ್ಳಿ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷೆ ಶಿಲ್ಪಶ್ರೀ ಜಯರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪಶುವೈದ್ಯಾಧಿಕಾರಿಗಳಾದ ಶಿವಶಂಕರ್, ಡಾ.ಟಿ. ಶ್ರೀನಿವಾಸ್, ಡಾ.ಮುರುಳಿ, ಜಾನುವಾರು ಅಧಿಕಾರಿ ಡಿ.ಹೆಚ್.ರವಿಕುಮಾರ್, ಹಿರಿಯ ಪಶುವೈದ್ಯ ಪರೀಕ್ಷಕರಾದ ಎ.ಸಿ.ಚಂದ್ರು, ಎಸ್.ನಾಗರಾಜು, ಜಯಲಕ್ಷ್ಮಮ್ಮ, ರಂಗನಾಥ್, ದೇವರಾಜು ಅರಸು, ಕಾರ್ಯದರ್ಶಿ ಟಿ.ಅನಿತಾ ಶಿವಲಿಂಗೇಗೌಡ ಇದ್ದರು.

ಗಣಪತಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ



ಪಾಂಡವಪುರ, ಆ.25– ಪಟ್ಟಣದ ಮಹಾತ್ಮ ಗಾಂಧಿ ಬಡಾವಣೆಯಲ್ಲಿ ಗಣಪತಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್. ಪುಟ್ಟರಾಜು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಮಹಾತ್ಮ ಗಾಂಧಿ ಬಡಾವಣೆಯ ನಿವಾಸಿಗಳು ಗಣಪತಿ ದೇವಸ್ಥಾನ ನಿರ್ಮಾಣ ಮಾಡಿಕೊಡುವಂತೆ ಮನವಿ ಮಾಡಿದ್ದರು. ಅದರಂತೆ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಿದ್ದೇನೆ. ದೇವಸ್ಥಾನ ನಿರ್ಮಾಣಕ್ಕೆ ಮುಂದಿನ ದಿನಗಳಲ್ಲಿ ವೈಯುಕ್ತಿಕವಾಗಿಯೂ ಸಹಾಯ ಮಾಡಲಾಗುವುದು ಎಂದು ತಿಳಿಸಿದರು.

ಮಹಾತ್ಮಗಾಂಧಿ ಬಡಾವಣೆಯ ಅಭಿವೃದ್ಧಿಗೆ ಹೀಗಾಗಲೇ ಕಾರ್ಯಕ್ರಮ ರೂಪಿಸಿಕೊಂಡಿದ್ದೇವೆ. ಜೊತೆಗೆ ಬಡಾವಣೆ ಸಂಪರ್ಕಕ್ಕೆ ವಿಸಿ ನಾಲೆಗೆ ಸೇತುವೆಯನ್ನು ಮಂಜೂರು ಮಾಡಿಸಿಕೊಡಲಾಗಿದೆ. ನಾಲೆ ನೀರು ನಿಂತ ಮೇಲೆ ಸೇತುವೆ ನಿರ್ಮಾಣ ಕಾಮಗಾರಿ ನಡೆಯಲಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆಯ ಅಧ್ಯಕ್ಷೆ ಅರ್ಚನಾ ಚಂದ್ರು, ಸದಸ್ಯರಾದ ಚಂದ್ರು, ಚಿಕ್ಕತಮ್ಮೇಗೌಡ, ಮುಖ್ಯಾಧಿಕಾರಿ ವೀಣಾ, ಮುಖಂಡರಾದ ಮಹೇಶ್, ಹರ್ಷ, ಚಂದ್ರು ಸೇರಿದಂತೆ ಹಲವರಿದ್ದರು.

ಮಕ್ಕಳ ಪ್ರತಿಭೆ ಅರಳಲು ಪ್ರತಿಭಾ ಕಾರಂಜಿ ಪೂರಕ



ಕಿಕ್ಕೇರಿ, ಆ.25– ಮಕ್ಕಳಲ್ಲಿರುವ ಪ್ರತಿಭೆಗಳ ಅನಾವರಣಕ್ಕೆ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದ್ದು, ಶಿಕ್ಷಕರು ಹಾಗೂ ಪೋಷಕರು ಮಕ್ಕಳ ಪ್ರತಿಭೆಯನ್ನು ಗುರುತಿಸುವ ಜೊತೆಗೆ, ಅವರಲ್ಲಿ ಕೀಳರಿಮೆ ಮೂಡದಂತೆ ಎಚ್ಚರವಹಿಸಬೇಕು ಎಂದು ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್. ಪ್ರಭಾಕರ್ ಸಲಹೆ ನೀಡಿದರು.


ಪಟ್ಟಣದಲ್ಲಿ ಕಿರಿಯ, ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಏರ್ಪಡಿಸಿದ್ದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಕ್ಕಳಿಗೆ ನಮ್ಮ ಸಂಸ್ಕೃತಿಯನ್ನು ಪ್ರಾಥಮಿಕ ಹಂತದಲ್ಲಿ ಪರಿಚಯಿಸಿದರೆ ಅವರ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುತ್ತದೆ. ಮಕ್ಕಳಲ್ಲಿ ಕೇವಲ ವಿದ್ಯೆಯ ಬಗ್ಗೆ ಮಾತ್ರ ಒತ್ತಡ ಹಾಕದೆ ಇತರೆ ಚಟುಯವಟಿಕೆಗಳಲ್ಲಿಯೂ ಆಸಕ್ತಿ ಮೂಡಿಸಲು ಶಿಕ್ಷಕರು ಮತ್ತು ಪೋಷಕರು ಪ್ರಯತ್ನಿಸಬೇಕು ಎಂದರು.

ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಒಟ್ಟು 17 ವಿವಿಧ ಶಾಲೆ ಮಕ್ಕಳು ಪಾಲ್ಗೊಂಡಿದ್ದರು. ತಿರುಪತಿ ತಿಮ್ಮಪ್ಪ, ಕಾಳಿಕಾದೇವಿ, ಕೃಷ್ಣ, ಕಿತ್ತೂರು ರಾಣಿಚೆನ್ನಮ್ಮ ಸೇರಿದಂತೆ ಮತ್ತಿತರ ಮಹನೀಯರ ವೇಷಭೂಷ ಧರಿಸಿದರು. ಚಿತ್ರಕಲೆ, ಕಂಠಪಾಠ, ಲಘು ಸಂಗೀತ, ಅಭಿನಯಗೀತೆ, ಆಶುಭಾಷಣ, ಕಥೆ ಹೇಳುವಿಕೆ, ಭಕ್ತಿಗೀತೆ, ಧಾರ್ಮಿಕ ಪಠಣ ಮತ್ತಿತರ ಸ್ಪರ್ಧೆ ನಡೆಯಿತು. ಗ್ರಾಪಂ ಸದಸ್ಯರಾದ ಕೆ.ಬಿ.ಚಂದ್ರ ಶೇಖರ್, ಜ್ಯೋತಿ, ಮಾಜಿ ಸದಸ್ಯ ಮಂಜೇಗೌಡ, ವೀರಭದ್ರಯ್ಯ, ಸಿಆರ್‌ಪಿ ನಾಗರಾಜು, ವಿಐಇಆರ್‌ಟಿ ಮಹೇಶ್, ಶಿಕ್ಷಕರಾದ ಪಾರ್ವತಿ, ಮಂಜೇಗೌಡ, ಮುಖಂಡ ಕೃಷ್ಣೇಗೌಡ ಹಾಜರಿದ್ದರು.

ಶೇ.40 ಕಮಿಷನ್ ಸರ್ಕಾರದಿಂದ ಉತ್ತಮ ಆಡಳಿತ ನಿರೀಕ್ಷಿಸಬಹುದೇ?

ಮೈಸೂರಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಶ್ನೆ

ಮೈಸೂರು,ಆ.25(ಎಂಟಿವೈ)– ಗುತ್ತಿಗೆದಾರರದಿಂದ ಶೇ.40ರಷ್ಟು ಕಮಿಷನ್ ಪಡೆದ



ಆರೋಪಿ ಸ್ಥಾನದಲ್ಲಿರುವ ಬಿಜೆಪಿ ನಾಯಕರಿಂದ ಉತ್ತಮ ಆಡಳಿತ ನಿರೀಕ್ಷಿಸಲು ಸಾಧ್ಯವೇ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ. ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಂದ ಗುರುವಾರ ಮಧ್ಯಾಹ್ನ ಮೈಸೂರಿಗೆ ಆಗಮಿಸಿದ ಅವರು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾಮಗಾರಿ ಕೈಗೊಳ್ಳುವ ಗುತ್ತಿಗೆದಾರರಿಂದ ಶೇ.40ರಷ್ಟು ಲಂಚ ಪಡೆಯಲಾಗಿದೆ. ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಗಳೊಂದಿಗೆ ದೂರು ನೀಡಿದರೆ ತನಿಖೆ ನಡೆಸಿ, ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಅವರು ಆರೋಪಿ ಸ್ಥಾನದಲ್ಲಿದ್ದಾರೆ. ಅವರಿಂದ ಬೇರೇ ಏನು ನಿರೀಕ್ಷೆ ಮಾಡಲು ಸಾಧ್ಯ. ಕಮಿಷನ್ ದಂಧೆ ನಡೆಯುತ್ತಿರುವುದು ರಾಜ್ಯದ ಜನತೆಗೆ ಗೊತ್ತಿದೆ ಎಂದರು. ಮಾಧ್ಯಮದವರ ಮತ್ತಷ್ಟು ಪ್ರಶ್ನೆಗಳಿಗೆ ನಾಳೆ(ಆ.26) ನಡೆಯಲಿರುವ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತೇನೆ ಎಂದು ಮನೆಯತ್ತ ತೆರಳಿದರು.



ಮೈಸೂರಿನ ವಿಜಯನಗರದಲ್ಲಿ ಕೊಂಕಣ್ ಭವನದಲ್ಲಿ ಇತ್ತೀಚೆಗೆ ಕೊಂಕ್ಣಿ ಕ್ರಿಶ್ಚಿಯನ್ ಅಸೋಸಿಯೇಷನ್‌ನ ವಾರ್ಷಿಕ ಮಹಾಸಭೆ ನಡೆಯಿತು. ಈ ವೇಳೆ 2023–24ರ ಅವಧಿಗೆ ಅಧ್ಯಕ್ಷರಾಗಿ ಜಾನ್ ವಿಲಿಯಂ, ಉಪಾಧ್ಯಕ್ಷ ಸ್ಟ್ಯಾನಿ ಲೋಬೋ, ಪ್ರಧಾನ ಕಾರ್ಯದರ್ಶಿ ಜಾಯ್ಸ್ ಸಿಕ್ವೇರಾ, ಸಹ ಕಾರ್ಯದರ್ಶಿಗಳಾಗಿ ಮೀನಾ ಡಯಾಸ್, ಸಿಲ್ವೆಸ್ಟರ್ ಡಿಮೆಲ್ಲೊ, ಆಂತರಿಕ ಲೆಕ್ಕ ಪರಿಶೋಧಕರಾಗಿ ಆಲ್ಪ್ರೆಡ್ ವಾಜ್ ಹಾಗೂ ನೂತನ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು. ಈ ವೇಳೆ ಸದಸ್ಯರಾದ ಆನಂದ್ ಪಿಂಟೊ, ವಿನ್ಸೆಂಟ್ ಡಿಸೋಜಾ, ಕೀರ್ತಿದೀಪ್ ಡಿಸೋಜಾ, ಲಾರೆನ್ಸ್ ಪಿರೇರಾ, ಪಾಲ್ ಸಿಕ್ವೇರಾ, ಟೋನಿ ಡಿಸೋಜಾ, ಕ್ಲಿಫರ್ಡ್ ಡಿಸೋಜಾ, ಸೈಮನ್ ಡಿಸಿಲ್ವಾ, ಆಂತರಿಕ ಲೆಕ್ಕ ಪರಿಶೋಧಕ ವಿಕ್ಟರ್ ಮಿನೇಜಸ್ ಉಪಸ್ಥಿತರಿದ್ದರು.

ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳ ಹಬ್ಬದ ಭಾರೀ ರಿಯಾಯಿತಿ ಮಾರಾಟ

ಮೈಸೂರು, ಆ.25– ಮೈಸೂರಿನ ಹೋಟೆಲ್ ಸದರನ್ ಸ್ಟಾರ್ (ಹೋಟೆಲ್ ರಿಗಾಲಿಸ್) ನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬ್ರಾಂಡೆಡ್ ರೆಡಿಮೇಡ್



ಬಟ್ಟೆಗಳ ಮೇಲೆ ಭಾರೀ ರಿಯಾಯಿತಿ ಮಾರಾಟ ಏರ್ಪಡಿಸಲಾಗಿದೆ.

ಈ ರಿಯಾಯಿತಿ ಮಾರಾಟವು ಆಗಸ್ಟ್ 27ರವರೆಗೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ನಡೆಯಲಿದೆ. ಮಹಿಳೆಯರು, ಪುರುಷರು ಮತ್ತು ಮಕ್ಕಳ ಶರ್ಟ್, ಪ್ಯಾಂಟ್ಸ್, ಟೀ ಶರ್ಟ್, ಬ್ಲೇಜರ್, ಬರ್‌ಮೋಡಾ, ಕುರ್ತಾಸ್, ಟಾಪ್ಸ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಡ್ರೆಸಸ್, ಜಾಕೆಟ್ಸ್, ಪೈಜಾಮ್‌ಗಳ ಭಾರೀ ಮಾರಾಟವಿದೆ. ವಿವಿಧ ರೀತಿಯ ಪ್ಯಾಂಟಿ ಮತ್ತು ಬ್ರಾಗಳು ಲಭ್ಯವಿದೆ. ಬೆಡ್‌ಶೀಟ್ಸ್, ದಿವಾನ್‌ಸೆಟ್, ಸೋಫಾ ಸೆಟ್, ಸೋಫಾ ಕವರ್ಸ್ ಮತ್ತು ಟೇಬಲ್ ಕ್ಲಾತ್ಸ್ ಕೂಡ ರಿಯಾಯಿತಿ ದರಕ್ಕೆ ಲಭ್ಯವಿದೆ.

ನಟ ಅನಿರುದ್ಧ ನಿರ್ಬಂಧಕ್ಕೆ ಆಕ್ಷೇಪ

ಮೈಸೂರು,ಆ.25(ಎಂಟಿವೈ)– ಜೊತೆ ಜೊತೆಯಲಿ ಧಾರಾವಾಹಿಯಿಂದ ನಟ



ಅನಿರುದ್ಧ ಅವರನ್ನು ಕೈಬಿಟ್ಟಿದ್ದಲ್ಲದೆ ನಿರ್ಮಾಪಕರ ಸಂಘ 2 ವರ್ಷ ನಿಷೇಧ ಹೇರಿರುವುದು ಖಂಡನೀಯ ಎಂದು ಸಾಹಸಸಿಂಹ ಡಾ.ವಿಷ್ಣುವರ್ಧನ್ ಅಭಿಮಾನಿಗಳ ಒಕ್ಕೂಟದ ಅಧ್ಯಕ್ಷ ಸಿ.ವಿ.ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಟ ಅನಿರುದ್ಧ ಉತ್ತಮ ನಡತೆಯುಳ್ಳ ವ್ಯಕ್ತಿಯಾಗಿದ್ದಾರೆ. ಅವರ ವಿರುದ್ಧ ಧಾರಾವಾಹಿ ನಿರ್ಮಾಪಕ ಆರೂರು ಜಗದೀಶ್, ನಿರ್ಮಾಪಕರ ಸಂಘದ ಅಧ್ಯಕ್ಷ ಭಾಸ್ಕರ್ ಹಗುರವಾಗಿ ಮಾತನಾಡಿರುವುದು ಸರಿಯಲ್ಲ. ಅವರು ಕೂಡಲೇ ಕ್ಷಮೆಯಾಚಿಸದೆ ಇದ್ದರೆ ಧಾರಾವಾಹಿ ಚಿತ್ರೀಕರಣ ನಡೆಯುವ ಸ್ಥಳದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಚಿತ್ರೀಕರಣದ ಸಮಯದಲ್ಲಿ ಹೆಣ್ಣು ಮಕ್ಕಳಿಗೆ ಬಟ್ಟೆ ಬದಲಾಯಿಸಲು, ಮೇಕಪ್ ಮಾಡಿಕೊಳ್ಳಲು ಹಾಗೂ ಶೌಚಾಲಯದ ವ್ಯವಸ್ಥೆ ಮಾಡಲು ಅನಿರುದ್ಧ ಸಲಹೆ ನೀಡಿದ್ದಾರೆ. ಅಲ್ಲದೆ ವೇತನವನ್ನು ಕೇಳಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಜಯಕುಮಾರ್, ಅಶೋಕ ಇದ್ದರು.



317ಎ ಲಯನ್ಸ್ ಕ್ಲಬ್ ಮೈಸೂರು ಪ್ಯಾಲೇಸ್ ಸಿಟಿ ವತಿಯಿಂದ ಜಯಚಾಮರಾಜೇಂದ್ರ ಮೃಗಾಲಯದಲ್ಲಿ ಸತತವಾಗಿ ಮೂರನೇ ಬಾರಿಗೆ ಸಿಂಹವನ್ನು 1 ಲಕ್ಷ ದೇಣಿಗೆ ನೀಡಿ, ವರ್ಷದ ಅವಧಿಗೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಸಮ್ಮುಖದಲ್ಲಿ ದತ್ತು ಸ್ವೀಕರಿಸಲಾಯಿತು. ಈ ವೇಳೆ ಅಧ್ಯಕ್ಷ ಡಿ.ಪಿ.ಪ್ರಕಾಶ್, ಕಾರ್ಯದರ್ಶಿ ಪ್ರಭಾಕರ್, ಖಜಾಂಚಿ ನಟರಾಜ್, ಪ್ರಾಂತೀಯ ಅಧ್ಯಕ್ಷ ನಂಜುಂಡಸ್ವಾಮಿ, ವಲಯಾಧ್ಯಕ್ಷ ಮೋಹನ್ ಕುಮಾರ್, ಜಯರಾಮಣ್ಣ, ಜೈಕುಮಾರ್, ಜೆ.ಲೋಕೇಶ್, ನಾಗೇಶ್‌ಮೂರ್ತಿ, ಎಂ.ಬಿ.ನಂದೀಶ್, ಡಾ.ಪಿ.ರಂಗಸ್ವಾಮಿ, ಜಿ.ಶಿವಕುಮಾರ್, ಎಂ.ಆರ್.ವಾಸು, ಮಹದೇವಸ್ವಾಮಿ, ಕೆ.ಎಸ್.ಪ್ರಕಾಶ್, ವೈ.ಎಸ್.ಶಿವಕುಮಾರ್, ಪಿ.ಹೊನ್ನರಾಜು, ಎಚ್.ಎಸ್.ರಾಜು ಇದ್ದರು.

ಬಿಜೆಪಿ ಜನರಿಗೆ ಒಳ್ಳೆಯದಾಗುವ ಒಂದೇ ಒಂದು ಕೆಲಸವನ್ನೂ ಇದುವರೆಗೆ ಮಾಡಿಲ್ಲ

● ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ● ಬರೀ ಜಗಳ, ಕದನದಲ್ಲೇ ಜನರ ಬೆದರಿಸಿ ಕಾಲ ಕಳೆಯುತ್ತಿದ್ದಾರೆ ● ಕಮಿಷನ್‌ನಿಂದಾಗಿಯೇ ಬಿಜೆಪಿ ಅತ್ಯಂತ ಶ್ರೀಮಂತ ಪಕ್ಷ, ಆರ್‌ಎಸ್‌ಎಸ್ ಶ್ರೀಮಂತ ಎನ್‌ಜಿಓ ಆಗಿದೆ

ಮೈಸೂರು,ಆ.25(ಎಂಕೆ)–ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಗುತ್ತಿಗೆದಾರರ ಸಂಘ ಮಾಡಿರುವ ಭ್ರಷ್ಟಾಚಾರ ಆಪಾದನೆ ಸರಿಯಲ್ಲ ಎನ್ನುವುದಾದರೆ ಸಿಬಿಐ ತನಿಖೆ ಮಾಡಿಸಲಿ. ಕೊಲೆ, ಬೆದರಿಕೆ, ಕಾಲ್ಕೆರೆದು ಜಗಳ ಮಾಡುವ ಮೂಲಕ ಜನರನ್ನು ಬೆದರಿಸಿಕೊಂಡು ಬರುತ್ತಿದ್ದಾರೆಯೇ ಹೊರತು ಜನತೆಗೆ ಒಳ್ಳೆಯದಾಗುವ ಒಂದೇ ಒಂದು ಕೆಲಸವನ್ನೂ ಮಾಡಿಲ್ಲ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ರಾಜ್ಯ ಸರ್ಕಾರ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರಿನಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಧಾನಿಗಳಿಗೆ ಪತ್ರ ಬರೆದು ವರ್ಷವಾದರೂ ವಿಚಾರಣೆ ನಡೆಸದೇ ಇರುವುದರಿಂದಲೇ ಅರ್ಥವಾಗುತ್ತದೆ. 8 ವರ್ಷದಿಂದ 2ಜಿ ಹಗರಣ ಎಂದೇಳಿಕೊಂಡು ಅದಕ್ಕೆ ಸೊನ್ನೆಗಳನ್ನು ಸೇರಿಸುತ್ತಲೇ ಇದ್ದಾರೆಯೇ ಹೊರತು ಅವರಿಂದ ಇನ್ನೂ ಸಾಬೀತು ಮಾಡಲು ಸಾಧ್ಯವಾಗಿಲ್ಲ ಎಂದು ಹರಿಹಾಯ್ದರು.

ರಾಷ್ಟ್ರದಲ್ಲೇ ಅತ್ಯಂತ ಶ್ರೀಮಂತ ರಾಜಕೀಯ ಪಕ್ಷ ಬಿಜೆಪಿ. ಅತ್ಯಂತ ಶ್ರೀಮಂತ ಎನ್‌ಜಿಓ ಎಂದರೆ ಆರ್‌ಎಸ್‌ಎಸ್. ಇವರಿಗೆ ದುಡ್ಡು ಎಲ್ಲಿಂದ ಬಂತು. 40–50 ಪರ್ಸೆಂಟ್ ಕಮಿಷನ್‌ನಿಂದಲೇ ಹೋಗಿರುವುದು. ಇಲ್ಲವಾದರೆ ಏಕಾಏಕಿ 8 ವರ್ಷದಲ್ಲಿ ಇಷ್ಟೆಲ್ಲಾ ಸಾಧ್ಯವಾಗುತ್ತಿರಲಿಲ್ಲ. 1600 ಕೋಟಿ ರೂ.ಗಳಲ್ಲಿ ದೆಹಲಿಯಲ್ಲಿ ಪಕ್ಷದ ಕಚೇರಿ ಕಟ್ಟಿದ್ದಾರೆ. ಅಲ್ಲದೆ ಎಲ್ಲಾ ಜಿಲ್ಲೆಯಲ್ಲೂ ಕಚೇರಿ ಮಾಡಿದ್ದಾರೆ. ಆದರೆ, 60–70 ವರ್ಷ ಕಾಂಗ್ರೆಸ್ ಸರ್ಕಾರ ನಡೆಸಿದ್ದರೂ ಇನ್ನೂ ಸರಿಯಾಗಿ ಪಕ್ಷದ ಕಚೇರಿಗಳನ್ನು ಕಟ್ಟಲು ಸಾಧ್ಯವಾಗಿಲ್ಲ. ಆಪರೇಷನ್ ಕಮಲದಲ್ಲಿ ಮಂತ್ರಿ, ಮುಖ್ಯಮಂತ್ರಿಯಾಗಬೇಕಾದರೆ ಕೋಟಿಗಟ್ಟಲೇ ಕೊಡಬೇಕು ಎಂದು ಅವರದ್ದೇ ಪಕ್ಷದ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಆರೋಪ ಮಾಡಿದ್ದಾರೆ ಎಂದರು.

ನೈಜ ಇತಿಹಾಸ ಹೇಳಲಿ: ಕಾಂಗ್ರೆಸ್‌ನವರು ಸುಳ್ಳು ಇತಿಹಾಸ ಸೃಷ್ಟಿ ಮಾಡಿದ್ದಾರೆ ಎನ್ನುವುದಾದರೆ ಬಿಜೆಪಿಯವರೇ ನೈಜ ಇತಿಹಾಸವನ್ನು ಹೇಳಲಿ. ಇವರಲ್ಲಿ ಯಾರಾದರೂ ಗಲ್ಲಿಗೇರಿದ್ದಾರಾ? ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸದೆ ಕ್ಷಮಾಪಣಾ ಪತ್ರ ಬರೆದು ಕೊಟ್ಟವರು. ಸಾವರ್ಕರ್ 6 ಬಾರಿ ಕ್ಷಮಾಪಣಾ ಪತ್ರ ಬರೆದು ಕೊಟ್ಟಿದ್ದಾರೆ. ಬ್ರಿಟಿಷರ ವಿರುದ್ಧ ಹೋರಾಡಿದ ಒಂದೇ ಒಂದು ಉದಾಹರಣೆ ಇದ್ದರೆ ಕೊಡಲಿ ಸಾಕು. ಬ್ರಿಟಿಷರ ಏಜೆಂಟ್ ಆಗಿದ್ದವರು ಯಾರು


ಬಿ.ಕೆ.ಹರಿಪ್ರಸಾದ್

ಎಂಬುದನ್ನು ಮೊದಲು ಹೇಳಲಿ ಎಂದು ಸವಾಲೆಸೆದ ಅವರು, ಕಳೆದ 75 ವರ್ಷಗಳಲ್ಲಿ ಬಿಜೆಪಿಯವರಿಗೆ ಮಹಾತ್ಮ ಗಾಂಧೀಜಿ ಕೊಂದಂತಹ ದೇಶದ ಮೊದಲ ಉಗ್ರವಾದಿ, ಭಯೋತ್ಪಾದಕ ಗೋಡ್ಸೆ ಬಿಟ್ಟರೇ ಬೇರ್‍ಯಾವ ಮಹಾಪುರುಷ ಸಿಕ್ಕಿರಲಿಲ್ಲ. ಇದೀಗ ಸಾವರ್ಕರ್ ಹೆಸರೇಳಿಕೊಂಡು ತಿರುಗಾಡುತ್ತಿದ್ದಾರೆ ಎಂದು ಹರಿಪ್ರಸಾದ್ ವ್ಯಂಗ್ಯವಾಡಿದರು.

ಸಾವರ್ಕರ್ ನಾಸ್ತಿಕ: ಸಾವರ್ಕರ್ ಅಪ್ಪಟ ನಾಸ್ತಿಕ. ದೇವರ ಮೇಲೆ ನಂಬಿಕೆ ಇಲ್ಲದವರು. ನಾನು ನಾಸ್ತಿಕ ಎಂದು ಅವರೇ ತಮ್ಮ ಆತ್ಮಚರಿತ್ರೆಯಲ್ಲಿ ಬರೆದುಕೊಂಡಿದ್ದಾರೆ. ಗಣೇಶೋತ್ಸವದಲ್ಲಿ ನಾಸ್ತಿಕ ಸಾವರ್ಕರ್ ಭಾವಚಿತ್ರವನ್ನು ಇಡುವ ಮೂಲಕ ಹಿಂದೂ ಧರ್ಮಕ್ಕೆ ಅಪಮಾನ ಮಾಡಲು ಬಿಜೆಪಿಯವರು ಹೊರಟಿದ್ದಾರೆ ಎಂದು ಕಿಡಿಕಾರಿದರು.

ಭಾರತ್ ಜೋಡೋ ಪಾದಯಾತ್ರೆ ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಪಾದಯಾತ್ರೆ ಹಮ್ಮಿಕೊಳ್ಳುತ್ತಿದ್ದೇವೆ. ಭಾರತ್ ಜೋಡೋ ಪಾದಯಾತ್ರೆ ತಮಿಳುನಾಡು, ಕೇರಳದಲ್ಲಿ ಸಾಗಿದ ಬಳಿಕ ಗುಂಡ್ಲುಪೇಟೆ ಮೂಲಕ ಕರ್ನಾಟಕ ಪ್ರವೇಶಿಸಲಿದೆ. ಕರ್ನಾಟಕದಲ್ಲಿ 21 ದಿನಗಳ ಕಾಲ 521 ಕಿ.ಮೀ ಸಾಗಲಿದ್ದು, ಪಕ್ಷದ ಪ್ರಮುಖ ನಾಯಕರು ಭಾಗಿಯಾಗಲಿದ್ದಾರೆ. ಪಾದಯಾತ್ರೆ ಉದ್ದಕ್ಕೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತೇವೆ ಎಂದರು. ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮಾಧ್ಯಮ ವಕ್ತಾರ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಮತ್ತೆ ಕ್ಷಮೆ ಕೇಳುವಂತಾಗುತ್ತದೆ...

ರಾಜ್ಯದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಭಿವೃದ್ಧಿ ಎಂಬುದಿಲ್ಲ. ಅದೆಲ್ಲವನ್ನೂ ಬಿಟ್ಟು ಮದರಸಾಗಳಿಗೆ ಕೈ ಹಾಕಿದ್ದಾರೆ. ಪಠ್ಯ ಪುಸ್ತಕ ಪರಿಷ್ಕರಣೆ ಮಾಡಿ ಕ್ಷಮೆ ಕೇಳಿದಂತೆಯೇ ಇದೂ ಕೂಡ ಆಗುತ್ತದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹೇಳಿದರು.

ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಇದೆಯಾ ಎಂದು ಪ್ರಶ್ನಿಸಿದ ಅವರು, ಶಿವಮೊಗ್ಗ, ಮಂಗಳೂರು, ಗದಗ್‌ನಲ್ಲಿ ಕೊಲೆಗಳಾದವು. ಕೆಲ ಮನೆಗಳಿಗಷ್ಟೇ ಸಿಎಂ ಭೇಟಿ ನೀಡಿ 25 ಲಕ್ಷ ರೂ. ಕೊಡುತ್ತಾರೆ. ಆದರೆ ಕೊಲೆಯಾದ ಇತರರ ಮನೆಗೆ ಸೌಜನ್ಯಕ್ಕಾದರೂ ಭೇಟಿ ನೀಡುವ ಕೆಲಸವನ್ನು ಸರ್ಕಾರ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವರಿಷ್ಠರೊಂದಿಗೆ ಚರ್ಚಿಸಿ, ಮೈತ್ರಿ ತೀರ್ಮಾನ...

ಮೈಸೂರು ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳಿಗೆ ಸರ್ಕಾರ ಮೀಸಲಾತಿ ಪ್ರಕಟಿಸಿದೆ. ಈ ಸಂಬಂಧ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಿ ಮೈತ್ರಿ ತೀರ್ಮಾನಕ್ಕೆ ಬರಲಾಗುವುದು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು. ಸಿದ್ದರಾಮಯ್ಯ ಅವರು ಮೈಸೂರಿನಲ್ಲೇ ಇದ್ದಾರೆ. ಅವರೊಂದಿಗೂ ಚರ್ಚೆ ಮಾಡುತ್ತೇವೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ರೊಂದಿಗೂ ಮಾತನಾಡುತ್ತೇವೆ. ನಂತರ ಶಾಸಕ ತನ್ವೀರ್‌ಸೇಠ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಎಲ್ಲರೂ ಸೇರಿ ವರಿಷ್ಠರ ಮಾರ್ಗದರ್ಶನದಂತೆ ಮೇಯರ್ ಆಯ್ಕೆ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಬ್ಯಾಂಕಿನ ಅಧ್ಯಕ್ಷ ಸಿ.ರೇವಣ್ಣ ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷರಾದ ಜೆ.ಯೋಗೇಶ್, ನಿರ್ದೇಶಕರಾದ ಆರ್.ರವಿಕುಮಾರ್(ರಾಜಕೀಯ), ಹೆಚ್. ಹರೀಶ್ ಕುಮಾರ್, ಕೆ.ಉಮಾಶಂಕರ್, ಎಂ.ರಾಮಕೃಷ್ಣ, ಆರ್.ರವಿಕುಮಾರ್, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಪಿಹೆಚ್.ಡಿ



ಮೈಸೂರು: ಡಾ.ಎಂ.ಜಿ.ಹನುಮಂತರಾಜು ಅವರ ಮಾರ್ಗದರ್ಶನದಲ್ಲಿ ಡಿ.ಡಿ.ನವೀನ ಗಾಂಧಿ ಅಧ್ಯಯನ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿವಿ ಪಿಎಚ್.ಡಿ ಪದವಿಗೆ ನೀಡಿದೆ.

ಕುವೆಂಪುನಗರ ಪೊಲೀಸರಿಂದ ಇಬ್ಬರು ಸರಗಳ್ಳರ ಬಂಧನ

9.15 ಲಕ್ಷ ರೂ. ಮೌಲ್ಯದ ಸರಗಳು, ಬೈಕ್, ಎರಡು ಮೊಬೈಲ್ ವಶ

ಮೈಸೂರು, ಆ.25(ಆರ್‌ಕೆ)–ಇಬ್ಬರು ಕುಖ್ಯಾತ ಸರಗಳ್ಳರನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು, 9,15, 000 ರೂ. ಬೆಲೆ ಬಾಳುವ 183 ಗ್ರಾಂ ಚಿನ್ನದ ಸರಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್ ಮತ್ತು 2 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



ಮೈಸೂರಿನ ರಮಾಬಾಯಿನಗರ ನಿವಾಸಿ ಕುಮಾರರಾವ್ ಮಗ ಗುರುಪ್ರಸಾದ್ ಅಲಿಯಾಸ್ ಗುರು(32) ಹಾಗೂ ಮಹದೇವಪುರ ಮುಖ್ಯ ರಸ್ತೆಯ ನೆಹರು ನಗರ ನಿವಾಸಿ ಮುನೀರ್ ಅಹಮದ್ ಮಗ ಶಬಾಜ್ ಖಾನ್ ಅಲಿಯಾಸ್ ಶಬಾಜ್(29) ಬಂಧಿತ ಆರೋಪಿಗಳು.

ಮಧುವನ ಬಡಾವಣೆ 1ನೇ ಕ್ರಾಸ್ ಬಳಿ ನಡೆದುಕೊಂಡು ಹೋಗುತ್ತಿದ್ದ ಮೀನಾ ಅವರಿಂದ ಬೈಕಿನಲ್ಲಿ ಬಂದ ಇಬ್ಬರು 2 ಲಕ್ಷ ರೂ. ಬೆಲೆ ಬಾಳುವ 40 ಗ್ರಾಂ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದರು.

ಈ ಘಟನೆ ಜೂನ್ 12ರಂದು ಸಂಜೆ 5.30ರಲ್ಲಿ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಕೆ.ಷಣ್ಮುಗ ವರ್ಮ, ಅಪಾಚಿ ಬೈಕ್‌ನಲ್ಲಿ ಬಂದು ಕೃತ್ಯ ಎಸಗುತ್ತಿದ್ದಾರೆ ಎಂದು ಭಾತ್ಮೀದಾರರು ಬೈಕ್ ನಂಬರ್ ಸಮೇತ ಖಚಿತ ಮಾಹಿತಿ ನೀಡಿದ ಮೇರೆಗೆ ಆಗಸ್ಟ್ 20 ರಂದು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದರು.

ವಿಚಾರಣೆ ನಡೆಸಿದಾಗ ಕುವೆಂಪುನಗರ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 5 ಕಡೆ ಮಹಿಳೆಯರಿಂದ ಒಟ್ಟು 183 ಗ್ರಾಂನ 5 ಚಿನ್ನದ ಸರ ಅಪಹರಣ ಮಾಡಿದ್ದಾರೆಂಬುದು ತಿಳಿಯಿತು.

ಲ್ಯಾಬ್ ಅಸಿಸ್ಟೆಂಟ್ ಆಗಿರುವ ಶಬಾಜ್ ಮತ್ತು ಟೈಲರ್ ಕೆಲಸ ಮಾಡುವ ಗುರುಪ್ರಸಾದ್ ಐಷಾರಾಮಿ ಜೀವನ ನಡೆಸಲು ಈ ಕೃತ್ಯಕ್ಕೆ ಕೈಹಾಕಿದ್ದು, ಸಂಜೆ 6 ಗಂಟೆ ನಂತರ ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಅಪಾಚಿ ಬೈಕ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದರು. ವಿದ್ಯಾವಂತ ಹಾಗೂ ಸುಸಂಸ್ಕೃತ ಮಹಿಳೆಯರು ಠಾಣೆಗೆ ಹೋಗಿ ದೂರು ನೀಡುವುದಿಲ್ಲ ಎಂದು ಭಾವಿಸಿ ಅವರು ಸರ ಅಪಹರಣಕ್ಕೆ ಕುವೆಂಪನಗರ ವ್ಯಾಪ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂಬುದು ವಿಚಾರಣೆಯಿಂದ ತಿಳಿದು ಬಂದಿದೆ.

ದೇವಸ್ಥಾನಕ್ಕೆ ಹೋಗಿ ಬರುವ 65 ವರ್ಷದ ಮೇಲ್ಪಟ್ಟವರನ್ನೇ ಗುರಿಯಾಗಿಸಿಕೊಂಡು ಖದೀಮರು ಕಾರ್ಯಾಚರಣೆ ನಡೆಸುತ್ತಿದ್ದರು. ಸಿಸಿ ಕ್ಯಾಮರಾಗಳಿಲ್ಲದಿರುವ ಸ್ಥಳವನ್ನೇ ಕೃತ್ಯಕ್ಕೆ ಆಯ್ಕೆ ಮಾಡಿಕೊಂಡು ಕೈಚಳಕ ತೋರಿ ಯಶಸ್ವಿಯಾಗುತ್ತಿದ್ದರು ಎಂದೂ ತಿಳಿದು ಬಂದಿದೆ. ಅಪಾಚಿ ಬೈಕಿನ ಮಾಹಿತಿ ಪಡೆದ ಪೊಲೀಸರು ಆರೋಪಿಗಳನ್ನು ಬಂಧಿಸಿ ಅವರಿಂದ ಚಿನ್ನಾಭರಣ, ಬೈಕ್ ಹಾಗೂ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಮಾರ್ಗದರ್ಶನದಲ್ಲಿ, ಕೆ.ಆರ್. ಉಪವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ ಅವರ ಉಸ್ತುವಾರಿಯಲ್ಲಿ ಕುವೆಂಪುನಗರ ಠಾಣಾ ಇನ್ಸ್‌ಪೆಕ್ಟರ್ ಕೆ.ಷಣ್ಮುಗ ವರ್ಮ, ಸಬ್ ಇನ್ಸ್‌ಪೆಕ್ಟರ್‌ಗಳಾದ ಎಂ.ರಾಧ, ಎಸ್.ಪಿ.ಗೋಪಾಲ್, ಎಎಸ್‌ಐ ಮಹದೇವ, ಸಿಬ್ಬಂದಿಗಳಾದ ಎಂ.ಪಿ.ಮಂಜುನಾಥ, ಎನ್.ಕೆ.ಪುಟ್ಟಪ್ಪ, ನಾಗೇಶ, ಹಜರತ್, ಸರ್ಜನ್, ಮಹೇಶ, ಎಂ.ಸಿ.ಯೋಗೇಶ್, ಹೆಚ್.ಕೆ.ಶ್ರೀನಿವಾಸ್ ಹಾಗೂ ಇತರರು ಈ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪರಿಸರ ಸ್ನೇಹಿ ಗಣೇಶ ಮೂರ್ತಿ ಮಾತ್ರ ಪೂಜಿಸಿ

ಥರ್ಮಾಕೋಲ್, ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಮೂರ್ತಿ ತಯಾರಿಸಿದಲ್ಲಿ ಕ್ರಿಮಿನಲ್ ಮೊಕದ್ದಮೆ ಎಚ್ಚರಿಕೆ

ಮೈಸೂರು,ಆ.25(ಆರ್‌ಕೆ)–ಪರಿಸರ ಸ್ನೇಹಿ ಮಣ್ಣಿನ ಗಣೇಶನ ಮೂರ್ತಿಗಳನ್ನು ಮಾತ್ರ ಪೂಜಿಸಿ, ವಿಸರ್ಜಿಸುವಂತೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರು, ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ರಾಸಾಯನಿಕ ಬಣ್ಣ, ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ ಬಳಸಿ ಮೂರ್ತಿ ತಯಾರಿಸಿ ಮಾರಾಟ ಮಾಡಿದರೆ, ಐಪಿಸಿ ಸೆಕ್ಷನ್ 1860 ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಎಚ್ಚರಿಕೆ ನೀಡಲಾಗಿದೆ. ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ತಮ್ಮ ಮನೆಗಳಲ್ಲಿ ಬಕೆಟ್‌ಗಳಲ್ಲಿ ನೀರಿಗೆ ಮುಳುಗಿಸಿ ವಿಸರ್ಜನೆ ಮಾಡಿ, ಅದರಲ್ಲಿ ಬರುವ ಮಣ್ಣನ್ನು ಕೈತೋಟದ ಹೂವಿನ ಕುಂಡಗಳಿಗೆ ಬಳಸುವಂತೆಯೂ ಸಲಹೆ ನೀಡಲಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಲು ಪಾಲಿಕೆ ವ್ಯಾಪ್ತಿಯ ಆಯಾ ವಲಯ ಕಚೇರಿಗಳಿಗೆ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು. ಕೆ.ಆರ್.ಮೊಹಲ್ಲಾದ ಅಕ್ಕನ ಬಳಗ ಬಳಿಯ ವಲಯ ಕಚೇರಿ 1ರ ವಲಯಾಧಿಕಾರಿ ನಾಗೇಶ 94483 94923, ಕೃಷ್ಣಮೂರ್ತಿಪುರಂ ರೈಲ್ವೇ ಗೇಟ್ ಬಳಿಯ ವಲಯ ಕಚೇರಿ 2ರ ನಾಗರಾಜು 9945266195, ಶಾರದಾದೇವಿನಗರದ ವಲಯ ಕಚೇರಿ 3ರ ಪ್ರಕಾಶ 99644 05056, ಆಕಾಶವಾಣಿ ಸರ್ಕಲ್ ಬಳಿಯ ವಲಯ ಕಚೇರಿ 4ರ ವೈ.ಎನ್.ಚಂದ್ರಮ್ಮ 9449338536, ಹೆಬ್ಬಾಳಿನ ಬಸವನಗುಡಿ ಬಳಿಯ ವಲಯ ಕಚೇರಿ 5ರ ಕೆ.ಕೃಷ್ಣ 9448900617, ಶೇಷಾದ್ರಿ ಅಯ್ಯರ್ ರಸ್ತೆಯ ವಲಯ ಕಚೇರಿ 6ರ ಸಿ.ಮಂಜುನಾಥ 8660 150889, ಎಫ್‌ಟಿಎಸ್ ಸರ್ಕಲ್ ಬಳಿಯ ವಲಯ ಕಚೇರಿ 7ರ ಎಂ.ನಂಜುಂಡಯ್ಯ, 9448008342 ಉದಯಗಿರಿ ಎಂ.ಜಿ.ರಸ್ತೆಯ ವಲಯ ಕಚೇರಿ 8ರ ಶಿವಕುಮಾರ್ 9900 684767 ಹಾಗೂ ಗಾಯತ್ರಿಪುರಂನ ವಲಯ ಕಚೇರಿ 9ರ ರಮಾದೇವಿ 9480459113 ಅವರಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕೆಂದು ಪಾಲಿಕೆ ಕಮೀಷ್ನರ್ ತಿಳಿಸಿದ್ದಾರೆ.

ಇಎಸ್‌ಐ, ಪಿಎಫ್ ವಂತಿಗೆ ಕಡಿಮೆ ಪಾವತಿಸಿದ ಆರೋಪ

ಆಹಾರ ನಿಗಮದ ಹಮಾಲಿ ಕಾರ್ಮಿಕರ ಪ್ರತಿಭಟನೆ



ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು, ಕೆಆರ್‌ನಗರ, ಹೆಚ್‌ಡಿ ಕೋಟೆ, ಸರಗೂರು, ಟಿ.ನರಸೀಪುರ ಹಾಗೂ ನಂಜನಗೂಡು ತಾಲೂಕುಗಳ ಕೆಎಫ್‌ಸಿಎಸ್‌ಸಿ ಮತ್ತು ಟಿಎಪಿಸಿಎಂಎಸ್ ಗೋದಾಮುಗಳಲ್ಲಿ ಕೆಲಸ ಮಾಡುವ ಹಮಾಲಿ ಕಾರ್ಮಿಕರ ವೇತನವನ್ನು ಕಡಿಮೆ ನಮೂದಿಸಿ ಇಎಸ್‌ಐ, ಪಿಎಫ್ ವಂತಿಗೆಯನ್ನು ಗ್ರಾಮಾಂತರ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರು ಕಡಿಮೆ ಪಾವತಿಸಿ ವಂಚಿಸಿದ್ದಾರೆ. ಇಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಬಾಕಿ ಪಿಎಫ್ ವಂತಿಗೆ ಪಾವತಿಗೆ ಕ್ರಮ ವಹಿಸಬೇಕು. 3 ವಾರದೊಳಗೆ ಎಲ್ಲಾ ಸಮಸ್ಯೆ ಬಗೆಹರಿಸದಿದ್ದಲ್ಲಿ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು. –ಪ್ರತಿಭಟನಾಕಾರರು

ಮೈಸೂರು,ಆ.25(ಪಿಎಂ)– ಗುತ್ತಿಗೆದಾರರು ಇಎಸ್‌ಐ ಮತ್ತು ಪಿಎಫ್ ವಂತಿಗೆಯನ್ನು ಕಡಿಮೆ ಪಾವತಿಸಿ ವಂಚಿಸಿದ್ದಾರೆ ಎಂದು ಆರೋಪಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪಡಿತರ ಅನ್ನಭಾಗ್ಯ ಯೋಜನೆಯಡಿಯ ಹಮಾಲಿ ಕಾರ್ಮಿಕರು ಕರ್ನಾಟಕ ರಾಜ್ಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರ ಒಕ್ಕೂಟದ (ಕರ್ನಾಟಕ ಶ್ರಮಿಕ ಶಕ್ತಿಯ ಅಂಗಸಂಘಟನೆ) ಆಶ್ರಯದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಆಹಾರ ನಿಗಮದ ಕೆಎಫ್‌ಸಿಎಸ್‌ಸಿ ಮತ್ತು ಟಿಎಪಿಸಿಎಂಎಸ್ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ಮಾಡುವ ಹಮಾಲಿ ಕಾರ್ಮಿಕರು, ಇಎಸ್‌ಐ ಮತ್ತು ಪಿಎಫ್ ವಂತಿಗೆ ಕಡಿಮೆ ಪಾವತಿಸಿರುವ ಗುತ್ತಿಗೆದಾರರ ಬಿಲ್ ಪಾವತಿ ತಡೆಹಿಡಿಯಬೇಕೆಂದು ಒತ್ತಾಯಿಸಿದರು.

ಗ್ರಾಮಾಂತರ ಚಿಲ್ಲರೆ ಸಾಗಾಣಿಕೆ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸಕ್ಕೆ ಕ್ವಿಂಟಾಲ್‌ಗೆ ಕನಿಷ್ಠ 26 ರೂ. ನಿಗದಿಪಡಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಮಿಕ ಸಂಘದ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ರಚಿಸಿ ತುರ್ತಾಗಿ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸಬೇಕು. ಕನಿಷ್ಠ 6 ತಿಂಗಳಿಗೆ ಒಮ್ಮೆ ಸಮಿತಿಯ ಸಭೆ ನಡೆಸಬೇಕು. ಗುತ್ತಿಗೆ ಕಾರ್ಮಿಕ ಕಾಯ್ದೆಯಡಿ ಕಾರ್ಮಿಕರಿಗೆ ನೀಡಬೇಕಾದ ವೇತನ ಚೀಟಿ, ಇಎಸ್‌ಐ–ಪಿಎಫ್ ವಂತಿಗೆ ಪಾವತಿಸಿರುವ ರಶೀದಿಗಳನ್ನು ಪ್ರತಿ ತಿಂಗಳು ಕಾರ್ಮಿಕರಿಗೆ ಕೊಡಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರಿಂದ ಡಿಸಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತ, ಗಾಂಧಿಚೌಕ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮಾರ್ಗವಾಗಿ ಡಿಸಿ ಕಚೇರಿ ಆವರಣ ತಲುಪಿ ಪ್ರತಿಭಟಿಸಲಾಯಿತು. ಒಕ್ಕೂಟದ ರಾಜ್ಯಾಧ್ಯಕ್ಷ ವರದರಾಜೇಂದ್ರ, ಜಿಲ್ಲಾಧ್ಯಕ್ಷ ಕರಿನಾಯಕ, ಉಪಾಧ್ಯಕ್ಷ ನರಸಿಂಹಮೂರ್ತಿ, ಕಾರ್ಯದರ್ಶಿ ಜಿ.ಮಹದೇವ, ಕಾರ್ಮಿಕರಾದ ವಿಕ್ರಂ ನಾಯಕ, ಮಹದೇವಸ್ವಾಮಿ, ಲೋಕೇಶ್, ಸಿದ್ದರಾಜು, ಚಲುವರಾಜು, ಬಸವಲಿಂಗು, ಕೃಷ್ಣಪ್ಪ, ರಾಮು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಮಾಜದ ಸ್ವಾಸ್ಥ್ಯ ಹಾಳುಮಾಡಬೇಡಿ

ಬಿಜೆಪಿ ಮುಖಂಡರಿಗೆ ಕಾಂಗ್ರೆಸ್ ನಾಯಕರ ಸಲಹೆ

ಮೈಸೂರು, ಆ.25(ಎಂಕೆ)–ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನಾತ್ಮಕವಾಗಿ ಪ್ರಮಾಣ ವಚನ ಪಡೆದು ಜನಸೇವೆಗೆ ಬದ್ಧರಾಗಿರಬೇಕಾದ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ನಾಯಕರು ಆರ್‌ಎಸ್‌ಎಸ್ ಪಠ್ಯಕ್ರಮ ಆಧಾರಿತ ರಾಜಕೀಯವನ್ನು ಬಿಡಬೇಕು ಎಂದು ನಗರ ಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್ ಸಲಹೆ ನೀಡಿದ್ದಾರೆ. ಬಿಜೆಪಿ ನಾಯಕರು ಬೆಳಗೆದ್ದರೆ ಆರ್‌ಎಸ್‌ಎಸ್ ಪಠ್ಯಕ್ರಮದ ರಾಜಕೀಯ ಮಾಡುತ್ತಿದ್ದಾರೆ. ಜನರ ಸೇವೆ ಬಿಟ್ಟು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುತ್ತಿದ್ದಾರೆ. ಜಾತಿ–ಧರ್ಮದಲ್ಲಿ ಹೆಸರಿನಲ್ಲಿ ಸಮುದಾಯಗಳ ನಡುವೆ ದ್ವೇಷ, ಅಸೂಯೆ ಸೃಷ್ಟಿಸುತ್ತಿದ್ದಾರೆ. ಪ್ರತಿ ದಿನ ಜನರ ಮನಸ್ಸಿನಲ್ಲಿ ಈ ವಿಷ ಬೀಜವನ್ನು ಬಿತ್ತುತ್ತಿದ್ದಾರೆ. ಧರ್ಮದ ಗಲಾಟೆಯಲ್ಲಾಗಿರುವ ಸಾವುಗಳಿಗೆ ಬಿಜೆಪಿ ನಾಯಕರು ಮತ್ತು ಅವರ ಆರ್‌ಎಸ್‌ಎಸ್ ಕಾರಣ. ಮುಂದಾದರು ಇಂತಹ ದುರ್ಘಟನೆಗಳು ನಡೆಯಲು ಅವಕಾಶ ಮಾಡಿಕೊಡಬೇಡಿ ಎಂದಿದ್ದಾರೆ.

‘ಹಲೊ’ ಬದಲು ‘ವಂದೇ ಮಾತರಂ’ ಕಡ್ಡಾಯ

ಮಹಾರಾಷ್ಟ್ರ ಅರಣ್ಯ ಇಲಾಖೆ ಆದೇಶ

ಪುಣೆ, ಆ.25– ಅಧಿಕೃತ ಕೆಲಸಕ್ಕೆ ಸಂಬಂಧಿಸಿದ ದೂರವಾಣಿ ಕರೆಗಳಿಗೆ ಉತ್ತರಿಸುವ ಮೊದಲು ಹಲೊ ಬದಲು ‘ವಂದೇ ಮಾತರಂ’ ಎಂಬುದಾಗಿ ಹೇಳಬೇಕು ಎಂದು ಮಹಾರಾಷ್ಟ್ರ ಸರ್ಕಾರದ ಅರಣ್ಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ. ಸಂಸ್ಕೃತಿ ಮತ್ತು ಅರಣ್ಯ ಸಚಿವ ಸುಧೀರ್ ಮುಂಗಂಟಿವಾರ್ ಅವರು, ಕಚೇರಿಗಳಲ್ಲಿ ದೂರವಾಣಿ ಕರೆಗಳನ್ನು ಸ್ವೀಕರಿಸುವಾಗ ‘ಹಲೊ’ ಬದಲಿಗೆ ‘ವಂದೇ ಮಾತರಂ’ ಹೇಳುವಂತೆ ಎಲ್ಲಾ ಸರ್ಕಾರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಬೆನ್ನಲ್ಲೇ ಈ ಆದೇಶ ಹೊರಡಿಸಲಾಗಿದೆ.

ಮೂರನೇ ಪುಟದಿಂದ

ವಿಧಾನಮಂಡಲ ಮಳೆಗಾಲದ ಅಧಿವೇಶನ

ಸಭೆ ತೀರ್ಮಾನಿಸಿದೆ ಎಂದರು. ಈ ವರ್ಷದಿಂದಲೇ ಕೃಷಿ ಕಾರ್ಮಿಕರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯ ನೆರವು ದಕ್ಕಲಿದೆ ಎಂದು ಇದೇ ಸಂದರ್ಭದಲ್ಲಿ ಅವರು ಸ್ಪಷ್ಟಪಡಿಸಿದರು.

ಗ್ರಾಮೀಣ ಪ್ರದೇಶದ ರೈತರು ‘ಭೂಕಬಳಿಕೆದಾರರಲ್ಲ’: ನಗರ ಮತ್ತು ಪಾಲಿಕೆ ವ್ಯಾಪ್ತಿ ಹೊರತುಪಡಿಸಿ, ಯಾವುದೇ ರೈತರು ಕಂದಾಯ ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದರೆ, ಅಂತಹವರನ್ನು ಭೂ ಕಬಳಿಕೆ ವ್ಯಾಪ್ತಿಗೆ ತರದಿರಲು ತೀರ್ಮಾನಿಸಲಾಗಿದೆ ಎಂದರು. ಸರ್ಕಾರಿ ಭೂಮಿ ಎಂದು ತಿಳಿಯದೆ, ರೈತರು ಕೃಷಿ ಚಟುವಟಿಕೆ ಮಾಡಿಕೊಂಡಿರುತ್ತಾರೆ. ಅಂತಹವರನ್ನು ಭೂಗಳ್ಳರು ಎನ್ನಲಾಗದು. ಈ ದೃಷ್ಟಿಯಿಂದ ಕಂದಾಯ ಇಲಾಖೆ ಕಾನೂನಿಗೆ ತಿದ್ದುಪಡಿ ತಂದು ಗ್ರಾಮೀಣ ಭಾಗದಲ್ಲಿ ಭೂಕಬಳಿಕೆ ಎನ್ನುವ ಪದದಿಂದ ಹೊರಗಿಡಲಾಗುವುದು ಎಂದರು. ಯಾಕೆಂದರೆ ಗ್ರಾಮೀಣ ಭಾಗಗಳಲ್ಲಿ ರೈತರು ಹಲವು ಕಾರಣಗಳಿಂದ ಜಮೀನನ್ನು ಸ್ವಾಧೀನದಲ್ಲಿಟ್ಟುಕೊಂಡಿರಬಹುದು. ಆದರೆ ಈ ಕಾರಣಕ್ಕಾಗಿಯೇ ಅವರನ್ನು ಭೂ ಕಬಳಿಕೆದಾರರು ಎಂದು ಗುರುತಿಸುವುದು ಸರಿಯಲ್ಲ ಎಂದು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದರು.

ಹೀಗಾಗಿ ಇನ್ನು ಮುಂದೆ ಮಹಾನಗರ ಪಾಲಿಕೆ ಮತ್ತು ನಗರಪ್ರದೇಶಗಳಲ್ಲಿ ಭೂ ಒತ್ತುವರಿ ಪ್ರಕರಣ ನಡೆದರೆ ಒತ್ತುವರಿ ಮಾಡಿದವರನ್ನು ಭೂ ಕಬಳಿಕೆದಾರರು ಎಂದು ಪರಿಗಣಿಸುವುದಾಗಿ ಅವರು ವಿವರಿಸಿದರು. ಕೊಂಕಣ ರೈಲ್ವೆ ಅಭಿವೃದ್ಧಿಗೆ 73 ಕೋಟಿ ರೂಪಾಯಿ ನೀಡಲಾಗುವುದು, ಕೇಂದ್ರದ ನೀತಿ ಆಯೋಗದ ಮಾದರಿಯಲ್ಲಿ ರಾಜ್ಯದಲ್ಲಿ ನೀತಿ ಆಯೋಗ ರಚನೆಗೆ ಸಂಪುಟ ಘಟನೋತ್ತರ ಅನುಮೋದನೆ ನೀಡಿದೆ ಎಂದರು.

ಸಿಂಗನಾಯಕನಹಳ್ಳಿ ಸೇರಿದಂತೆ ರಾಜಧಾನಿಯ ನಾಲ್ಕು ಭಾಗಗಳಲ್ಲಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆಗಳನ್ನು ಸ್ಥಾಪಿಸಲು ಐವತ್ತೆರಡು ಕೋಟಿ ರೂ.ಗಳನ್ನು ನೀಡಲು ತೀರ್ಮಾನಿಸಲಾಗಿದೆ ಎಂದರು. ಶಿರಾದಲ್ಲಿ ಅಪಘಾತದಿಂದ ಮೃತಪಟ್ಟ ಒಂಭತ್ತು ಮಂದಿಯ ಕುಟುಂಬಗಳಿಗೆ ತಲಾ ಐದು ಲಕ್ಷ ರೂ. ಪರಿಹಾರ ನೀಡಲು ತೀರ್ಮಾನಿಸಲಾಗಿದೆ ಎಂದರು.

ತನಿಖೆಗೆ ಸರ್ಕಾರದ ಅನುಮತಿ

ಮಾಡೊದ್ರಿಂದ ಏನು ಬರುತ್ತದೆ. ಲೋಕಾಯುಕ್ತಕ್ಕೆ ಕೊಡಲಿ. ಯಾರು ಭ್ರಷ್ಟರು ಅಂತ ಸಾಬೀತುಪಡಿಸಲಿ, ರಾಜ್ಯದಲ್ಲಿ ಆರೋಪ ಮಾಡುವುದಕ್ಕೆಲ್ಲ ತನಿಖೆ ಮಾಡಲು ಆಗುವುದಿಲ್ಲ.

ಕೆಂಪಣ್ಣನವರು ಕಂಟ್ರಾಕ್ಟರ್ ಆಗಿ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಮಾಹಿತಿ ಸಿಕ್ಕಿಲ್ಲ. ಅವರ ಬಳಿ ಯಾರು ಹಣ ಕೇಳಿದ್ದಾರೆ ಅಂತ ಗೊತ್ತಿಲ್ಲ. ಮುಖ್ಯಮಂತ್ರಿ ಮೇಲೆ ನಂಬಿಕೆ ಇಲ್ಲ ಅಂದರೆ ಹೈಕೋರ್ಟ್‌ಗೆ ದೂರು ಸಲ್ಲಿಸಲಿ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆರೋಪ ಮಾಡುತ್ತಿದ್ದರೆ ಒಳ್ಳೆಯದಲ್ಲ. ಯಾರೀ ಕೆಂಪಣ್ಣ.

ನ್ಯಾಯಾಂಗ ತನಿಖೆಗೆ ಏನಾದರೂ ದಾಖಲೆ ನೀಡಲಿ, ದಾಖಲೆ ಕೊಟ್ಟರೆ ತನಿಖೆ ಮಾಡಿಸುತ್ತೇವೆ. ಸಿದ್ದರಾಮಯ್ಯ ತಮ್ಮ ಕಾಲದಲ್ಲಿ ಭ್ರಷ್ಟಾಚಾರ ಆಮೆ ವೇಗದಲ್ಲಿ ಇತ್ತು. ಈಗ ಶರವೇಗವಾಗಿ ಹೆಚ್ಚಿದೆ ಅಂತ ಹೇಳಿದ್ದಾರೆ. ಅವರೇ ತಮ್ಮ ಕಾಲದಲ್ಲೂ ಭ್ರಷ್ಟಾಚಾರ ಇತ್ತು ಎಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಸೆ.6ರಂದು ಮೈಸೂರು ಮೇಯರ್ ಚುನಾವಣೆ

ಸಾಮಾನ್ಯ ವರ್ಗಕ್ಕೂ, ಉಪಮೇಯರ್ ಹಿಂದುಳಿದ ವರ್ಗದ ಮಹಿಳೆಗೂ ಮೀಸಲಿರಿಸಿ ಆದೇಶ ಹೊರಡಿಸಿತ್ತು. ಹಾಗಾಗಿ ಮೇಯರ್‌ಗಾದಿ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ವಲಯದಲ್ಲಿ ರಾಜಕೀಯ ಚಟುವಟಿಕೆ ಆರಂಭವಾಗಿದೆ. ಈಗ ಚುನಾವಣಾ ದಿನಾಂಕವೂ ನಿಗದಿಯಾಗಿರುವುದರಿಂದ ಕಸರತ್ತು ಇನ್ನಷ್ಟು ವೇಗ ಪಡೆದುಕೊಳ್ಳಲಿದೆ.

ಲಗೇಜ್ ಸ್ಕ್ಯಾನರ್‌ಗಳು ಹಾಳಾಗಿವೆ

ಅಧಿಕಾರಿಗಳು ದುರಸ್ಥಿಗೆ ಮುಂದಾಗದೇ ನಿರ್ಲಕ್ಷ್ಯ ವಹಿಸಿದ್ದಾರೆ. ಜಲಾಶಯದ ಭದ್ರತೆಗಾಗಿ ಕಾವೇರಿ ನೀರಾವರಿ ನಿಗಮದಿಂದ ನೀಡಲಾಗಿದ್ದ 19 ಮೆಟಲ್ ಡಿಟೆಕ್ಟರ್‌ಗಳ ಪೈಕಿ ಪ್ರಸ್ತುತ ಒಂದೇ ಒಂದು ಸುಸ್ಥಿತಿಯಲ್ಲಿದ್ದು, ಉಳಿದ 18 ಮೆಟಲ್ ಡಿಟೆಕ್ಟರ್‌ಗಳು ಕೆಟ್ಟು ಹೋಗಿವೆ. ಪ್ರಸ್ತುತ ಕೃಷ್ಣರಾಜಸಾಗರ ಅಣೆಕಟ್ಟೆ ಭದ್ರತೆ ಸ್ಥಿತಿ ನೋಡಿದರೆ ಆತಂಕವಾಗುತ್ತದೆ. ತುರ್ತಾಗಿ ಸಿಸಿ ಕ್ಯಾಮರಾ ರಿಪೇರಿ, ನೂತನ ಮೆಟಲ್ ಡಿಟೆಕ್ಟರ್ ಒದಗಿಸುವಂತೆ ಮನವಿ ಮಾಡಿದರೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಯಾವುದಕ್ಕೂ ತಲೆಕೆಡಿಸಿಕೊಳ್ಳುತ್ತಿಲ್ಲ.

ಕಗ್ಗತ್ತಲಲ್ಲಿ ಕೆಆರ್‌ಎಸ್ ಜಲಾಶಯ: ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುವ ಕೆಆರ್‌ಎಸ್ ಜಲಾಶಯದಲ್ಲಿ ಅಲ್ಲಲ್ಲಿ ಕಗ್ಗತ್ತಲಿದೆ. ಜಲಾಶಯದ ಮೇಲ್ಭಾಗದಲ್ಲಿ ಅಳವಡಿಸಿದ್ದ ಕೆಲ ಬಲ್ಬ್‌ಗಳು ಒಡೆದು ಹಾಳಾಗಿ ಹೋಗಿವೆ. ನಾರ್ಥ್ ಗಾರ್ಡನ್ ಸೇರಿದಂತೆ ವಿವಿಧೆಡೆ ವಿದ್ಯುತ್ ದೀಪಗಳು ಕೆಟ್ಟು ನಿಂತಿವೆ. ರಾತ್ರಿ ವೇಳೆ ಕಾರ್ಯ ನಿರ್ವಹಿಸುವ ಜಲಾಶಯದ ಭದ್ರತಾ ಸಿಬ್ಬಂದಿ ಒಂದೆಡೆ ಕೈಕಟ್ಟಿ ಕೂರುವಂತಾಗಿದೆ.

ಉಗ್ರ ಸಂಘಟನೆಗಳ ಟಾರ್ಗೆಟ್ ಆಗಿರುವ ಕೆಆರ್‌ಎಸ್‌ಗೆ 3 ಪ್ರವೇಶ ದ್ವಾರಗಳಿದ್ದು, 2016 ರವರೆಗೆ ರಾಜ್ಯ ಸರ್ಕಾರ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಿತ್ತು. ಬಳಿಕ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ(ಕೆಎಸ್‌ಐಎಸ್‌ಎಫ್)ಯ 74 ಮಂದಿ ಸಿಬ್ಬಂದಿ ಹಾಕಲಾಗಿದೆ. ಈ ಪೈಕಿ 68 ಮಂದಿ ಜಲಾಶಯದ ವಿವಿಧೆಡೆ ಎಸ್‌ಎಲ್‌ಆರ್ ಗನ್ ಹಿಡಿದು ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗೆ 3ರಿಂದ 4 ಬುಲೆಟ್ ಪ್ರೂಫ್ ಜಾಕೆಟ್ ನೀಡಲಾಗಿದೆ. ಒಂದೇ ಒಂದು ಮೆಟಲ್ ಡಿಟೆಕ್ಟರ್ ಕಾರ್ಯ ನಿರ್ವಹಿಸುತ್ತಿದ್ದು, ಲಗೇಜ್ ಸ್ಕ್ಯಾನರ್ ಕೂಡ ದುರಸ್ಥಿಗೆ ಬಂದಿರುವುದರಿಂದ ಜಲಾಶಯದ ಭದ್ರತೆಗೆ ಸಾಕಷ್ಟು ಸಿಬ್ಬಂದಿಗಳಿದ್ದರೂ ಸಮರ್ಪಕ ಅತ್ಯಾಧುನಿಕ ಉಪಕರಣ ನೀಡುವಲ್ಲಿ ಸರ್ಕಾರ ವಿಫಲವಾಗಿದೆ.

ರಾತ್ರಿ ಅನಧಿಕೃತ ಸೈಲಿಂಗ್: ಇಷ್ಟೆಲ್ಲಾ ಭದ್ರತಾ ಲೋಪಗಳಿದ್ದರೂ, ಬಂಡವಾಳಶಾಹಿಗಳ ಒತ್ತಡಕ್ಕೆ ಮಣಿದು ಕೆಆರ್‌ಎಸ್ ಹಿನ್ನೀರಿನಲ್ಲಿ ರಾತ್ರಿ ವೇಳೆ ಅನಧಿಕೃತ ಸೈಲಿಂಗ್‌ಗೆ ಅವಕಾಶ ಮಾಡಿಕೊಡಲಾಗಿದೆ. ಇದೊಂದು ರೀತಿ ಭದ್ರತೆಗೆ ಆತಂಕ ತಂದೊಡ್ಡಿದೆ. ಈ ಬಗ್ಗೆ ಜಲಾಶಯದ ಸಿಬ್ಬಂದಿ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಜಲಾಶಯದ ಭದ್ರತಾ ಸಿಬ್ಬಂದಿಗೆ ಬೋಟ್ ವ್ಯವಸ್ಥೆ ಮಾಡಿ ಗಸ್ತು ತಿರುಗಲು ಅವಕಾಶ ಮಾಡಿಕೊಟ್ಟರೆ ಜಲಾಶಯಕ್ಕೆ ಸಾಕಷ್ಟು ಭದ್ರತೆ ನೀಡಿದಂತಾಗುತ್ತದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಭಾರೀ ಜನರ ನಿರೀಕ್ಷೆ: ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ಕಳೆದ 2 ವರ್ಷಗಳಿಂದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಸರಳವಾಗಿ ಆಚರಿಸಿತ್ತು. ಈ ಬಾರಿ ಅದ್ದೂರಿಯಾಗಿ ಆಚರಿಸಲು ತೀರ್ಮಾನ ಕೈಗೊಂಡಿದೆ. ಹೀಗಾಗಿ ಮೈಸೂರಿಗೆ ಲಕ್ಷಾಂತರ ಜನ ಬರಲಿದ್ದು, ಈ ವೇಳೆ ಪ್ರಸಿದ್ಧ ಕೆಆರ್‌ಎಸ್ ಜಲಾಶಯವನ್ನು ಕಣ್ತುಂಬಿಕೊಳ್ಳಲು ಭಾರೀ ಜನ ಆಗಮಿಸುವುದರಿಂದ ಕೂಡಲೇ ಸರ್ಕಾರ ಕೆಟ್ಟು ನಿಂತಿರುವ ಸಿಸಿಟಿವಿ, ಮೆಟಲ್ ಡಿಟೆಕ್ಟರ್‌ಗಳು ಹಾಗೂ ಲಗೇಜ್ ಸ್ಕ್ಯಾನರ್‌ಗಳ ದುರಸ್ಥಿಗೆ ಮುಂದಾಗಬೇಕು. ಅಲ್ಲದೇ ಇಲ್ಲಿಗೆ ಭದ್ರತಾ ಪಡೆಗೆ ಅತ್ಯಾಧುನಿಕ ಸಾಧನ–ಸಲಕರಣೆ ನೀಡುವ ಮೂಲಕ ಜಲಾಶಯಕ್ಕೆ ಮತ್ತಷ್ಟು ಭದ್ರತೆ ಒದಗಿಸಬೇಕೆಂದು ಈ ಭಾಗದ ಜನರ ಒತ್ತಾಯವಾಗಿದೆ.


> “ ಕೆಆರ್‌ಎಸ್‌ನಲ್ಲಿ ಸಿಸಿ ಟಿವಿ, ಮೆಟಲ್ ಡಿಟೆಕ್ಟರ್, ಲಗೇಜ್ ಸ್ಕ್ಯಾನರ್ ಕಾರ್ಯ ನಿರ್ವಹಿಸದ ಬಗ್ಗೆ ‘ಮೈಸೂರು ಮಿತ್ರ’ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡರನ್ನು ಸಂಪರ್ಕಿಸಿದಾಗ ನಮ್ಮ ಭದ್ರತಾ ಸಿಬ್ಬಂದಿ ಬಳಿ ಈ ಬಗ್ಗೆ ವರದಿ ಕೇಳಿದ್ದೇನೆ. ಅವರಿಂದ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

> “ ಕೃಷ್ಣರಾಜ ಸಾಗರ ಜಲಾಶಯ ದೇಶದ ಅಮೂಲ್ಯ ಸಂಪತ್ತು. ರಾಜ್ಯದ ಜನ ಸುಭೀಕ್ಷವಾಗಿರಲೆಂದು ಇದನ್ನು ಮೈಸೂರು ರಾಜವಂಶಸ್ಥರು ತಮ್ಮ ಚಿನ್ನಾಭರಣ ಮಾರಿ ನಿರ್ಮಿಸಿಕೊಟ್ಟಿದ್ದಾರೆ. ಇಂತಹ ಜಲಾಶಯದ ಭದ್ರತೆಗಾಗಿ ಅಳವಡಿಸಿರುವ ಸಿಸಿ ಟಿವಿ, ಮೆಟಲ್ ಡಿಟೆಕ್ಟರ್‌ಗಳು ಕಾರ್ಯ ನಿರ್ವಹಿಸದಿರುವುದು ದುರಂತವೇ ಸರಿ. ಸರ್ಕಾರ ಜಲಾಶಯದ ಭದ್ರತೆಗೆ ಸಿಬ್ಬಂದಿ ನಿಯೋಜಿಸಿದರೆ ಸಾಲದು. ಅವರಿಗೆ ಅತ್ಯಾಧುನಿಕ ಸಾಧನ–ಸಲಕರಣೆ ನೀಡಬೇಕು. ಸಿಸಿ ಟಿವಿ, ಮೆಟಲ್ ಡಿಟೆಕ್ಟರ್ ದುರಸ್ಥಿಗೆ ಮುಂದಾಗದ ಕಾವೇರಿ ನೀರಾವರಿ ಅಧಿಕಾರಿಗಳ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಜಲಾಶಯದ ಭದ್ರತೆ ದೃಷ್ಟಿಯಿಂದ ಹಿನ್ನೀರಿನಲ್ಲಿ ನಡೆಯುತ್ತಿರುವ ಅನಧಿಕೃತ ಸೈಲಿಂಗ್ ನಿಲ್ಲಿಸಬೇಕು. ಅಲ್ಲದೇ ಭದ್ರತಾ ಪಡೆ ಗಸ್ತಿಗೆ ಸೂಕ್ತ ಬೋಟ್ ವ್ಯವಸ್ಥೆ ಮಾಡಬೇಕು.
> – ರವೀಂದ್ರ ಶ್ರೀಕಂಠಯ್ಯ, ಶಾಸಕ.

ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರಕ್ಕೆ ಚಾಲನೆ

ಭಾರತೀಯ ಕಲೆಗಳಲ್ಲಿ ಆಧ್ಯಾತ್ಮದ ಸೆಲೆಯಿದೆ

ಭಾರತೀಯ ಶ್ರೇಷ್ಠ ಚಿಂತನೆ–ಸಂಸ್ಕೃತಿ ಮರೆಯುತ್ತಿರುವವರೇ ಹೆಚ್ಚು ; ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ್‌ಕುಮಾರ್



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಹಮ್ಮಿಕೊಂಡಿರುವ ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರಕ್ಕೆ ಹಿರಿಯ ಚಿತ್ರಕಲಾವಿದ ಎಸ್.ಎಂ.ಜಂಬುಕೇಶ್ವರ ಗುರುವಾರ ಚಾಲನೆ ನೀಡಿದರು.

ಕಾವಿಕಲೆಗೆ ಪುನರುಜ್ಜೀವ ಅಗತ್ಯ ; ಹಿರಿಯ ಚಿತ್ರಕಲಾವಿದ ಎಸ್.ಎಂ.ಜಂಬುಕೇಶ್ವರ

ಮೈಸೂರು,ಆ.25(ಪಿಎಂ)– ಇತ್ತೀಚಿನ ಆಧುನಿಕ ಜಗತ್ತಿನಲ್ಲಿ ಕಾವಿಕಲೆ ನಶಿಸುವತ್ತ ಸಾಗಿದ್ದು, ಇದನ್ನು ಪುನರುಜ್ಜೀವಗೊಳಿಸುವುದು ಅಗತ್ಯ ಎಂದು ಹಿರಿಯ ಚಿತ್ರಕಲಾವಿದ ಹಾಗೂ ಛಾಯಾಗ್ರಾಹಕ ಎಸ್.ಎಂ.ಜಂಬುಕೇಶ್ವರ ಹೇಳಿದರು. ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರಕ್ಕೆ ಸಪ್ತ ವರ್ಣಗಳನ್ನು ಮಡಿಕೆ ನೀರಿಗೆ ಮಿಶ್ರಣ ಮಾಡುವ ಮೂಲಕ ಚಾಲನೆ ನೀಡಿದ ಅವರು, ಕಾವಿಕಲೆ ಪುನರುಜ್ಜೀವಗೊಳಿಸುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಇದು ನಿಜಕ್ಕೂ ಪ್ರಶಂಸನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾವಿಕಲೆಯನ್ನು ಭಿತ್ತಿಚಿತ್ರ ಕಲೆ ಹಾಗೂ ಸಾಂಪ್ರದಾಯಕ ಕಲೆ ಎಂತಲೂ ಕರೆಯಲಾಗುತ್ತದೆ. ಈ ಕಲೆ 12 ಮತ್ತು 13ನೇ ಶತಮಾನದಲ್ಲಿ ಮಹಾರಾಷ್ಟ್ರ ಮತ್ತು ಗೋವಾ ಭಾಗಗಳಲ್ಲಿ ಹುಟ್ಟಿ ಬೆಳೆದು ನಂತರ ಕರಾವಳಿ ಭಾಗದ ಕಾರವಾರ ಮತ್ತು ಮಂಗಳೂರಿಗೂ ಪಸರಿಸಿತು. ಹೆಚ್ಚಾಗಿ ದೇವಸ್ಥಾನಗಳು, ಚರ್ಚ್‌ಗಳು, ಅರಮನೆಗಳು ಸೇರಿದಂತೆ ಕೆಲ ಮನೆಗಳಲ್ಲಿಯೂ ಈ ಕಾವಿಕಲೆ ಚಿತ್ರಿಸಿರುವುದನ್ನು ಕಾಣಬಹುದು ಎಂದರು.

ಗೋಡೆ ಮೇಲೆ ಕಂದು ಬಣ್ಣವನ್ನು ಬಳಿದು ಅದರ ಮೇಲೆ ಬಿಳಿ ಬಣ್ಣದಿಂದ ಚಿತ್ರ ಬಿಡಿಸುವುದು ಹಾಗೂ ಗೋಡೆ ಮೇಲೆ ಬಿಳಿ ಬಣ್ಣ ಹಚ್ಚಿ ಕಂದು ಬಣ್ಣದಿಂದ ಚಿತ್ರ ಬಿಡಿಸುವುದೇ ಕಾವಿಕಲೆ. ಈ ಕಲೆಯಲ್ಲಿ ಹೆಚ್ಚಾಗಿ ದೇವರ ಚಿತ್ರಗಳನ್ನು ಬಿಡಿಸುವುದನ್ನು ಕಾಣುತ್ತೇವೆ. ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ವಸ್ತ್ರವಿನ್ಯಾಸಕ್ಕೂ ಈ ಕಲೆ ಬಳಕೆಯಾಗುತ್ತಿದೆ ಎಂದು ಹೇಳಿದರು.

ಮೈಸೂರು,ಆ.25(ಪಿಎಂ)– ಆಧ್ಯಾತ್ಮ ಭಾರತೀಯ ಸಂಸ್ಕೃತಿಯ ಆತ್ಮ. ಆಧ್ಯಾತ್ಮ ಹೊರತಾದ ಯಾವುದೇ ವಿಷಯವಸ್ತು ಭಾರತದಲ್ಲಿ ಇಲ್ಲ. ಅಂತೆಯೇ ನಮ್ಮ ಭಾರತೀಯ ಕಲೆಗಳಲ್ಲಿಯೂ ಆಧ್ಯಾತ್ಮವಿದೆ. ಆದರೆ ಸರ್ವಶ್ರೇಷ್ಠವಾದ ಭಾರತೀಯ ಸಂಸ್ಕೃತಿಯನ್ನು ಮರೆಯುತ್ತಿರುವವರೇ ನಮ್ಮಲ್ಲಿ ಹೆಚ್ಚಾಗಿದ್ದಾರೆ ಎಂದು ಕರ್ನಾಟಕ ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ್‌ಕುಮಾರ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಎಬಿವಿಪಿ ಅಂಗಸಂಸ್ಥೆಯಾದ ಆರ್ಟ್ ಮ್ಯಾಟರ್ಸ್ ಹಾಗೂ ಮೈಸೂರು ವಿವಿ ಜಂಟಿ ಆಶ್ರಯದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡಿದ ಅವರು, ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿ ಆಧ್ಯಾತ್ಮ ಆಧರಿಸಿದೆ ಎಂದು ತಿಳಿಸಿದರು.

ಇಂದು ಪಾಶ್ಚಿಮಾತ್ಯ ಚಿಂತನೆಯಿಂದ ಭಾರತೀಯ ಚಿಂತನೆಗಳನ್ನು ಮರೆತಿದ್ದೇವೆ. ಭಾರತೀಯ ಚಿಂತನೆ ಮತ್ತು ಸಂಸ್ಕೃತಿಯನ್ನು ಮರೆಯುತ್ತಿರುವವರೇ ಹೆಚ್ಚಿದ್ದು, ಇವರು ಸಾಹಿತ್ಯಕ್ಕೆ ರಸ ಬೇಡ, ಅರ್ಥ ಸಾಕು ಎನ್ನುತ್ತಾರೆ. ಅಲ್ಲದೆ, ಇವರು ಪಾಶ್ಚಿಮಾತ್ಯ ಕಲೆ, ಸಾಹಿತ್ಯ, ವಿಜ್ಞಾನ ಸೇರಿದಂತೆ ಪಾಶ್ಚಿಮಾತ್ಯವೇ ಸರ್ವಶ್ರೇಷ್ಠ ಎಂದು ನಂಬಿಕೊಂಡಿದ್ದಾರೆ. ನಮ್ಮ ಸಂಪ್ರದಾಯವನ್ನು ಮೂಢನಂಬಿಕೆ ಎಂದು ಹೀಗಳೆಯುತ್ತಾರೆ. ಬುಡಕಟ್ಟು–ಜಾನಪದ ಸಂಸ್ಕೃತಿಯನ್ನೂ ಟೀಕಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಂತಹ ಸನ್ನಿವೇಶದಿಂದ ನಮ್ಮಲ್ಲಿರುವ ನಿಧಿಯನ್ನು (ಭಾರತೀಯ ಶ್ರೇಷ್ಠ ಸಂಸ್ಕೃತಿ) ನಾವು ಕಳೆದುಕೊಳ್ಳುವತ್ತ ಸಾಗುತ್ತಿದ್ದೇವೆ. 1949ರಲ್ಲಿ ಸ್ಥಾಪನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ), ಭಾರತೀಯತೆ ಆಧಾರದಲ್ಲಿ ಭಾರತವನ್ನು ಪುನರ್ ನಿರ್ಮಿಸುವ ಆಶಯದೊಂದಿಗೆ ಕೆಲಸ ಮಾಡುತ್ತಿದ್ದು, ಎಬಿವಿಪಿಯ ಅಂಗ ಸಂಸ್ಥೆಯಾದ ಆರ್ಟ್ ಮ್ಯಾಟರ್ಸ್ ಕೂಡ ಅದಕ್ಕೆ ಪೂರಕವಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಬುಡಕಟ್ಟು, ಜಾನಪದ ಮತ್ತು ಸಾಂಪ್ರದಾಯಿಕ ಕಲೆಗಳು ನಮ್ಮ ಸಂಸ್ಕೃತಿಯ ಬೇರುಗಳು. ಲೋಕವನ್ನು ನೋಡಿ ಬಣ್ಣದ ಲೋಕವನ್ನು ಸೃಷ್ಟಿಸುವ ಕಲಾವಿದರೂ ಸೃಷ್ಟಿಕರ್ತರೇ. ವಿಜ್ಞಾನಿಗಳು ಹೊಸ ಆವಿಷ್ಕಾರ ಮಾಡುವಂತೆ ಕಲಾವಿದರೂ ಕಲೆಯನ್ನು ಅನಾವರಣ ಮಾಡುತ್ತಾರೆ. ಹಾಗಾಗಿ ಕಲಾವಿದರೂ ವಿಜ್ಞಾನಿಗಳೇ. ಭಾವವಿಲ್ಲದೆ ಅರಿವಿಲ್ಲ, ಅರಿವಿಲ್ಲದೆ ಕ್ರಿಯೆ ಇಲ್ಲ. ಹಾಗಾಗಿ ಭಾವ, ಅರಿವು ಮತ್ತು ಕ್ರಿಯೆ ನಡುವೆ ಒಂದಕ್ಕೊಂದು ಸಂಬಂಧ ಏರ್ಪಟ್ಟಾಗ ಒಂದು ಸಾಹಿತ್ಯ ಸೃಷ್ಟಿಯಾಗುತ್ತದೆ. ಅದೇ ಮಾದರಿಯಲ್ಲಿ ಒಂದು ಕಲೆ–ಕಲಾಕೃತಿಯೂ ಸೃಷ್ಟಿಯಾಗಲಿದೆ ಎಂದು ವಿಶ್ಲೇಷಿಸಿದರು.

ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯ ಪ್ರಾಂಶುಪಾಲ ಕೆ.ಸಿ.ಮಹದೇವಶೆಟ್ಟಿ ಮಾತನಾಡಿ, ಬುಡಕಟ್ಟು ಚಿತ್ರಕಲೆ, ಜಾನಪದ ಚಿತ್ರಕಲೆ ಬಳಿಕ ಜೀವಕಳೆ ತಳೆದ ಕಲೆಯೇ ಕಾವಿಕಲೆ. ಮಣ್ಣಿನಿಂದ ತಯಾರಿಸಿದ ಬಣ್ಣ ಬಳಸಿಕೊಂಡು ಈ ರೀತಿಯ ಚಿತ್ರಕಲೆ ಬರೆಯಲಾಗುತ್ತದೆ. ಈ ಚಿತ್ರ ಬರೆಯುವ ಮಣ್ಣನ್ನು ಬಯಲು ಪ್ರದೇಶದಲ್ಲಿ ಕೆಮ್ಮಣ್ಣು ಎಂದು ಕರೆದರೆ, ಕರಾವಳಿ ಭಾಗದಲ್ಲಿ ಕಾವಿಮಣ್ಣು ಎಂದು ಕರೆಯುತ್ತಾರೆ. ಕಾವಿಕಲೆಯ ಮೂಲ ಬಣ್ಣ ಬಹುತೇಕ ಈಗ ಇಲ್ಲವಾಗಿದೆ. ಮೂಲ ಕಲ್ಪನೆಯೂ ಉಳಿದಿಲ್ಲ. ಇಂತಹ ಅಂಶಗಳತ್ತ ಗಮನಹರಿಸಬೇಕಿದೆ. ಕಲೆ ಮತ್ತು ಧರ್ಮ ಒಂದಕ್ಕೊಂದು ಪರಸ್ಪರ ಬೆಳವಣಿಗೆಗೆ ಸಹಕಾರಿಯಾಗಿವೆ. ಯಾವುದೇ ಧರ್ಮವಾದರೂ ಇಂತಹ ಲಕ್ಷಣ ಕಾಣಬಹುದು ಎಂದು ತಿಳಿಸಿದರು.

ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯ ಉಪನ್ಯಾಸಕ ಡಾ.ವಿಠ್ಠಲರೆಡ್ಡಿ ಚುಳಕಿ ಮಾತನಾಡಿ, ಕಾವಿಕಲೆ ಎನ್ನುವುದು ಕೌಶಲ್ಯಾಧಾರಿತ ಚಿತ್ರಕಲೆ. ಕಾವಿಕಲೆ ತಾಳ್ಮೆಯನ್ನು ಅಪೇಕ್ಷಿಸುತ್ತದೆ. ಈ ಕಲೆ ಕರಗತ ಮಾಡಿಕೊಳ್ಳಲು ತಾಳ್ಮೆ ಮುಖ್ಯ. ಈ ಕಲೆಯ ಅಭ್ಯಾಸದಿಂದ ಕಲಾವಿದನಲ್ಲಿ ಸೃಜನಾತ್ಮಕತೆಯ ಜೊತೆಗೆ ತಾಳ್ಮೆಯ ಮನೋಭಾವ ಬೆಳೆಯಲಿದೆ ಎಂದು ಹೇಳಿದರು.

ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಭಾಗಗಳ ವಿವಿಧ ಚಿತ್ರಪ್ರಕಾರದ ಸುಮಾರು 100 ಕಲಾವಿದರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದಾರೆ. ಇವರಿಗೆ ಡಾ.ವಿಠ್ಠಲರೆಡ್ಡಿ ಚುಳಕಿ ಕಾವಿಕಲೆ ಬಗ್ಗೆ ತರಬೇತಿ ನೀಡಲಿದ್ದಾರೆ. ಕಾರ್ಯಾಗಾರದಲ್ಲಿ ಉತ್ತಮ ಕಾವಿಕಲೆ ರಚನೆ ಮಾಡುವವರಿಗೆ ನಗದು ಬಹುಮಾನ ನೀಡಲಾಗುತ್ತದೆ. ಆರ್ಟ್ ಮ್ಯಾಟರ್ಸ್ ಕರ್ನಾಟಕ ಪ್ರಾಂತ ಸಂಯೋಜಕ ಸಿ.ಚಂದ್ರಶೇಖರ್, ಎಬಿವಿಪಿ ಮೈಸೂರು ಜಿಲ್ಲಾ ಸಂಚಾಲಕ್ ಶಿವು ಮತ್ತಿತರರು ಹಾಜರಿದ್ದರು.

‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಪಂದ್ಯಾವಳಿ

ಫೈನಲ್‌ಗೆ ಗುಲ್ಬರ್ಗಾ ಮೈಸ್ಟಿಕ್ಸ್; ಮೈಸೂರು ವಾರಿಯರ್ಸ್‌ಗೆ ನಿರಾಸೆ



ಇಂದು ಫೈನಲ್ ಹಣಾಹಣಿ: ಪ್ರವೇಶ ಉಚಿತ

ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಗುಲ್ಬರ್ಗಾ ಮೈಸ್ಟಿಕ್ಸ್ ವಿರುದ್ಧ ನಾಳೆ(ಆ.26) ಸಂಜೆ 7 ಗಂಟೆಗೆ ಫೈನಲ್ ಹಣಾಹಣಿ ನಡೆಯಲಿದ್ದು, ಉಭಯ ತಂಡಗಳು ‘ಮಹಾರಾಜ ಟ್ರೋಫಿ’ ಗೆಲ್ಲುವ ತವಕದಲ್ಲಿವೆ. ಮೊದಲ ಕ್ವಾಲಿಫೈಯರ್‌ನಲ್ಲಾದ ಸೋಲಿನ ಸೇಡು ತಿರಿಸಿಕೊಳ್ಳುವ ತವಕದಲ್ಲಿ ಗುಲ್ಬರ್ಗಾ ಮೈಸ್ಟಿಕ್ಸ್ ಇದ್ದು, ಬಲಿಷ್ಠ ಬೆಂಗಳೂರು ಬ್ಲಾಸ್ಟರ್ಸ್ ಕೂಡ ಟ್ರೋಫಿ ಗೆಲ್ಲಲು ತನ್ನದೆ ತಂತ್ರಗಳ ರೂಪಿಸಿದೆ.

ಫೈನಲ್‌ಗೆ ಉಚಿತ ಪ್ರವೇಶ: ‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಫೈನಲ್ ಪಂದ್ಯಕ್ಕೆ ಉಚಿತ ಪ್ರವೇಶ ನೀಡಲು ಕೆಎಸ್‌ಸಿಎ ನಿರ್ಧರಿಸಿದೆ. ‘ಬಿ–ಅಪ್ಪರ್’ ಸ್ಟ್ಯಾಂಡ್‌ಗೆ ಉಚಿತ ಪ್ರವೇಶಕ್ಕೆ ಟಿಕೆಟ್‌ಗಳನ್ನು ನೀಡಲು ನಿರ್ಧರಿಸಿದ್ದು, ಗೇಟ್ ನಂ.2ರ ಮೂಲಕ ಬಿ–ಅಪ್ಪರ್ ಸ್ಟ್ಯಾಂಡ್ ಪ್ರವೇಶಿಸಬಹುದಾಗಿದೆ ಎಂದು ಕೆಎಸ್‌ಸಿಎ ಅಧಿಕೃತ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಬೆಂಗಳೂರು ಆ.25– ದೇವದತ್ ಪಡಿಕ್ಕಲ್ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಮೈಸೂರು ವಾರಿಯರ್ಸ್ ವಿರುದ್ಧ ಗುಲ್ಬರ್ಗಾ ಮೈಸ್ಟಿಕ್ಸ್ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಫೈನಲ್‌ಗೆ ಲಗ್ಗೆ ಇಟ್ಟಿದೆ. ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಪಂದ್ಯಾವಳಿಯ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ನಿರೀಕ್ಷೆಗಳನ್ನು ಉಲ್ಟಾ ಮಾಡಿದ ದೇವದತ್ ಪಡಿಕ್ಕಲ್ ಗೆಲುವಿನ ಆಸೆಗೆ ತಣ್ಣೀರೆರಚಿದರು.

158 ರನ್‌ಗಳ ಗೆಲುವಿನ ಗುರಿ ಪಡೆದ ಗುಲ್ಬರ್ಗಾ ಮೈಸ್ಟಿಕ್ಸ್ ಆರಂಭದಲ್ಲೇ ಪ್ರಮುಖ ಆಟಗಾರರನ್ನು ಕಳೆದುಕೊಂಡು ಮುಗ್ಗರಿಸಿದರೂ ಛಲಬಿಡದೆ ದಿಟ್ಟ ಪ್ರದರ್ಶನ ನೀಡಿದ ದೇವದತ್ ಪಡಿಕ್ಕಲ್ ಇನ್ನೂ 2 ಎಸೆತಗಳು ಬಾಕಿ ಇರುವಂತೆಯೇ ತಂಡಕ್ಕೆ ಜಯದ ಕಾಣಿಕೆ ನೀಡಿದರು. ಆರಂಭಿಕ ಆಟಗಾರರಾದ ಜೇಶ್ವತ್ ಆಚಾರ್ಯ 4, ರೋಹನ್ ಪಾಟೀಲ್ 1, ಕೃಷ್ಣನ್ ಶ್ರೀಜಿತ್ 9, ನಾಯಕ ಮನಿಶ್ ಪಾಂಡೆ 10 ರನ್‌ಗಳಿಸಿ ಅಭಿಮಾನಿಗಳಿಗೆ ನಿರಾಶೆ ಮೂಡಿದರು. ತಂಡದ ಮೊತ್ತ 78 ರನ್ ಆಗುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡಿತು. ಮೈಸೂರು ವಾರಿಯರ್ಸ್ ಪಾಳಯದಲ್ಲಿ ಪಂದ್ಯವನ್ನು ಗೆಲ್ಲುವ ಭರವಸೆಯೂ ಮೂಡಿತ್ತು.

ಆದರೆ, 6ನೇ ಕ್ರಮಾಂಕದಲ್ಲಿ ಬಂದ ಮನೋಜ್ ಭಾಂಡಗೆ ಜೊತೆಯಾದ ದೇವದತ್ ಪಡಿಕ್ಕಲ್ ದಿಟ್ಟ ಪ್ರದರ್ಶನ ನೀಡುವ ಮೂಲಕ ಪಂದ್ಯದ ದಿಕ್ಕನ್ನೇ ಬದಲಿಸಿದರು. ಕೇವಲ 64 ಎಸೆತಗಳನ್ನು ಎದುರಿಸಿದ ಪಡಿಕ್ಕಲ್ 8 ಬೌಂಡರಿ, 5 ಸಿಕ್ಸರ್ ಸಹಿತ 96 ರನ್‌ಗಳನ್ನು ಗಳಿಸಿ ಅಜೇಯರಾಗುಳಿದರು. ಮೊತ್ತೊಂದೆಡೆ ಉತ್ತಮ ಸಾಥ್ ನೀಡಿದ ಮನೋಜ್ ಭಾಂಡಗೆ 23 ಎಸೆತಗಳಲ್ಲಿ 2 ಬೌಂಡರಿ, 2 ಸಿಕ್ಸರ್ ಸಹಿತ ಅಜೇಯ 35 ರನ್‌ಗಳ ಉಡುಗೊರೆ ನೀಡಿದರು. ಅಂತಿಮವಾಗಿ 19.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 158ರನ್ ಗಳಿಸುವ ಮೂಲಕ ಫೈನಲ್‌ಗೆ ಲಗ್ಗೆ ಇಟ್ಟಿತು. ಮೈಸೂರು ವಾರಿಯರ್ಸ್ ಪರ ಪವನ್ ದೇಶ್‌ಪಾಂಡೆ 2, ವಿದ್ಯಾಧರ ಪಾಟೀಲ್, ಮೊನೀಶ್ ರೆಡ್ಡಿ ತಲಾ ಒಂದೊಂದು ವಿಕೆಟ್ ಪಡೆದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್‌ಗೆ ಉತ್ತಮ ಆರಂಭ ದೊರೆಯಲಿಲ್ಲ. ಆರಂಭಿಕ ಆಟಗಾರ ನಿಹಾಲ್ ಉಲ್ಲಾಳ್ 14 ರನ್‌ಗಳಿಸಿ ಬಹುಬೇಗನೆ ಪೆವಿಲಿಯನ್ ಸೇರಿದರು. ಬಳಿಕ ನಾಯಕ ಕರುಣ್ ನಾಯರ್, ಪವನ್ ದೇಶಪಾಂಡೆ ತಾಳ್ಮೆ ಆಟಕ್ಕೆ ಮುಂದಾದರು. ಕರುಣ್ 32 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 42 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಪವನ್ ದೇಶಪಾಂಡೆ 42 ಎಸೆತಗಳಲ್ಲಿ 3 ಬೌಂಡರಿ ಸಹಿತ 38 ಗಳಿಸಿ ಔಟಾದರು. ಆಲ್‌ರೌಂಡರ್ ಶ್ರೇಯಸ್ ಗೋಪಾಲ್ 10, ಎಸ್.ಶಿವರಾಜ್ 16 ರನ್‌ಗಳಿಸಿದರೆ, ಕಡೆಯಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ನಾಗಾ ಭರತ್ 12 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್ ಸಹಿತ 27 ಕಲೆಹಾಕುವ ಮೂಲಕ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 157 ರನ್‌ಗಳಿಸಲಷ್ಟೇ ಸಾಧ್ಯವಾಯಿತು. ಗುಲ್ಬರ್ಗಾ ಪರ ವಿದ್ವತ್ ಕಾವೇರಪ್ಪ, ಕುಶಾಲ್ ವಾಧ್ವನಿ ತಲಾ 2 ವಿಕೆಟ್ ಪಡೆದು ಗಮನ ಸೆಳೆದರು.

ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಕಟ್ಟಡ ಉದ್ಘಾಟನೆ



ಮೈಸೂರು,ಆ.25(ಎಂಟಿವೈ)– ಮೈಸೂರಿನ ವಿಜಯನಗರದಲ್ಲಿ ನಿರ್ಮಿಸಿರುವ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಆ. 28ರಂದು ಬೆಳಗ್ಗೆ 10ಕ್ಕೆ ಜರುಗಲಿದೆ ಎಂದು ಕಾರ್ಯದರ್ಶಿ ಎಂ.ವಿ. ರವಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಎಲ್.ನಾಗೇಂದ್ರ, ಸಂಘದ ಅಧ್ಯಕ್ಷ ಎನ್. ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ನಮ್ಮ ಸೊಸೈಟಿಯಲ್ಲಿ 17 ಕೋಟಿ ಠೇವಣಿ ಇದ್ದು, ಕಳೆದ ಸಾಲಿನಲ್ಲಿ 25 ಕೋಟಿ ವಹಿವಾಟು ನಡೆಸಲಾಗಿದೆ. ಷೇರುದಾರರಿಗೆ ಶೇ. 12 ರಷ್ಟು ಡಿವಿಡೆಂಡ್ ಘೋಷಿಸಲಾಗಿದೆ. ವಿಜಯನಗರದಲ್ಲಿ ಶಾಖೆ ಆರಂಭಿಸುವ ಉದ್ದೇಶದಿಂದ ಈ ಕಟ್ಟಡ ಕಟ್ಟಲಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸೊಸೈಟಿಯ ಅಧ್ಯಕ್ಷ ಶಿವಕುಮಾರ್, ಪದಾಧಿಕಾರಿಗಳಾದ ಎನ್.ಜಿ. ರಮೇಶ್, ಸಿ.ಆರ್. ಶೇಷಗಿರಿ, ಮಾರಪ್ಪ ಇದ್ದರು.

ಮಾಂಸಹಾರ ಸಂಬಂಧ ಸಿದ್ದರಾಮಯ್ಯರ ನಿಲುವಿಗೆ ಪಕ್ಷಭೇದ ಮರೆತು ಬೆಂಬಲಿಸಬೇಕು

ಮಾಜಿ ಮೇಯರ್ ಪುರುಷೋತ್ತಮ್ ಮನವಿ



ಮೈಸೂರು,ಆ.25(ಎಂಟಿವೈ)– ಮಾಂಸಾಹಾರ ಸೇವನೆ ವಿಚಾರದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ವೈಚಾರಿಕ ನಿಲುವನ್ನು ಪಕ್ಷಭೇದ ಮರೆತು ಎಲ್ಲರೂ ಬೆಂಬಲಿಸಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ್ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಮಾಂಸಾಹಾರಿಗಳ ಸಂಖ್ಯೆ ಹೆಚ್ಚಾಗಿದೆ. ಇಂದಿಗೂ ಹಲವಾರು ದೇವಾಲಯಗಳಲ್ಲಿ ಮಾಂಸವನ್ನೇ ನೈವೇದ್ಯವಾಗಿ ಅರ್ಪಣೆ ಮಾಡುವ ಪದ್ಧತಿ ಚಾಲ್ತಿಯಲ್ಲಿದೆ. ಆದರೆ, ಮಾಂಸಾಹಾರ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡಲು ಹೊರಟಿರುವುದು ಖಂಡನೀಯ. ಈ ವಿಚಾರದಲ್ಲಿ ಸಿದ್ದರಾಮಯ್ಯ ನಿಲುವು ದಿಟ್ಟತನದಿಂದ ಕೂಡಿದೆ ಎಂದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಾವರ್ಕರ್ ಅವರನ್ನು ಹೊಗಳಿ ಮಾತನಾಡಿದ್ದಾರೆ ಎಂದು ಬಿಜೆಪಿ ಶಾಸಕ ಎನ್.ಮಹೇಶ್ ತಾವು ಬರೆದ ಲೇಖನದಲ್ಲಿ ತಿಳಿಸಿದ್ದಾರೆ. ಬಿಜೆಪಿ ನಾಯಕರನ್ನು ಓಲೈಕೆ ಮಾಡುವ ಸಲುವಾಗಿ ಮಹೇಶ್ ಸಮಾಜಕ್ಕೆ ತಪ್ಪು ಮಾಹಿತಿ ನೀಡುವ ಕಾರ್ಯ ಮಾಡುತ್ತಿದ್ದಾರೆ. ಅಂಬೇಡ್ಕರ್ ಸಾವರ್ಕರ್ ಅವರನ್ನು ಎಲ್ಲಿ ಹೊಗಳಿದ್ದಾರೆ ಎಂಬ ಕುರಿತು ಮಹೇಶ್ ಬಹಿರಂಗ ಚರ್ಚೆಗೆ ಆಗಮಿಸಲಿ ಎಂದು ಸವಾಲು ಹಾಕಿದರು. ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಚಿಂತಕರಾದ ದೇವಯ್ಯ, ಮುನಿಯಯ್ಯ, ಸಿದ್ಧಸ್ವಾಮಿ ಇದ್ದರು.

ಚಾಮುಂಡೇಶ್ವರಿ ದೇವಸ್ಥಾನದ ಭಕ್ತರ ಅನುಕೂಲಕ್ಕಾಗಿ ‘ಇ–ಹುಂಡಿ’ ಆರಂಭ

ಮೈಸೂರು, ಆ.25(ಆರ್‌ಕೆಬಿ)– ಡಿಜಿಟಲ್ ಪೇಮೆಂಟ್ ಜನಪ್ರಿಯ ಮತ್ತು ಅನಿವಾರ್ಯವಾಗುತ್ತಿರುವ ಇಂದಿನ ದಿನಗಳಲ್ಲಿ ಭಕ್ತರ ಅನುಕೂಲಕ್ಕಾಗಿ ಧಾರ್ಮಿಕ ದತ್ತಿ ಇಲಾಖೆಯು ಚಾಮುಂಡೇಶ್ವರಿ ದೇವಸ್ಥಾನದ ಕ್ಯೂ ಆರ್ ಕೋಡ್ ಸಹಿತ ಇ–ಹುಂಡಿ ಬಿಡುಗಡೆ ಮಾಡಿದ್ದು, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥಸ್ವಾಮಿ ಗುರುವಾರ ದೇವಸ್ಥಾನದ ಆವರಣದಲ್ಲಿ ಇ–ಹುಂಡಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಗ್ರಾಮೀಣ ಬ್ಯಾಂಕ್, ಚಾಮುಂಡಿ ಬೆಟ್ಟ ಶಾಖೆಯ ಸಹಯೋಗದಲ್ಲಿ ಚಾಮುಂಡೇಶ್ವರಿ ದೇವಿಯ ಭಕ್ತರು, ಕಾಣಿಕೆ ಸಲ್ಲಿಕೆಯನ್ನು ಡಿಜಿಟಲ್ ಪೇಮೆಂಟ್ ಮೂಲಕವೂ ಮಾಡಲು ಅನುಕೂಲವಾಗುವಂತೆ ಕ್ಯೂಆರ್ ಕೋಡ್ ಸಹಿತ ಇ–ಹುಂಡಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಇದರ ಭದ್ರತಾ ಕ್ರಮಗಳ ಬಗ್ಗೆ, ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ಷ್ಮ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿದೆ ಭಕ್ತರು ಕಾಣಿಕೆ ಸಲ್ಲಿಕೆಯ ಸಂದರ್ಭದಲ್ಲಿ

ಭಕ್ತರು ಡಿಜಿಟಲ್ ಪೇಮೆಂಟ್ ಮೂಲಕವೂ ಕಾಣಿಕೆ ಸಲ್ಲಿಸಲು ಅವಕಾಶ



ಕರ್ನಾಟಕ ಸರ್ಕಾರ ಧಾರ್ಮಿಕದತ್ತಿ ಇಲಾಖೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ, ಮೈಸೂರು ಈ ಪೂರ್ಣ ಹೆಸರನ್ನು ಗಮನಿಸುವಂತೆ ಅವರು ಭಕ್ತರಲ್ಲಿ ಮನವಿ ಮಾಡಿದರು. ಇದರ ದುರುಪಯೋಗದ ಬಗ್ಗೆ ತಿಳಿದು ಬಂದಲ್ಲಿ ಕಾನೂನು ಕ್ರಮ ಜರುಗಿಸುವುದಾಗಿಯೂ ತಿಳಿಸಿದರು.

ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಸಿ.ಜಿ.ಕೃಷ್ಣ ಅವರು ಮಾತನಾಡಿ, ಧಾರ್ಮಿಕ ದತ್ತಿ ಇಲಾಖೆಯಡಿ ಬರುವ ರಾಜ್ಯದ ಬಹುತೇಕ ಎ – ಗ್ರೇಡ್ ದೇವಸ್ಥಾನಗಳಲ್ಲಿ ಕ್ಯೂಆರ್ ಕೋಡ್ ಸಹಿತ ಇ – ಹುಂಡಿ ಸೌಲಭ್ಯವಿದೆ. ಅದನ್ನು ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿಯೂ ಅಳವಡಿಸಿಕೊಳ್ಳುವಂತೆ ಇಲಾಖೆಯ ಸೂಚನೆ ಮೇರೆಗೆ ಇಂದು ಬಿಡುಗಡೆಗೊಳಿಸಲಾಗಿದೆ. ಭಕ್ತಾದಿಗಳು ಇದರ ಸದುಪಯೋಗಪಡೆದುಕೊಳ್ಳುವಂತೆ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಅವರು ಕರ್ನಾಟಕ ಗ್ರಾಮೀಣ ಬ್ಯಾಂಕ್ ಈ ದಸರಾ ಸಂದರ್ಭದಲ್ಲಿ ಆಚರಿಸುತ್ತಿರುವ ರೀಟೇಲ್ ಉತ್ಸವದ ತಾತ್ಕಾಲಿಕ ಮಾಹಿತಿ ಕೇಂದ್ರದ ಉದ್ಘಾಟನೆಯನ್ನು ಚಾಮುಂಡಿಬೆಟ್ಟ ಶಾಖೆಯ ಮುಂಭಾಗದಲ್ಲಿ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಮೈಸೂರು ಪ್ರಾದೇಶಿಕ ವ್ಯವಸ್ಥಾಪಕ ಕೆ.ಎಸ್. ವಿಶ್ವನಾಥ್ ಮಾತನಾಡಿ, ಉತ್ಸವದ ಸಂದರ್ಭದಲ್ಲಿ ಗೃಹ ಸಾಲ, ವಾಹನ ಸಾಲ, ಅಡಮಾನ ಸಾಲಗಳಿಗೆ ಅನ್ವಯಿಸುವ ಬಡ್ಡಿ ದರ ಮತ್ತು ಸೇವಾ ಶುಲ್ಕ ರಿಯಾಯಿತಿಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಶಶಿಶೇಖರ ದೀಕ್ಷಿತ್, ಬ್ಯಾಂಕಿನ ಮುಖ್ಯ ವ್ಯವಸ್ಥಾಪಕ ಜೀವನಮುಕ್ತ ಚಾಮುಂಡಿಬೆಟ್ಟ ಶಾಖೆಯ ವ್ಯವಸ್ಥಾಪಕಿ ಸಿಂಧು ಮತ್ತು ಪ್ರಿಯಾಂತ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 26 ಆಗಸ್ಟ್ 2022

ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದ ಸರ್ಕಾರಗಳು ಪತನ

ಕೋಟೆಯಲ್ಲಿ ಪಾದಯಾತ್ರೆಗೆ ಚಾಲನೆ ನೀಡಿದ ಶಾಸಕ ಅನಿಲ್ ಚಿಕ್ಕಮಾದು



"ಹೆಚ್.ಡಿ.ಕೋಟೆ ಒಂದು ಪುಣ್ಯಭೂಮಿ. ಕ್ಷೇತ್ರದಲ್ಲಿ ಅಧಿದೇವತೆ ಚಿಕ್ಕದೇವಮ್ಮ ನೆಲೆಸಿದ್ದಾರೆ. ಅವರ ಹಾಗೂ ತಾಲೂಕಿನ ಜನತೆ ಆಶೀರ್ವಾದದಿಂದ ತಾಲೂಕಿನ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತಿದ್ದೇನೆ. ರಾಜ್ಯದಲ್ಲಿ ಕಾಂಗ್ರೆಸ್ ಅಲೆ ನಿರ್ಮಾಣವಾಗಿದೆ. ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ.
– ಅನಿಲ್ ಚಿಕ್ಕಮಾದು, ಶಾಸಕ.

ಹೆಚ್.ಡಿ.ಕೋಟೆ, ಆ.25– ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಂದಿನ ಚುನಾವಣೆಯಲ್ಲಿ ಪತನವಾಗಲಿವೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.


ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರುವಾರ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸ್ವಾತಂತ್ರ್ಯ ನಡಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಲೋಕಸಭೆ ಚುನಾವಣೆ ಸಂದರ್ಭ ಬಿಜೆಪಿ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ಭರವಸೆ ನೀಡಿತು. ಆದರೆ ಹೆಚ್ಚು ಜನರು ಉದ್ಯೋಗ ಪಡೆಯುವ ಬದಲು ಉದ್ಯೋಗ ಕಳೆದುಕೊಂಡರು. ಜೊತೆಗೆ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣ ವಾಪಸ್ ತಂದು ದೇಶದ ಪ್ರತಿಯೊಬ್ಬ ನಾಗರಿಕನ ಖಾತೆಗೆ 15 ಲಕ್ಷ ರೂ. ಜಮಾ ಮಾಡುವುದಾಗಿ ಸುಳ್ಳು ಹೇಳಿದ ಮೋದಿಯವರು ದೇಶದಲ್ಲಿ ಪ್ರತಿಯೊಂದು ವಸ್ತುವಿನ ಬೆಲೆ ಏರಿಕೆ ಮಾಡಿ ಬಡವರು, ಕೂಲಿ ಕಾರ್ಮಿಕರು ತತ್ತರಿಸಿ ಹೋಗುವಂತೆ ಮಾಡಿದ್ದಾರೆ ಎಂದರು.

ರಾಜ್ಯ ಸರ್ಕಾರ ಜನರಿಗೆ ಉತ್ತಮ ಆಡಳಿತ ನೀಡುವ ಬದಲು ಗುತ್ತಿಗೆದಾರರಿಂದ ಇಂತಹ ಕೆಲಸಕ್ಕೆ ಇಷ್ಟು ಪರ್ಸೆಂಟೇಜ್ ಎಂದು ನಿಗದಿ ಮಾಡಿ ಕಮಿಷನ್ ದಂಧೆಗೆ ಇಳಿದಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬಿ ಅಮೃತ ಮಹೋತ್ಸವ ಆಚರಿಸುತ್ತಿದ್ದೇವೆ. ಇಂತಹ ಸಂದರ್ಭ ದುರುಳರಿಂದ ದೇಶವನ್ನು ರಕ್ಷಣೆ ಮಾಡಬೇಕಾದ ಅನಿವಾರ್ಯತೆ ಇದೆ. ಅದಕ್ಕಾಗಿ ಕಾಂಗ್ರೆಸ್ ಕಾರ್ಯಕರ್ತರು ಸಜ್ಜಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ನಂತರ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಮುಖಂಡರ ನೇತೃತ್ವದಲ್ಲಿ ಅಂಬೇಡ್ಕರ್ ಭವನದಿಂದ ಹೊರಟ ಪಾದಯಾತ್ರೆ ಹ್ಯಾಂಡ್‌ಪೋಸ್ಟ್, ಜಕ್ಕಹಳ್ಳಿ, ದೇವಲಾಪುರ, ತುಂಬಸೋಗೆ ಮಾರ್ಗವಾಗಿ ತೆರಳಿ ಸರಗೂರು ಪಟ್ಟಣದಲ್ಲಿ ಅಂತ್ಯಗೊಂಡಿತು. ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಸಾವಿರಾರು ಕಾರ್ಯಕರ್ತರಿಗೆ ಮಜ್ಜಿಗೆ, ತಂಪು ಪಾನೀಯ, ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಕೋಟೆ ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮಾದಪ್ಪ, ಕಾಂಗ್ರೆಸ್ ಉಸ್ತುವಾರಿ ಕಾವೇರಪ್ಪ, ನಿಗಮ ಮಂಡಳಿ ಮಾಜಿ ಅಧ್ಯಕ್ಷ ಸುಂದರ್‌ದಾಸ್, ಜೆ.ವಿ.ಶೀತರಾಮ್, ಜಿಪಂ ಮಾಜಿ ಸದಸ್ಯರಾದ ನಂದಿನಿ, ಹೆಚ್.ಸಿ.ಮಂಜುನಾಥ್, ಚಿಕ್ಕವೀರನಾಯಕ, ರವಿ, ಭಾಗ್ಯಲಕ್ಷ್ಮೀ, ಬಿ.ವಿ.ಬಸವರಾಜು, ಮುಖಂಡರಾದ ತಮ್ಮಣ್ಣೇಗೌಡ, ಶಂಭುಲಿಂಗನಾಯಕ, ಸತೀಶ್‌ಗೌಡ, ಸೋಮೇಶ್, ಪ್ರದೀಪ, ಮೈಮುಲ್ ನಿರ್ದೇಶಕ ಈರೇಗೌಡ, ಜಿಲ್ಲಾ ಕುರುಬ ಸಂಘದ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಕುರುಬ ಸಂಘದ ಅಧ್ಯಕ್ಷ ಆನಂದ್, ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ರಾಜು ವಿಶ್ವಕರ್ಮ, ಮಧುಕುಮಾರ್, ಐಡಿಯಾ ವೆಂಕಟೇಶ್, ಪ್ರೇಮ್ ಸಾಗರ್, ಸೋಮಶೇಖರ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಹೊಂಡಾ ನಯಾಜ್, ಶಿವರಾಜು, ಸರಗೂರು ಪಪಂ ಮಾಜಿ ಅಧ್ಯಕ್ಷೆ ಜ್ಯೋತಿ, ಸದಸ್ಯ ಶ್ರೀನಿವಾಸ್, ಮರಿದೇವಯ್ಯ, ಕಾವೇರ, ಬಾಲಯ್ಯ, ನಾಗರಾಜ್, ರಾಜನಾಯಕ, ಅಂಕ ನಾಯಕ, ಕೊಮಾರೇಗೌಡ, ಮಂಜು, ಮಲ್ಲೇಶ್ ಇದ್ದರು.

ಸರಗೂರಲ್ಲಿ ಪಾದಯಾತ್ರೆಗೆ ಅದ್ಧೂರಿ ಸ್ವಾಗತ



ಸರಗೂರು, ಆ.25– 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಪಾದಯಾತ್ರೆಗೆ ಕಾಂಗ್ರೆಸ್ ಮುಖಂಡರು ಪಟ್ಟಣದಲ್ಲಿ ಅದ್ಧೂರಿ ಸ್ವಾಗತ ಕೋರಿದರು.

ಹೆಚ್.ಡಿ.ಕೋಟೆ ಅಂಬೇಡ್ಕರ್ ಭವನದಿಂದ ಆರಂಭವಾದ ಪಾತ್ರೆಯಾತ್ರೆ ಸಂಜೆ 5.30ರ ವೇಳೆಗೆ ಸರಗೂರಿನ ಕೆಇಬಿ ಬಳಿ ಆಗಮಿಸಿದ ವೇಳೆ ನೆರೆದಿದ್ದ ಕಾರ್ಯಕರ್ತರು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ಎಂಎಲ್‌ಸಿ ತಿಮ್ಮಯ್ಯ ಅವರಿಗೆ ಭಾರೀ ಗಾತ್ರದ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ ಜೈಕಾರ ಹಾಕಿದರು. ಬಳಿಕ ಪಾದಯಾತ್ರೆ ಪಟ್ಟಣದ ಮಹಾವೀರ ವೃತ್ತ, ಚಿಕ್ಕದೇವಮ್ಮ ವೃತ್ತ, ಬಸವೇಶ್ವರ ವೃತ್ತದ ಮೂಲಕ ಮಾಸ್ತಮ್ಮ ದೇವಸ್ಥಾನಕ್ಕೆ ತಲುಪಿತು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ದೇವನೂರಿನಲ್ಲಿ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ದೇವನೂರು, ಆ.25– ಮಕ್ಕಳಿಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆ ಅಗತ್ಯ. ಹಾಗಾಗಿ ಮಕ್ಕಳು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ತಿಳಿಸಿದರು.

ನಂಜನಗೂಡು ತಾಲೂಕಿನ ದೇವನೂರು ಗ್ರಾಮದಲ್ಲಿ ದೊಡ್ಡ ಕವಲಂದೆ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಬಲೂನ್ ಹಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರದ ಆದೇಶ ಮತ್ತು ಸುತ್ತೋಲೆ ಪ್ರಕಾರ ಈ ಹಿಂದೆ ಹೇಗೆ ಹೋಬಳಿ ಮಟ್ಟದಿಂದ ಹಿಡಿದು ರಾಜ್ಯಮಟ್ಟದವರೆಗೆ ಕ್ರೀಡಾಕೂಟ ನಡೆಸಲಾಗುತ್ತಿತ್ತೋ ಅದರಂತೆ ಆಯೋಜನೆ ಮಾಡಲಾಗಿದೆ. ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಕೂಡ ಅಷ್ಟೇ ಮುಖ್ಯ. ಕ್ರೀಡೆಯಿಂದ ಮಕ್ಕಳು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿ ಆರೋಗ್ಯವಂತರಾಗಿರುತ್ತಾರೆ ಎಂದು ಕಿವಿಮಾತು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ಎಂ.ಎಸ್.ಶ್ರೀಪತಿ ಮಾತನಾಡಿ, 2022–23ನೇ ಸಾಲಿನ ಹೋಬಳಿ ಮಟ್ಟದ ಕ್ರೀಡಾಕೂಟ ಆಯೋಜನೆ ಮಾಡಲು ಶಿಕ್ಷಣ ಇಲಾಖೆ ಆದೇಶ ನೀಡಿದ್ದು, ಅದರಂತೆ ದೇವನೂರಿನಲ್ಲಿ ಕ್ರೀಡಾಕೂಟ ಆಯೋಜಿಸಲಾಗಿದೆ. ಕೌಲಂದೆ ಹೋಬಳಿಯ 34 ಶಾಲೆಗಳ ಪೈಕಿ 20ಕ್ಕೂ ಹೆಚ್ಚು ಶಾಲೆಗಳು 800 ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಕ್ರೀಡಾಕೂಟಕ್ಕೆ ವಿವಿಧ ಪರ ಸಂಘಟನೆಗಳು ಹಳೆ ವಿದ್ಯಾರ್ಥಿಗಳು ಗ್ರಾಮಸ್ಥರು ಮತ್ತು ಶಿಕ್ಷಣ ಇಲಾಖೆ ಸಹಕಾರ ನೀಡಿದ್ದಾರೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ಹಾಗೂ ಕ್ರೀಡಾ ಧ್ವಜಾರೋಹಣವನ್ನು ದೇವನೂರು ಶ್ರೀಗುರು ಮಲ್ಲೇಶ್ವರ ದಾಸೋಹ ಮಠದ ಪೀಠಾಧ್ಯಕ್ಷ ಶ್ರೀಮಹಾಂತ ಸ್ವಾಮಿಗಳು ನೆರವೇರಿಸಿಕೊಟ್ಟರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ಜಿಲ್ಲಾ ಕಾರ್ಯದರ್ಶಿ ಮಹೇಶ್, ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಹರೀಶ್ ಕುಮಾರ್, ದೈಹಿಕ ಶಿಕ್ಷಕರ ಸಂಘದ ರಾಜೇಂದ್ರ, ರಂಗನಾಥ್, ರಾಜು, ಸ್ವಾಮಿ, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಸೇರಿದಂತೆ ದೈಹಿಕ ಶಿಕ್ಷಕರಿದ್ದರು.

ಸುರಗಳ್ಳಿಯಲ್ಲಿ ಪಡಿತರ ಉಪ ಕೇಂದ್ರ ಉದ್ಘಾಟನೆ



ಪಿರಿಯಾಪಟ್ಟಣ, ಆ.25– ತಾಲೂಕಿನ ಸುರಗಳ್ಳಿಯಲ್ಲಿ ನೂತನ ಪಡಿತರ ಉಪ ಕೇಂದ್ರಕ್ಕೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ತಾಲೂಕಿನಾದ್ಯಂತ ಸಾರ್ವಜನಿಕರು ದೂರದ ಊರುಗಳಿಂದ ಪಡಿತರ ತರುತ್ತಿರುವ ಹಳ್ಳಿಗಳಿಗೆ ನೂತನ ಪಡಿತರ ಉಪಕೇಂದ್ರ ಮಂಜೂರು ಮಾಡಿ ತಮ್ಮ ಗ್ರಾಮಗಳಲ್ಲೇ ಪಡಿತರ ದೊರೆಯುವಂತೆ ಮಾಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸೂಕ್ತ ವಾಹನ ಸೌಲಭ್ಯ ಇಲ್ಲದೆ ಬೇರೆ ಗ್ರಾಮಗಳಿಂದ ಮಹಿಳೆಯರು, ಮಕ್ಕಳು, ವಯೋವೃದ್ಧರು ಪಡಿತರ ತರಲು ಪಡುತ್ತಿದ್ದ ಸಂಕಷ್ಟ ಮನಗಂಡು ಆಹಾರ ಇಲಾಖೆ ಶಿರಸ್ತೇದಾರ್ ಸಣ್ಣಸ್ವಾಮಿ ಅವರಿಗೆ ಉಪಕೇಂದ್ರ ತೆರೆಯುವಂತೆ ಸೂಚಿಸಿದ್ದು, ಅದರಂತೆ ಆದ್ಯತೆಗನುಸಾರ ಹಂತ ಹಂತವಾಗಿ ತಾಲೂಕಿನ ವಿವಿಧೆಡೆ ಉಪಕೇಂದ್ರ ತೆರೆದು ಸಾರ್ವಜನಿಕರಿಗೆ ತಮ್ಮ ಊರುಗಳಲ್ಲೇ ಪಡಿತರ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಈ ವೇಳೆ ತಾಪಂ ಇಓ ಕೃಷ್ಣಕುಮಾರ್, ಆಹಾರ ಇಲಾಖೆ ಶಿರಸ್ತೇದಾರ್ ಸಣ್ಣಸ್ವಾಮಿ, ನಿರೀಕ್ಷಕ ಸಂದೀಪ್, ಮಂಜುನಾಥ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಸರ್ವಮಂಗಳ, ವಿದ್ಯಾಶಂಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು ಇದ್ದರು.

ವಿವಿಧೆಡೆ ಸಾವರ್ಕರ್ ರಥಯಾತ್ರೆಗೆ ಅದ್ದೂರಿ ಸ್ವಾಗತ



ಮಲ್ಕುಂಡಿ, ಆ.25– ದೇಶದ ಸ್ವಾತಂತ್ರ್ಯಕ್ಕಾಗಿ 10 ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಿದ ಮಹಾನ್ ವ್ಯಕ್ತಿ ಸಾವರ್ಕರ್ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ತಿಳಿಸಿದರು.

ಮೈಸೂರಿನಿಂದ ಹೊರಟ ರಥಯಾತ್ರೆಗೆ ಹುರ, ಮಲ್ಕುಂಡಿ, ಹೆಡಿಯಾಲ, ಹಾಡ್ಯ ಗ್ರಾಮಗಳಲ್ಲಿ ಅದ್ದೂರಿ ಸ್ವಾಗತ ನೀಡಿ ಮಾತನಾಡಿದ ಅವರು, ಸಾವರ್ಕರ್ ಒಬ್ಬ ಹುಟ್ಟು ಹೋರಾಟಗಾರ. ದೇಶಕ್ಕಾಗಿ ಹೋರಾಡಿದ ಮಹನೀಯರಲ್ಲಿ ಇವರು ಒಬ್ಬರು. ರಾಜಕಾರಣಕ್ಕಾಗಿ ವೀರ ಸಾವರ್ಕರ್ ಅವರನ್ನು ಎಂದಿಗೂ ವಿರೋಧಿಸಬಾರದು. ಇಂದಿನ ಯುವ ಪೀಳಿಗೆ ಎಚ್ಚೆತ್ತು ದೇಶಾಭಿಮಾನ, ಆದರ್ಶ ರೂಢಿಸಿಕೊಳ್ಳಬೇಕು ಎಂದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ಗ್ರಾಪಂ ಅಧ್ಯಕ್ಷ ಚಂದ್ರು, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಮುಖಂಡರಾದ ಶಿವರುದ್ರ, ಮಹದೇವ್, ಶಿವರಾಜ್, ಗಜೇಂದ್ರ, ಮೋಹನ್ ಸೇರಿದಂತೆ ಪ್ರಮುಖರಿದ್ದರು.

ಸತ್ಯಗಾಲ ಡೇರಿಗೆ ಕಾಂಗ್ರೆಸ್ ಬೆಂಬಲಿತರ ಆಯ್ಕೆ



ಕಂಪಲಾಪುರ, ಆ.25– ಇಲ್ಲಿಗೆ ಸಮೀಪದ ಸತ್ಯಗಾಲ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಚುನಾವಣೆ ನಡೆದು 11 ಸ್ಥಾನದಲ್ಲೂ ಕಾಂಗ್ರೆಸ್ ಬೆಂಬಲಿತರು ಗೆಲುವು ಸಾಧಿಸಿದ್ದಾರೆ.

ಸಂಘದಲ್ಲಿ ಒಟ್ಟು 188 ಮಹಿಳಾ ಷೇರುದಾರರಿದ್ದು, 11 ಸ್ಥಾನಕ್ಕೆ ಒಟ್ಟು 22 ಮಂದಿ ನಾಮಪತ್ರ ಸಲ್ಲಿಸಿದ್ದರು. ಕಾಂಗ್ರೆಸ್ – ಜೆಡಿಎಸ್ ಬೆಂಬಲಿತರ ನಡುವೆ ತೀವ್ರ ಪೈಪೋಟಿ ನಡೆದು, ಕೊನೆಗೆ 11 ಮಂದಿ ಕಾಂಗ್ರೆಸ್ ಬೆಂಬಲಿತರು ಆಯ್ಕೆಯಾದರು.

ಅನು (120), ಶಶಿರೇಖಾ (117), ಸುಶೀಲಮ್ಮ (117), ಕುಸುಮ (116), ಪುಟ್ಟಲಕ್ಷ್ಮಿ (113), ಸುಂದರಮ್ಮ (113), ಭಾಗ್ಯಮ್ಮ (112), ಸರೋಜಮ್ಮ (112) ಮತಗಳಿಂದ ಆಯ್ಕೆಯಾದರು.

ಸಾಮಾನ್ಯ ಕ್ಷೇತ್ರ : ಗೌರಮ್ಮ (ಪ.ಜಾತಿ–112), ಮಹಿರಾಬಾನು (ಹಿಂ.ವರ್ಗ ಅ–112), ಪೂರ್ಣಿಮಾ (ಪ್ರವರ್ಗ ಬಿ–116) ಜಯಗಳಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಸಿ.ಎನ್.ಗಿರೀಶ್ ಕಾರ್ಯ ನಿರ್ವಹಿಸಿದರು. ಸಂಘದ ಸಿಇಓ ಅನಸೂಯ, ಮುಖಂಡರಾದ ಎಸ್.ಎಲ್.ಲಕ್ಷ್ಮೀಗೌಡ, ಕಾಂಗ್ರೆಸ್ ಯುವ ಮುಖಂಡ ಎಸ್.ಎಲ್.ಕುಮಾರಸ್ವಾಮಿ, ರವಿಕುಮಾರ್, ರಫೀಕ್ ಅಹಮದ್, ಗ್ರಾಪಂ ಉಪಾಧ್ಯಕ್ಷ ಸುಬ್ರಹ್ಮಣ್ಯ, ಮೋಹನ್, ನಟೇಶ್, ಜಮೀಲ್ ಅಹಮದ್ ಮತ್ತಿತರರಿದ್ದರು.

ನಾಳೆ ಎಡತೊರೆ ಬಲಿಜ (ಬಣಜಿಗ) ಸಂಘ ಉದ್ಘಾಟನೆ

ಭೇರ್ಯ, ಆ.25– ತಾಲೂಕು ಎಡತೊರೆ ಬಲಿಜ (ಬಣಜಿಗ) ಸಂಘ ಉದ್ಘಾಟನಾ ಸಮಾರಂಭ ಆ.27ರಂದು ಬೆಳಗ್ಗೆ 11 ಗಂಟೆಗೆ ಕೆ.ಆರ್.ನಗರದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಮಳಲಿ ರಾಘು ತಿಳಿಸಿದ್ದಾರೆ. ಸಂಘವನ್ನು ಕರ್ನಾಟಕ ರಾಜ್ಯ ಶ್ರೀಕೃಷ್ಣದೇವರಾಯ ಬಲಿಜ ಸಂಘದ ಸಂಚಾಲಕ ಶಿರಾ ಡಾ.ಬಿ.ಗೋವಿಂದಪ್ಪ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಟಿ.ಎನ್.ದಯಾನಂದ್ ಅಧ್ಯಕ್ಷತೆ ವಹಿಸುವರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಗೊಂಡ ಸಮಾಜದ ವಿದ್ಯಾರ್ಥಿಗಳಿಗೆ ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಅರಗು ಮತ್ತು ಬಣ್ಣ ನಿಗಮದ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಮಾಜಿ ಎಂಎಲ್ಸಿಗಳಾದ ಟಿ.ಕೆ.ಚಿನ್ನಸ್ವಾಮಿ, ಕೆ.ಸಿ.ಪುಟ್ಟಸಿದ್ದಶೆಟ್ಟಿ, ಪುರಸಭಾ ಮಾಜಿ ಅಧ್ಯಕ್ಷ ನರಸಿಂಹರಾಜು, ಹಿರಿ ಮತ್ತು ಕಿರಿತೆರೆ ಕಲಾವಿದ ಬೆಸ್ಟ್ ಕ್ಲಬ್ ಜಯರಾಂ, ಗುತ್ತಿಗೆದಾರ ರವಿಶೆಟ್ಟಿ, ಮೈ.ಜಿಲ್ಲಾ ಬಲಿಜ(ಬಣಜಿಗ) ಸಂಘದ ನಿರ್ದೇಶಕ ಬಿ.ಕೆ.ಸುರೇಶ್ ಭಾಗವಹಿಸಲಿದ್ದಾರೆ.

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ



ಹನಗೋಡು, ಆ.25– ಪ್ರತಿಯೊಂದು ಮಗುವಿನಲ್ಲಿ ಒಂದು ಪ್ರತಿಭೆ ಅಡಗಿರುತ್ತದೆ. ಪ್ರತಿಭೆಗೆ ಬೆಲೆ ಕಟ್ಟಲಾಗದು. ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆಯಾಗಿದ್ದು, ಇದನ್ನು ಸದುಪಯೋಗ ಮಾಡಿಕೊಂಡು ವಿದ್ಯಾರ್ಥಿಗಳು ಉನ್ನತ ಸಾಧನೆ ಮಾಡುವಂತೆ ಶಿಕ್ಷಣ ಇಲಾಖೆ ಕ್ಷೇತ್ರ ಸಮನ್ವಯಾಧಿಕಾರಿ ಸಂತೋಷ್ ಹೇಳಿದರು.

ಇಲ್ಲಿಗೆ ಸಮೀಪದ ಹಿಂಡಗೂಡ್ಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಸಮೂಹ ಸಂಪನ್ಮೂಲ ಕೇಂದ್ರದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು ಎಂದ ಅವರು, ನಮ್ಮ ಭಾಗದಲ್ಲಿ ಅನೇಕ ಪ್ರತಿಭಾವಂತರಿದ್ದು, ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವಾಗಬೇಕು. ಇದಕ್ಕೆ ಪಾಲಕ–ಪೋಷಕ ವರ್ಗ, ಸಮುದಾಯದ ಸಹಕಾರ ಅಗತ್ಯ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಸುಭಾಷ್, ಪ್ರೌಢಶಾಲೆ ಮುಖ್ಯ ಶಿಕ್ಷಕ ಚಂದ್ರಶೇಖರ, ಹನಗೋಡು ಸೊಸೈಟಿ ಅಧ್ಯಕ್ಷ ರವಿಕುಮಾರ್, ಗ್ರಾಪಂ ಸದಸ್ಯರಾದ ಉಮಾರಾಣಿ, ಚೇತನ ಕುಮಾರ್, ರಾಮೇಗೌಡ, ಕುಮಾರ್, ಶೇಖರ್, ಡೈರಿ ರಾಜು, ಎಸ್‌ಡಿಎಂಸಿ ಅಧ್ಯಕ್ಷ ದಿನೇಶ್, ಸಿಆರ್‌ಪಿ ಶ್ರೀನಿವಾಸಮೂರ್ತಿ, ಹಿಂಡಗೂಡ್ಲು ಶಾಲೆ ಮುಖ್ಯ ಶಿಕ್ಷಕ ಪ್ರಸನ್ನ, ಗ್ರಾಮದ ಮುಖಂಡರಾದ ಡೈರಿ ರಾಜೇಗೌಡ, ಚೇತನ್, ಶೇಖರೇ ಗೌಡ, ರಾಜೇಗೌಡ ಮತ್ತಿತರರಿದ್ದರು.

ಮುಂಬರುವ ಚುನಾವಣೆಯಲ್ಲಿ ಟಿಕೆಟ್ ಪಡೆಯಲು

ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸುಳ್ಳು ದೂರು ದಾಖಲು

ತೋಟದಪ್ಪ ಬಸವರಾಜು ನಡೆಗೆ ಪುರಸಭೆ ಸದಸ್ಯ ಎನ್.ಸೋಮಣ್ಣ ಟೀಕೆ



ತಿ.ನರಸೀಪುರ, ಆ.25– ವಿಧಾನಸಭೆ ಅಥವಾ ಲೋಕಸಭೆ ಇವೆರಡರಲ್ಲಿ ಒಂದನ್ನೂ ಪ್ರತಿನಿಧಿಸದ ತೋಟದಪ್ಪ ಬಸವರಾಜು ಗ್ರಾಪಂ ಮತ್ತು ಪುರಸಭೆ ಸದಸ್ಯರಾಗಿಯೂ ಆಯ್ಕೆಗೊಂಡಿಲ್ಲ. ಜನಪ್ರತಿನಿಧಿಗಳ ಮಹತ್ವ ಮತ್ತು ವಿಪಕ್ಷ ನಾಯಕರ ಘನತೆ ಅರಿಯದೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಗಿಟ್ಟಿಸಲು ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲಿಸಿದ್ದಾರೆ ಎಂದು ಪುರಸಭೆ ಸದಸ್ಯ ಎನ್.ಸೋಮಣ್ಣ ಟೀಕಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗಿನಲ್ಲಿ ಅತಿವೃಷ್ಟಿಯಿಂದಾದ ಹಾನಿ ಅಂದಾಜಿಸಲು, ಅಲ್ಲಿನ ಜನರ ಪರಿಸ್ಥಿತಿ ಖುದ್ದಾಗಿ ಅರಿಯಲು ಭೇಟಿ ನೀಡಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ತೂರಿದ್ದು ಸರಿಯೇ ಎಂಬುದು ಓರ್ವ ಜನಪ್ರತಿನಿಧಿಯಾಗಿದ್ದರೆ ತೋಟದಪ್ಪ ಬಸವರಾಜು ಅವರಿಗೆ ಅರಿವಾಗುತ್ತಿತ್ತು. ಅವರು ಇನ್ನೂ ಪಕ್ಷದಲ್ಲಿ ಕಾರ್ಯಕರ್ತರಾಗಿಯೇ ಇರುವುದರಿಂದ ಘಟನೆಯನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳಲು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದು ಆರೋಪಿಸಿದರು.

ಸಂಸದರೆಂಬ ಪರಿಜ್ಞಾನ ಇಲ್ಲದೆ ಪ್ರತಾಪ್ ಸಿಂಹ ಅವರು ಏಳೆಂಟು ವರ್ಷಗಳ ಹಿಂದೆ ಸಿದ್ದರಾಮಯ್ಯ ಸೇವಿಸಿದ್ದ ಆಹಾರವನ್ನು ವಿವಾದವನ್ನಾಗಿಸಲು ಪ್ರಯತ್ನಿಸುತ್ತಿದ್ದಾರೆ. ಸಂಸದರಾದವರಿಗೆ ಮಾಡಬೇಕಾದ ಅಭಿವೃದ್ಧಿ ಕೆಲಸ, ಪರಿಹರಿಸಬೇಕಾದ ಜನರ ಸಮಸ್ಯೆಗಳು ಬೇಕಾದಷ್ಟು ಇವೆ. ಅವೆಲ್ಲವನ್ನೂ ಬದಿಗಿಟ್ಟು, ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಪಡೆಯಲು ಧಾರ್ಮಿಕತೆ ಹಾಗೂ ಆಹಾರ ಸೇವನೆ ವಿಚಾರವನ್ನು ಮುನ್ನೆಡೆಗೆ ತಂದು ವರಿಷ್ಠರ ಗಮನ ಸೆಳೆಯಲಿಕ್ಕೆ ಸಮಾಜದ ಸಾಮರಸ್ಯ ಕದಡಲು ಹಿಂದೂ ಮುಸ್ಲಿಂ ನಡುವೆ ಸಂಘರ್ಷ ತಂದಿಡುತ್ತಿದ್ದಾರೆ. ಸಂಸದರ ನಡವಳಿಕೆ ಹೀಗೆ ಮುಂದುವರೆದರೆ ಅವರಿಗೆ ಘೇರಾವ್ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಯೀದ್ ಮಾತನಾಡಿ, ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಬಿಜೆಪಿ ಹಾಗೂ ಹಿಂದೂಪರ ಸಂಘಟನೆಗಳ ಮುಖಂಡರು ಸಿದ್ದರಾಮಯ್ಯ ಅವರನ್ನು ಹಿಂದುಗಳ ವಿರೋಧಿ ಎಂಬಂತೆ ಬಿಂಬಿಸುತ್ತಿದ್ದಾರೆ. ಹಳ್ಳಿಗಾಡಿನ ಜೀವನ, ಬಡತನದ ಅರಿವಿರುವ ಸಿದ್ದರಾಮಯ್ಯ ಅವರು ಯಾವುದೇ ಒಂದು ಜಾತಿ, ಧರ್ಮಕ್ಕೆ ಸೀಮಿತವಾದ ವ್ಯಕ್ತಿಯಲ್ಲ. ದೇಶದಲ್ಲಿ ಹಿಂದು ಮುಸ್ಲಿಮರು ಭಾವೈಕ್ಯತೆಯಿಂದ ಜೀವನ ನಡೆಸುತ್ತಿದ್ದರೂ, ಅಧಿಕಾರಕ್ಕಾಗಿ ಆಡಳಿತರೂಢ ಪಕ್ಷದ ನಾಯಕರು ಅಭಿವೃದ್ಧಿ ಬದಲು ಕೋಮು ಸಂಘರ್ಷ ನಡೆಸುತ್ತಿದ್ದಾರೆ. ಸಂಸದ ಪ್ರತಾಪ್ ಸಿಂಹ ಸಾರ್ವಜನಿಕ ಜೀವನದಲ್ಲಿ ಬದ್ಧತೆ ಇರುವುದೇ ಆದರೆ ಸಂಸದರಾದ ಆರಂಭದಲ್ಲಿ ನೀಡಿದ್ದ ಕೊಡಗಿಗೆ ರೈಲ್ವೆ ಸಂಪರ್ಕ ಯೋಜನೆಯನ್ನು ಬಾಕಿ ಇರುವ ಒಂದೂವರೆ ವರ್ಷದೊಳಗಾದರೂ ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿ ಎಂದು ಸವಾಲು ಹಾಕಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ತುಂಬಲ ಸಿ.ಪ್ರಕಾಶ್, ಬಾದಾಮಿ ಮಂಜು, ಮಾಜಿ ಸದಸ್ಯ ರಾಘವೇಂದ್ರ, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್, ಯುವ ಮುಖಂಡ ರಜತ್‌ಗೌಡ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸೀತಾರಾಮಂ (ತೆ): ಬೆ.10.20ಕ್ಕೆ, ವಿಕಿಪೀಡಿಯ (ಕ): ಮ.1.30ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಸಂ.4.10ಕ್ಕೆ, ಗಾಳಿಪಟ –2 (ಕ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಲವ್ 360 (ಕ): ಬೆ.10.20ಕ್ಕೆ, ಡೈರಿ (ತ): ಮ.1.05ಕ್ಕೆ, ಡ್ರ್ಯಾಗನ್ ಬಾಲ್ ಸೂಪರ್ (ಜ): ಮ.3.40ಕ್ಕೆ, ರಾ.7.50ಕ್ಕೆ, ಡ್ರ್ಯಾಗನ್ ಬಾಲ್ ಸೂಪರ್ (ಇಂ): ಸಂ.5.45ಕ್ಕೆ, ತೀರುಪ್ಪು (ಮ): ರಾ.10ಕ್ಕೆ.
ಸ್ಕ್ರೀನ್ 3	ಶಿವ 143 (ಕ): ಬೆ.10.20ಕ್ಕೆ, ಸಂ.4ಕ್ಕೆ, ಡೊಳ್ಳು (ಕ): ಮ.1.25ಕ್ಕೆ, ಲೈಗರ್ (ಕ): ರಾ.7.10ಕ್ಕೆ, ಲೈಗರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 4	ಲೈಗರ್ (ತೆ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಲೈಗರ್ (ತೆ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 2	ಲೈಗರ್ (ತೆ): ಬೆ.10.50ಕ್ಕೆ, ಮ.1.45ಕ್ಕೆ, ಕೌಟಿಲ್ಯ (ಕ): ಸಂ.4.40ಕ್ಕೆ, ಲೈಗರ್ (ಹಿಂ): ರಾ.7.35ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಗಾಳಿಪಟ 2 (ಕ): ಬೆ.10.30ಕ್ಕೆ, ಶಿವ 143 (ಕ): ಮ.1.35ಕ್ಕೆ, ರಾ.7.20ಕ್ಕೆ, ವಿಕಿಪೀಡಿಯಾ (ಕ): ಸಂ.4.35ಕ್ಕೆ, ಡೈರಿ (ತ): ರಾ.10.20ಕ್ಕೆ.
ಸ್ಕ್ರೀನ್ 4	ಲವ್ 360 (ಕ): ಬೆ.11ಕ್ಕೆ, ಗಾಳಿಪಟ 2 (ಕ): ಮ.1.40ಕ್ಕೆ, ರಾ.7.05ಕ್ಕೆ, ಡೊಳ್ಳು (ಕ): ಸಂ.4.45ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲವ್ 360 (ಕ): ಬೆ.11ಕ್ಕೆ, ಲೈಗರ್ (ಕ): ಮ.1.45ಕ್ಕೆ, ಸಂ.6.45ಕ್ಕೆ, ಡೊಳ್ಳು (ಕ): ಸಂ.4.30ಕ್ಕೆ, ಲೈಗರ್ (ತೆ): ರಾ.9.30ಕ್ಕೆ.
ಸ್ಕ್ರೀನ್ 2	ಲೈಗರ್ (ತೆ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.15ಕ್ಕೆ, ಲವ್ 360 (ಕ): ಸಂ.4.30ಕ್ಕೆ, ಸೊಲೊಮಂತೆ ತೇನಿಚಕಲ್ (ಮ): ರಾ.9.15ಕ್ಕೆ
ಸ್ಕ್ರೀನ್ 3	ಗಾಳಿಪಟ–2 (ಕ): ಬೆ.10.30ಕ್ಕೆ, ಮ.1.30ಕ್ಕೆ, ಸಂ.4.35ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಲೈಗರ್ (ತೆ): ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ಗಾಳಿಪಟ–2 (ಕ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ.10.25ಕ್ಕೆ, ಮ.1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಲೈಗರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶಿವ 1, 4, 3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ಸಂಗಂ	
ಲೈಗರ್ (ತೆ)	4 ಪ್ರದರ್ಶನಗಳು
ಲಿಡೋ	
ವಿಕಿಪೀಡಿಯಾ (ಕ)	2 ಪ್ರದರ್ಶನಗಳು
ಡೈರಿ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಗಾಳಿಪಟ –2(ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕೌಟಿಲ್ಯ (ಕ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022



2ನೇ ದಿನ, ಶುಕ್ರವಾರ 26–8–2022

ಇಂದಿನ ರೇಸಿಗೆ ನಮ್ಮ ಆಂಕ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ)

I. **ತಲಕಾಡು ಪ್ಲೇಟ್**–1400 ಮೀ. 3 ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). **ಮ.2.30ಕ್ಕೆ**
1. ಬ್ರಿಗು 2. ಸ್ಪಿರಿಚಿಯಲ್ ಕ್ವೀನ್ 3. ಮಿಸ್ ಚೈನಾ

II. **ಪುಲ್ ಸ್ಪೀಡ್ ಪ್ಲೇಟ್ ಡಿ2**– 1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). **ಮ.3.00ಕ್ಕೆ**
1. ಸುಪ್ರೀಮ್ ಏಂಜಲ್ 2. ಎವಂಡರ್ 3. ಓರಿಯಂಟಲ್ ಲಿಲ್ಲಿ

III. **ರಂಗ ಫ್ಯಾಮಿಲಿ ಟ್ರೋಫಿ**–1400 ಮೀ. ರೇಟೆಡ್ 40 ರಿಂದ 65. **ಮ.3.30ಕ್ಕೆ**
1 ನೊಟೋರಿಟಿ 2 ಟ್ರೆಮಂಡಸ್ 3. ಡಿ ಬ್ರದರ್

IV. **ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್** –1400 ಮೀ. 3 ವರ್ಷ (ಟರ್ಮ್ಸ್). **ಸಂ.4.00ಕ್ಕೆ**
1. ಸ್ಟಿಲ್ ಐ ರೈಸ್ 2. ಒಹಾನ್ ಸಿನಿ


V. **ಪುಲ್ ಸ್ಪೀಡ್ ಪ್ಲೇಟ್ ಡಿ1**– 1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). **ಸಂ.4.30ಕ್ಕೆ**
1. ಮೆಬರಿ 2. ವಿಜಯ ಫಾಲ್ಕನ್ 3. ಫ್ಲೈಯಿಂಗ್ ಫಾಲ್ಕನ್

VI. **ರೀಜೆನ್ಸಿ ಗೋಲ್ಡ್ ಪ್ಲೇಟ್**–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). **ಸಂ.5.00ಕ್ಕೆ**
1. ಡಿ ಪೈರ್ 2. ಕ್ಯಾಲಿಫೋರ್ನಿಯ ಗೋಲ್ಡ್ 3. ಕಂಟ್ರೀಸ್ ಪೇಮ್

ದಿನದ ಅತ್ಯುತ್ತಮ	: ಸ್ಟಿಲ್ ಐ ರೈಸ್
ಡಬ್ಬಲ್	: ಬ್ರಿಗ್, ಮೆಬರಿ
ಜಾಕ್‌ಪಾಟ್	: 2, 3, 4, 5 ಮತ್ತು 6
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
ಎಕ್ಸ್‌ಆಕ್ಟ್	: 5 ಮತ್ತು 6

ಟಿಪ್‌ಸ್ಟರ್ ಪಿಜೆಸಿ

ನೇಮಕ



ಪಿರಿಯಾಪಟ್ಟಣ, ಆ.25– ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಸಂಭಾವ್ಯ ಅಭ್ಯರ್ಥಿಯಾಗಿ ಗುರುಮೂರ್ತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದಸರೆಗೆ ಸೂಕ್ತ ಬಂದೋಬಸ್ತ್ ಮಾಡಿ

ಮೈಸೂರಲ್ಲಿ ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಅಲೋಕ್‌ಕುಮಾರ್ ತಾಕೀತು



ಮೈಸೂರು, ಆ.25(ಆರ್‌ಕೆ)–ಅತೀ ಹೆಚ್ಚು ಜನರು ಸೇರುವ ನಿರೀಕ್ಷೆ ಇರುವುದರಿಂದ ಈ ಬಾರಿಯ ದಸರಾ ಮಹೋತ್ಸವಕ್ಕೆ ವ್ಯವಸ್ಥಿತವಾಗಿ ಬಂದೋಬಸ್ತ್ ಮಾಡುವಂತೆ ಕಾನೂನು–ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್ ಮೈಸೂರು ನಗರದ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನ ನಗರ ಪೊಲೀಸ್ ಕಮಿಷ್ನರ್ ಕಚೇರಿ ಸಭಾಂಗಣದಲ್ಲಿ ಗುರುವಾರ ಸಂಜೆ 4ರಿಂದ 6 ಗಂಟೆ ವರೆಗೆ ಇನ್ಸ್‌ಪೆಕ್ಟರ್ ಮೇಲ್ಪಟ್ಟ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಅವರು, ಕೊರೊನಾದಿಂದಾಗಿ ಕಳೆದ ಎರಡು ವರ್ಷ ಸಾಂಪ್ರದಾಯಿಕವಾಗಿ ದಸರಾ ಆಚರಿಸಿದ್ದರಿಂದ ಹೆಚ್ಚು ಜನರು ಸೇರಿರಲಿಲ್ಲ. ಆ ವೇಳೆ ಮಾಡಿದ್ದ ಬಂದೋಬಸ್ತ್ ವ್ಯವಸ್ಥೆಗೂ ಈ ಬಾರಿಗೂ ವ್ಯತ್ಯಾಸವಿರುವುದರಿಂದ ಸೂಕ್ತ ಭದ್ರತೆಗೆ ಪ್ಲಾನ್ ಮಾಡಬೇಕು ಎಂದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭೇಟಿ ನೀಡಿದ್ದಾಗ ಮಾಡಿದ್ದ ಬಂದೋಬಸ್ತ್, ಸಂಚಾರ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅಲೋಕ್ ಕುಮಾರ್, ಈ ಬಾರಿ ಮೈಸೂರು ದಸರಾ ಉದ್ಘಾಟನೆ, ಜಂಬೂ ಸವಾರಿ ಮೆರವಣಿಗೆ, ಪಂಜಿನ ಕವಾಯತು ಪ್ರದರ್ಶನ, ಯುವ ದಸರಾ ಸೇರಿದಂತೆ ಹೆಚ್ಚು ಜನ ಸೇರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಪೊಲೀಸ್ ಅಧಿಕಾರಿಗಳು ಬಂದೋಬಸ್ತ್ ಮೇಲ್ವಿಚಾರಣೆ ಮಾಡಬೇಕು ಎಂದರು.

ಮುಖ್ಯಮಂತ್ರಿಗಳು, ರಾಜ್ಯಪಾಲರು, ಕೇಂದ್ರ ಸಚಿವರು, ನ್ಯಾಯಾಧೀಶರು, ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ಅತೀ ಗಣ್ಯರು ಬರುವ ಮಾರ್ಗ, ವಾಸ್ತವ್ಯ ಸ್ಥಳಗಳಲ್ಲಿ ಎಚ್ಚರಿಕೆ ವಹಿಸಿ ಯಾವುದೇ ಸಮಸ್ಯೆ ಆಗದಂತೆ ನಿಗಾ ವಹಿಸಬೇಕು. ಅರಮನೆ, ಜಂಬೂಸವಾರಿ ಮಾರ್ಗ, ಕವಾಯತು ಮೈದಾನ, ಚಾಮುಂಡಿಬೆಟ್ಟದಲ್ಲಿ ಸಿಸಿ ಕ್ಯಾಮರಾ, ಮೆಟಲ್ ಡೋರ್ ಡಿಟೆಕ್ಟರ್, ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್, ಶ್ವಾನದಳ, ವಿಧ್ವಂಸಕ ಕೃತ್ಯಗಳ ಪತ್ತೆ ದಳ ಬಳಸಿ ನಿರಂತರ ನಿಗಾ ವಹಿಸುವಂತೆಯೂ ಸೂಚನೆ ನೀಡಿದರು.

ಲಾಡ್ಜ್, ಹೋಟೆಲ್, ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡುವವರು, ಹೊರಗಿನಿಂದ ಬರುವವರ ತಪಾಸಣೆ, ಸಂಶಯಾಸ್ಪದ ವ್ಯಕ್ತಿಗಳು, ವಾಹನಗಳ ಮೇಲೆ ನಿಗಾ ವಹಿಸುವುದು, ಪ್ರವಾಸಿ ತಾಣಗಳಲ್ಲಿ ಕಣ್ಗಾವಲು ವಹಿಸಿ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸಬೇಕು. ಎಲ್ಲೆಡೆ ಸಿಸಿ ಕ್ಯಾಮರಾ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಿ ಎಂದು ಎಡಿಜಿಪಿ ಸೂಚಿಸಿದರು. ದಸರಾಗೆ ಬರುವ ಹೆಚ್ಚುವರಿ ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಬಗ್ಗೆ ವಿವರಿಸಿ, ಸ್ಥಳಗಳಿಗೆ ಪ್ಲಾನ್ ಪ್ರಕಾರ ನಿಯೋಜಿಸಿ, ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಈ ಬಾರಿಯ ನಾಡಹಬ್ಬ ಯಶಸ್ವಿಗೊಳಿಸುವಂತೆ ಅಲೋಕ್‌ಕುಮಾರ್ ತಿಳಿಸಿದರು. ಮೈಸೂರು ನಗರ ಪೊಲೀಸ್ ಕಮಿಷ್ನರ್ ಡಾ. ಚಂದ್ರಗುಪ್ತ ಡಿಸಿಪಿಗಳಾದ ಪ್ರದೀಪ್ ಗುಂಟಿ, ಎಂ.ಎಸ್.ಗೀತಾ ಪ್ರಸನ್ನ, ಎಸಿಪಿಗಳಾದ ಎಂ.ಎನ್.ಶಶಿಧರ್, ಗಂಗಾಧರಸ್ವಾಮಿ, ಎಂ.ಶಿವ ಶಂಕರ್, ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಸಭೆಯಲ್ಲಿ ಹಾಜರಿದ್ದರು.

ಸಚಿವ ಮುನಿರತ್ನರಿಂದ ರಾಜರಾಜೇಶ್ವರಿ ಕ್ಷೇತ್ರದಲ್ಲಿ ಕಾಮಗಾರಿ ಮಾಡದೇ ನೂರಾರು ಕೋಟಿ ದುರ್ಬಳಕೆ

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಆರೋಪ

ಮೈಸೂರು,ಆ.25(ಎಂಟಿವೈ)– ತೋಟಗಾರಿಕೆ ಸಚಿವ ಮುನಿರತ್ನ ತಮ್ಮ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಕಾಮಗಾರಿಯನ್ನೇ ಮಾಡದೇ 119 ಕೋಟಿ ರೂ. ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಮುನಿರತ್ನ ಕ್ಷೇತ್ರದಲ್ಲಿ ಕಾಮಗಾರಿಯನ್ನೇ ಮಾಡದೆ 219 ಕೋಟಿ ರೂ. ಬಿಡುಗಡೆ ಮಾಡಿಸಿಕೊಂಡಿದ್ದಾರೆ ಎಂದು ಸಂಸದ ಡಿ.ಕೆ.ಸುರೇಶ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಇದರ ಆಧಾರದ ಮೇಲೆ ಲೋಕಾಯುಕ್ತರಾಗಿದ್ದ ವಿಶ್ವನಾಥ ಶೆಟ್ಟಿ ಹಿರಿಯ ಅಧಿಕಾರಿಗಳ ಮೂಲಕ ತನಿಖೆ ನಡೆಸಿ 114 ಕಾಮಗಾರಿಯ ಲೆಕ್ಕ ತೋರಿಸಿ 119 ಕೋಟಿ. ರೂ. ಪಡೆಯಲಾಗಿದೆ. ಆದರೆ, ಈ ಯಾವುದೇ ಕಾಮಗಾರಿ ನಡೆದಿರುವ ಪುರಾವೆಗಳೇ ಇಲ್ಲ ಎಂದು 2022ರ ಜೂನ್‌ನಲ್ಲಿ ಸರ್ಕಾರಕ್ಕೆ ವರದಿ ನೀಡಿದ್ದರು. ಆದರೆ, ಈ ವರೆಗೂ ಸಚಿವರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎನ್ನುವುದಕ್ಕೆ ಇದಕ್ಕಿಂತಲೂ ದಾಖಲೆ ಬೇಕೇ? ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು. ಹಣಕಾಸು ಇಲಾಖೆ ವಿಶೇಷ ಆಯುಕ್ತೆ ತುಳಸಿ ಮುತ್ತಿನೇನಿ ಅವರನ್ನು ಬ್ಲಾಕ್‌ಮೇಲ್ ಮಾಡಿ, ಹಣ ಬಿಡುಗಡೆ ಮಾಡಿಸಿಕೊಂಡು ಶೇ.40 ಕಮೀಷನ್ ಇರಲಿ, ಸಂಪೂರ್ಣ ಕಾಮಗಾರಿ ಹಣವನ್ನೇ ಗುಳುಂ ಮಾಡಿದ್ದಾರೆ ಎಂದು ಆರೋಪಿಸಿದರು. ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರದಲ್ಲೂ ಭ್ರಷ್ಟಾಚಾರ ವ್ಯಾಪಕವಾಗಿದೆ. ಸುಮಾರು 5 ಸಾವಿರ ಕೋಟಿ ರೂ. ಅವ್ಯವಹಾರ ನಡೆದಿದೆ. ಇಷ್ಟು ದೊಡ್ಡ ಮಟ್ಟದ ಭ್ರಷ್ಟಾಚಾರ ತಮ್ಮ ಮೂಗಿನ ನೇರಕ್ಕೆ ನಡೆಯುತ್ತಿದ್ದರೂ ಸಿಎಂ ಬೊಮ್ಮಾಯಿ ಅವರು 'ಸಮರ್ಪಕ ದಾಖಲೆ ನೀಡಲಿ, ತನಿಖೆ ಮಾಡುತ್ತೇವೆ' ಎಂದು ಹೇಳುತ್ತಾರೆ. ಭ್ರಷ್ಟಾಚಾರ ಮಾಡುವವರು, ಕಮಿಷನ್ ಪಡೆಯುವವರು ದಾಖಲೆ ಇಟ್ಟುಕೊಂಡು ಮಾಡುತ್ತಾರೆಯೇ? ಇಂತಹ ಪ್ರಾಥಮಿಕ ಜ್ಞಾನ ಸಿಎಂ ಅವರಿಗಿಲ್ಲವೇ? ಎಂದು ಲೇವಡಿ ಮಾಡಿದರು.

ಕೊಡಗಿಗೆ ಭೇಟಿ ನೀಡಿದ್ದ ಸಮಯದಲ್ಲಿ ವಿಧಾನ ಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹತ್ಯೆಗೆ ಸಂಚು ರೂಪಿಸಲಾಗಿತ್ತು. ಈ ಕುರಿತು ಅಲ್ಲಿನ ಪೊಲೀಸರಿಗೆ ಲಿಖಿತವಾಗಿ ದೂರು ನೀಡಿದ್ದು, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನನ್ನ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಆದರೆ, ಎಫ್‌ಐಆರ್ ದಾಖಲಿಸಿ ತನಿಖೆ ಮಾಡಲು ವಿಳಂಬ ಮಾಡಲಾಗುತ್ತಿದೆ. ಏಕೆ ಎನ್ನುವುದು ಗೊತ್ತಾಗುತ್ತಿಲ್ಲ ಎಂದರು.



ವರುಣಾ ವಿಧಾನಸಭಾ ಕ್ಷೇತ್ರದ ತಗಡೂರು ಬ್ಲಾಕ್ ಯುವ ಕಾಂಗ್ರೆಸ್ ಸಮಿತಿಗೆ ನೂತನವಾಗಿ ನೇಮಕಗೊಂಡ ಪದಾಧಿಕಾರಿಗಳಿಗೆ ಶಾಸಕ ಯತೀಂದ್ರ ಸಿದ್ದರಾಮಯ್ಯ ನೇಮಕಾತಿ ಆದೇಶ ಪತ್ರ ವಿತರಿಸಿದರು. ಈ ವೇಳೆ ಯುವ ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಮೋಸಿನ್ ಖಾನ್, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಹಿನಕಲ್ ಮಂಜು, ತಗಡೂರು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಹೊಸಕೋಟೆ ಗಿರೀಶ್, ಅನಿಲ್, ಪ್ರದೀಪ್ ಮತ್ತಿತರರಿದ್ದರು.

ಕರ್ನಾಟಕ ಗೃಹ ಮಂಡಳಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಮೈಸೂರು ವಿಭಾಗ, ಮೈಸೂರು

ಸಂಖ್ಯೆ: ಕಗೃಮಂ/ಕಾಅ/ಮೈ.ವಿ/ಸಿ.ಶಾ/ಕೊಟೇಷನ್/2022–23 ದಿ: 25.08.2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ, ಚಾಮರಾಜನಗರ ಜಿಲ್ಲಾ ಯೋಜನಾ ಕಛೇರಿಯ ಕೆಲಸ ಕಾರ್ಯಗಳಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ 4 ಚಕ್ರ ಎಲ್.ಎಂ.ವಿ. ಹವಾ ನಿಯಂತ್ರಿತ ವಾಹನಗಳನ್ನು ಪಡೆಯುವ ಸಲುವಾಗಿ ಕೊಟೇಷನ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕೊಠಡಿ ಸಂಖ್ಯೆ 341, ಜಿಲ್ಲಾ ಆಡಳಿತ ಭವನ, ಚಾಮರಾಜನಗರ ರವರ ಕಛೇರಿ ಸಮಯದಲ್ಲಿ ಸಂಪರ್ಕಿಸುವುದು. ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಲು ಪ್ರಾರಂಭ ದಿ: 26.08.2022 ಕೊನೆಯ ದಿ: 01.09.2022 ರಂದು ಸಂಜೆ 4.00 ಗಂಟೆಯೊಳಗೆ (ದೂ.ಸಂ.: 08226–223673) ಮೈಸೂರು ವಿಭಾಗ ಕಛೇರಿಯಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ವಿಭಾಗ ಕಛೇರಿ, ಮೈಸೂರು.

DIPR/DDMYS/MCA/404/2022-23

ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು

ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ, ನಗರ ಸಭೆ ಆವರಣ, ಹುಣಸೂರು

ಕ್ರಸಂ.: ಹು.ಯೋ.ಪ್ರಾ/ಭೂ.ಉ.ಬ/199/2022–23 ದಿ: 19.08.2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 69(3) & 69(4)ರ ರನ್ವಯ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡ ಹುಣಸೂರು ಗ್ರಾಮದ ಸ.ನಂ.99/10 ರಲ್ಲಿ 00ಎ–21ಗು ವಿಸ್ತೀರ್ಣದ ಜಮೀನು ಶ್ರೀ ಹೆಚ್.ಜಿ.ರಮೇಶ್ ರಾವ್ ಬಿನ್ ಲೇಟ್. ಗಂಗೋಜಿರಾವ್ ರವರ ಹೆಸರಿನಲ್ಲಿದ್ದು ಹಾಗೂ ಸ.ನಂ.99/11 ರಲ್ಲಿ 00ಎ–21ಗು ವಿಸ್ತೀರ್ಣದ ಜಮೀನು ಶ್ರೀಮತಿ ನಾಗೂಬಾಯಿ ಕೋಂ ಲೇಟ್. ಚಂದ್ರಶೇಖರ ರಾವ್ ಹೆಚ್.ಜಿ., ಕವಿತ ಬಿನ್ ಲೇಟ್ ಚಂದ್ರಶೇಖರ ರಾವ್ ಹೆಚ್.ಜಿ., ಶಶಿಕಲ ಬಿನ್ ಲೇಟ್.ಚಂದ್ರಶೇಖರ ರಾವ್ ಹೆಚ್.ಜಿ., ವನಿತ ಬಿನ್ ಲೇಟ್ ಚಂದ್ರಶೇಖರ ರಾವ್ ಹೆಚ್.ಜಿ., ಸಂತೋಷ್ ಬಿನ್ ಲೇಟ್. ಚಂದ್ರಶೇಖರ ರಾವ್ ಹೆಚ್.ಜಿ. ರವರುಗಳ ಹೆಸರಿನಲ್ಲಿದ್ದು ಸದರಿ ಜಮೀನುಗಳನ್ನು ಉದ್ಯಾನವನ ಮತ್ತು ಬಯಲು ಜಾಗದಲ್ಲಿ ಕಾಯ್ದಿರಿಸಲಾಗಿದ್ದು, ಉದ್ಯಾನವನ ಮತ್ತು ಬಯಲು ಜಾಗ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಗೆ ಅನುಮತಿ ಪಡೆದು ಸಾರ್ವಜನಿಕರಿಗೆ ನಿವೇಶನ ರಹಿತರಿಗೆ ವಸತಿ ನಿವೇಶನ ಒದಗಿಸುವ ಸಾರ್ವಜನಿಕ ಹಿತಾಸಕ್ತಿವುಳ್ಳದಾಗಿ ತಿಳಿಸಿ ಉದ್ಯಾನವನ ಮತ್ತು ಬಯಲು ಜಾಗ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಗೆ ಅನುಮತಿ ನೀಡುವಂತೆ ಕೋರಿರುತ್ತಾರೆ. ಸದರಿ ಭೂಉಪಯೋಗ ಬದಲಾವಣೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 69(3) & 69(4) ರನ್ವಯ ಯಾವುದೇ ಕ್ರಮವಹಿಸುವ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು ಇವರಿಗೆ ಲಿಖಿತವಾಗಿ/ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಸದರಿ ಅವಧಿ ಮುಗಿದ ನಂತರ ಬರುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು
ಸಹಿ/– ಅಧ್ಯಕ್ಷರು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು

DIPR/DDMYS/MCA/410/2022-23



2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಅನಂತ್‌ನಾಗ್ ಎನ್.
ಜನನ: 10–02–1985 ನಿಧನ: 26–08–2020
ದುಃಖತಪ್ತರು: ತಂದೆ, ತಾಯಿ, ಅಣ್ಣ-ತಮ್ಮಂದಿರು, ಕುಟುಂಬವರ್ಗ, ಸ್ನೇಹಿತರು ಹಾಗೂ ಜಯದೇವನಗರದ ಗ್ರಾಮಸ್ಥರು



12ನೇ ವರ್ಷದ ಸವಿನೆನಪು
ನೀನು ನಮ್ಮನ್ನಗಲಿ ಇಂದಿಗೆ 12 ವರ್ಷವಾದರೂ ಸದಾ ನಿನ್ನ ಸವಿನೆನಪಿನಲ್ಲಿರುವ
ದುಃಖತಪ್ತರು:
ತಂದೆ-ಸಿ. ಮಹೇಶ್‌ಗೌಡ
ತಾಯಿ- ಪವಿತ್ರ ಎಂ.ಎನ್.
ಅಕ್ಕ- ಸಂಜನ ಎಂ
ಅಜ್ಜಿ, ಅತ್ತೆ, ಮಾವಂದಿರು ಹಾಗೂ ಕುಟುಂಬವರ್ಗ
ಎಂ. ಸಿಂಚನ
ಜನನ: 31.08.2004
ಮರಣ: 26.08.2010

10ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ತಾಯಿ–ಗಿರಿಜಾ
ಅಣ್ಣ–ಆನಂದ
ಅಕ್ಕ-ಭಾವ, ಪೂರ್ಣಿಮಾ ರಾಧಾಕೃಷ್ಣ ಮತ್ತು ಶ್ರೀದೇವಿ ಮಲ್ಲಿಕಾರ್ಜುನ್
ಸೆಂಥಿಲ್ ಕುಮಾರ್ ಎನ್.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು

ಮೈಸೂರು – ನಂಜನಗೂಡು ರಸೆ, ಬಂಡೀಪಾಳ್ಯ, ಮೈಸೂರು – 570025.

E-Mail: apmcmysore@rediffmail.com apmcmys@gmail.com ದೂರವಾಣಿ: 0821–2482389

ಸಂ.ಕೃಉಮಾಸ(ಮೈ)/1036/2022–23 ದಿನಾಂಕ : 25–08–2022

ಪ್ರಕಟಣೆ

ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಬಾಳೆಕಾಯಿ ಮಾರುಕಟ್ಟೆಯ ಅಂಗಡಿ ಮಳಿಗೆ ಮತ್ತು ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣದ ಅಂಗಡಿಮಳಿಗೆಗಳ ಹಂಚಿಕೆಗಾಗಿ ಸಮಿತಿಯ ಪ್ರಕಟಣೆ ಸಂ. ಕೃಉಮಾಸ(ಮೈ)/817/2021–22, ದಿ: 16–09–2021 ರಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು ದಿನಾಂಕ: 25–08–2022 ರಂದು ನಡೆದ ಸಮಿತಿ ಸಾಮಾನ್ಯ ಸಭೆಯ ವಿಷಯ ಸಂ. (2) ರನ್ವಯ ಅರ್ಹ ಪೇಟೆಕಾರ್ಯಕರ್ತರ ಜೇಷ್ಠತೆಯನುಸಾರ ಆಯ್ಕೆಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದ್ದು, ಈ ಕುರಿತು ಯಾವುದೇ ಆಕ್ಷೇಪಣೆ / ಸಲಹೆ ಮತ್ತು ತಕರಾರುಗಳು ಏನಾದರೂ ಇದ್ದಲ್ಲಿ ಅದನ್ನು ಪುಷ್ಟೀಕರಿಸುವ ದಾಖಲಾತಿಗಳೊಂದಿಗೆ ಈ ಪ್ರಕಟಣೆ ದಿನಾಂಕದಿಂದ 10 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಆಕ್ಷೇಪಣೆ / ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

ಬಾಳೆಕಾಯಿ ಅಂಗಡಿಮಳಿಗೆ ಹಂಚಿಕೆ ವಿವರ

ಕ್ರಸಂ	ಅರ್ಜಿದಾರರ ಹೆಸರು ವಿಳಾಸ	ಮೀಸಲಾತಿ	ಗಳಿಸಿದ ಒಟ್ಟು ಅಂಕಗಳು	ನಿಯಮನುಸಾರ ಪರಿಗಣಿಸಿರುವ ಮಳಿಗೆ ಸಂಖ್ಯೆ
1	ಶ್ರೀ ನಂಜುಂಡೇಶ್ವರ ಫ್ರೂಟ್ಸ್ ಮತ್ತು ತರಕಾರಿ ಮಂಡಿ, ಮಾ: ಶ್ರೀನಿವಾಸ ಗೌಡ	ಸಾಮಾನ್ಯ	119	37
2	ಲಕ್ಷ್ಮೀ ವೆಂಕಟೇಶ್ವರ ಹಣ್ಣು ಮತ್ತು ತರಕಾರಿ ಮಂಡಿ, ಮಾ// ಶ್ರೀಮತಿ ಅಶ್ವಿನಿ	ಸಾಮಾನ್ಯ	114	35
3	ಸಿದ್ದಲಿಂಗಸ್ವಾಮಿ ತರಕಾರಿ ಮಂಡಿ, ಮಾ// ಸಿದ್ದಲಿಂಗಸ್ವಾಮಿ.	ಸಾಮಾನ್ಯ	94	32
4	ಆರ್. ರವಿಕುಮಾರ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ಆರ್.ರವಿಕುಮಾರ್	ಸಾಮಾನ್ಯ	94	33
5	ಎಂ.ಎಸ್.ಎಸ್. ಎಂಟರ್‌ಪ್ರೈಸಸ್, ಪಾ// ಸಿದ್ದೇಗೌಡ & ಶಿವರಾಜು	ಸಾಮಾನ್ಯ	90	30
6	ಶ್ರೀ ಅಂಕನಾಥೇಶ್ವರ ಹಣ್ಣು ಮತ್ತು ಬಾಳೆಕಾಯಿ, ಮಾ// ಮಹೇಂದ್ರ	ಸಾಮಾನ್ಯ	86	31
7	ಗುರುಮಲ್ಲಮ್ಮ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ಗುರುಮಲ್ಲಮ್ಮ	ಸಾಮಾನ್ಯ	72	57
8	ಭಾಗ್ಯಲಕ್ಷ್ಮೀ ಫ್ರೂಟ್ಸ್ ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ಭಾಗ್ಯಲಕ್ಷ್ಮೀ	ಸಾಮಾನ್ಯ	71	58
9	ಭವಿಷ್ ಎಂಟರ್ ಪ್ರೈಸಸ್ ಮಾ// ಎಸ್.ರಘು ಕುಮಾರ	ಸಾಮಾನ್ಯ	71	02
10	ರಾಜೇಶ.ಎ.ಸಿ.ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ರಾಜೇಶ.ಎ.ಸಿ	ಸಾಮಾನ್ಯ	71	03
11	ಮಂಜು.ಎಸ್. ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ಮಂಜು.ಎಸ್	ಸಾಮಾನ್ಯ	71	04
12	ಶ್ರೀ ಲಕ್ಷ್ಮೀಟ್ರೇಡರ್ಸ್, ಮಾ// ಪ್ರಜೇಶ್.ಸಿ.	ಸಾಮಾನ್ಯ	69	21
13	ಕೆ.ಮಹದೇವ	ಸಾಮಾನ್ಯ	65	46
14	ಆದಿಶಕ್ತಿ ಗದ್ದೆ ಕೆಂಪಮ್ಮ, ಹಣ್ಣು ಮತ್ತು ತರಕಾರಿ ಮಂಡಿ,	ಸಾಮಾನ್ಯ	64	23
15	ಪ್ರಭುಶಂಕರ.ಆರ್.ಹಣ್ಣು ಮತ್ತು ತರಕಾರಿ ಮಾ// ಪ್ರಭುಶಂಕರ,	ಸಾಮಾನ್ಯ	59	44
16	ರಾಜೇಶ.ಬಿ.ಎನ್., ಹಣ್ಣು ಮತ್ತು ಬಾಳೆಕಾಯಿ ಮಂಡಿ,	ಸಾಮಾನ್ಯ	58	47
17	ಜಯರಾಮ.ಜಿ, ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಜಯರಾಮ,	ಸಾಮಾನ್ಯ	58	52
18	ಜಯಲಕ್ಷ್ಮೀ ಬಾಳೆಕಾಯಿ, ಹಣ್ಣು ಮತ್ತು ತರಕಾರಿ ಮಂಡಿ, ಮಾ// ಜಯಲಕ್ಷ್ಮೀ,	ಸಾಮಾನ್ಯ	53	34
19	ಶ್ರೀ ಲಕ್ಷ್ಮೀವೆಂಕಟೇಶ್ವರ ಪ್ರಸನ್ನ, ಮಾ// ಲಕ್ಷ್ಮೀ	ಸಾಮಾನ್ಯ	43	05
20	ಸಂಪತ್.ಹೆಚ್.ಆರ್. ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ಸಂಪತ್.ಹೆಚ್.ಆರ್	ಸಾಮಾನ್ಯ	39	06
21	ಎಸ್.ಬಿ.ಪಲ್ಲವಿ ವೆಜಿಟೆಬಲ್ಸ್, ಮಾ// ಶ್ರೀಮತಿ ಎಸ್.ಬಿ.ಪಲ್ಲವಿ	ಸಾಮಾನ್ಯ	37	36
22	ಕುಮಾರ.ಬಿ, ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಕುಮಾರ.ಬಿ,	ಸಾಮಾನ್ಯ	37	8
23	ಶ್ರೀ ಎಲ್ಲಮ್ಮ ಬಾಳೆಕಾಯಿ ಮಂಡಿ, ಮಾ// ಪಿ.ಸೋನಾಶ್ರೀ.	ಸಾಮಾನ್ಯ	37	55
24	ಎ.ಸಿ.ಕುಮಾರ	ಸಾಮಾನ್ಯ	36	09
25	ಶ್ರೀ ವಡ್ಗಲ್ ರಂಗನಾಥ, ಮಾ// ರೇಣು ಕುಮಾರ,	ಸಾಮಾನ್ಯ	36	51
26	ಹೇಮಚಂದ್ರ, ಬಾಳೆಕಾಯಿ ಮಂಡಿ, ಮಾ//ಎಸ್.ಹೇಮಚಂದ್ರ	ಸಾಮಾನ್ಯ	34	10
27	ಮಂಜುನಾಥ.ಎಂ, ಹಣ್ಣು ಮತ್ತು ಬಾಳೆಕಾಯಿ, ಮಾ// ಮಂಜುನಾಥ.ಎಂ	ಸಾಮಾನ್ಯ	33	16
28	ಕುಮಾರ ಹಣ್ಣು ಮತ್ತು ತರಕಾರಿ, ಮಾ// ಕುಮಾರ,	ಸಾಮಾನ್ಯ	33	11
29	ಆರ್.ಹೆಚ್.ಕೆ. ಹಣ್ಣು ಮತ್ತು ಬಾಳೆಕಾಯಿ ಮಂಡಿ	ಸಾಮಾನ್ಯ	32	12
30	ಮಾಲಯ್ಯ ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಮಾಲಯ್ಯ	ಸಾಮಾನ್ಯ	31	17
31	ಬಿ.ಮಹೇಶ ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ//ಬಿ.ಮಹೇಶ,	ಸಾಮಾನ್ಯ	31	28
32	ಸುಮ.ಎಲ್.ಎಸ್. ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಸುಮ.ಎಲ್.ಎಸ್	ಸಾಮಾನ್ಯ	30	13
33	ಎಂ.ರಂಗಸ್ವಾಮಿ ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಎಂ.ರಂಗಸ್ವಾಮಿ	ಪರಿಶಿಷ್ಟ ಪಂಗಡ	30	01
34	ಗಿರೀಶ.ಜಿ. ಬಾಳೆಕಾಯಿ ಮಂಡಿ, ಮಾ// ಗಿರೀಶ.ಜಿ,	ಸಾಮಾನ್ಯ	30	15
35	ಸಂದೀಪ.ಬಿ ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಸಂದೀಪ.ಬಿ,	ಸಾಮಾನ್ಯ	30	24
36	ಮಹೇಶ.ಎಂ., ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಮಹೇಶ.ಎಂ	ಸಾಮಾನ್ಯ	29	27
37	ಎನ್.ಮಂಜುನಾಥ, ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ಎನ್ ಮಂಜುನಾಥ,	ಸಾಮಾನ್ಯ	29	18
38	ಶ್ರೀ ಜ್ವಾಲಾಮುಖಿ ಹಣ್ಣು ಮತ್ತು ತರಕಾರಿ ಮಂಡಿ,	ಸಾಮಾನ್ಯ	29	20
39	ಶ್ರೀ ವೆಂಕಟೇಶ್ವರ ಹಣ್ಣು ಮತ್ತು ಬಾಳೆಕಾಯಿ ಮಂಡಿ,	ಸಾಮಾನ್ಯ	28	25
40	ಶ್ರೀ ಮಲೈ ಮಹದೇಶ್ವರ ಪ್ರಸನ್ನ, ಹಣ್ಣು ಮತ್ತು ತರಕಾರಿ ಮಂಡಿ, ಮಾ// ಸಿದ್ದಯ್ಯ	ಪರಿಶಿಷ್ಟ ಜಾತಿ	28	26
41	ಮಹಾಲಕ್ಷ್ಮೀ ಫ್ರೂಟ್ಸ್, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ಲಕ್ಷ್ಮೀ ಸೋಮಶೇಖರ	ಪರಿಶಿಷ್ಟ ಪಂಗಡ	27	45
42	ಓಂಕಾರ ಸಿದ್ದೇಶ್ವರ, ಸಗಟು ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ರುಕ್ಮಿಣಿ.ಆರ್	ಪರಿಶಿಷ್ಟ ಜಾತಿ	27	22
43	ಎಸ್.ಅರ್ಜುನ ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಎಸ್.ಅರ್ಜುನ	ಸಾಮಾನ್ಯ	27	39
44	ಟಿ.ಎಂ.ನಾಗರಾಜು, ಹಣ್ಣು ಮತ್ತು ಬಾಳೆಕಾಯಿ ಮಂಡಿ,	ಸಾಮಾನ್ಯ	27	40
45	ಕುಮಾರ ಹಣ್ಣು ಮತ್ತು ಬಾಳೆಕಾಯಿ ಮಂಡಿ, ಮಾ// ಕುಮಾರ,	ಸಾಮಾನ್ಯ	27	41
46	ಶ್ರೀ ಮುರುಗನ್ ಹಣ್ಣು ಮತ್ತು ಬಾಳೆಕಾಯಿ ಮಂಡಿ,	ಸಾಮಾನ್ಯ	26	42
47	ಗಜಲಕ್ಷ್ಮೀ ಫ್ರೂಟ್ಸ್ ಬಾಳೆಕಾಯಿ ಮಂಡಿ, ಮಾ// ಜಿ.ಕುಮಾರ,	ಸಾಮಾನ್ಯ	26	49
48	ರಾಜು. ಮಾ//ರಾಜು	ಸಾಮಾನ್ಯ	26	54
49	ಜಿ.ಮಂಜುನಾಥ,	ಸಾಮಾನ್ಯ	26	14
50	ಗಂಗರಾಮ ಟ್ರೇಡರ್ಸ್,	ಪರಿಶಿಷ್ಟ ಜಾತಿ	25	53
51	ಹುಚ್ಚಮ್ಮ ಟ್ರೇಡರ್ಸ್, ಮಾ//ಗಿರೀಶ.ಎಂ.ಸಿ	ಪರಿಶಿಷ್ಟ ಪಂಗಡ	22	29
52	ಎಸ್.ಮಂಜು,	ಪರಿಶಿಷ್ಟ ಜಾತಿ	15	19
53	ಗಾಯಿತ್ರಿ ಪ್ರಾವಿಜನ್ ಸ್ಟೋರ್	ಅಂಗವಿಕಲರು	14	50
54	ಸಿದ್ಧಾರ್ಥ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ವಿನೋದ.ಆರ್	ಪರಿಶಿಷ್ಟ ಜಾತಿ	9	38
55	ಹೆಚ್.ಜಿ.ಪುರುಷೋತ್ತಮ, ಮಾ// ಹೆಚ್.ಜಿ.ಪುರುಷೋತ್ತಮ,	ಪರಿಶಿಷ್ಟ ಪಂಗಡ	9	56
56	ಶ್ರೀ ಚಂದ್ರಮೌಳೇಶ್ವರ ಹಣ್ಣು ಮತ್ತು ಬಾಳೆಕಾಯಿ ಮಂಡಿ,	ಪರಿಶಿಷ್ಟ ಜಾತಿ	2	43
57	ವಿ.ಸೋಮಶೇಖರ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ವಿ.ಸೋಮಶೇಖರ,	ಪರಿಶಿಷ್ಟ ಜಾತಿ	2	07
58	ಎಂ.ಎಸ್.ಪಿ.ಟ್ರೇಡರ್ಸ್, ಮಾ// ಉದಯ ಶಂಕರ.ಎಂ.ಎ.,	ಪರಿಶಿಷ್ಟ ಜಾತಿ	2	48

ತರಕಾರಿ ಅಂಗಡಿಮಳಿಗೆ ಹಂಚಿಕೆ ವಿವರ

ಕ್ರಸಂ	ಅರ್ಜಿದಾರರ ಹೆಸರು ವಿಳಾಸ	ಮೀಸಲಾತಿ	ಗಳಿಸಿದ ಒಟ್ಟು ಅಂಕಗಳು	ನಿಯಮನುಸಾರ ಪರಿಗಣಿಸಿರುವ ಮಳಿಗೆ ಸಂಖ್ಯೆ
1	ಶ್ರೀ ಬಸವೇಶ್ವರ ಹಣ್ಣು ಮತ್ತು ತರಕಾರಿ ಮಂಡಿ, ಮಾ// ಎಸ್.ಶಿವಕುಮಾರ್	ಸಾಮಾನ್ಯ	213	146
2	ಪುನೀತ ವೆಜಿಟೆಬಲ್ಸ್ ಮಾ//ಪುನೀತ.ಬಿ.	ಸಾಮಾನ್ಯ	212	162
3	ಪ್ರಭಾಕರ ಬಿ.ಹಣ್ಣು ತರಕಾರಿ ಮತ್ತು ಬಾಳೆಕಾಯಿ, ಮಾ// ಪ್ರಭಾಕರ.ಬಿ	ಪರಿಶಿಷ್ಟ ಪಂಗಡ	210	145
4	ಶ್ರೀ ಕೃಷ್ಣ ಹಣ್ಣು ಮತ್ತು ತರಕಾರಿ ಮಂಡಿ, ಮಾ// ಶ್ರೀ ಕೃಷ್ಣ	ಸಾಮಾನ್ಯ	206	148
5	ದಿನೇಶ.ಎಂ.ಪಿ ಹಣ್ಣು ಮತ್ತು ತರಕಾರಿ, ಮಾ// ದಿನೇಶ.ಎಂ.ಪಿ	ಸಾಮಾನ್ಯ	206	150
6	ಮೈಲಾರಲಿಂಗೇಶ್ವರ ವೆಜಿಟೆಬಲ್ಸ್, ಮಾ// ಮಲ್ಲೇಶ.ಎನ್.	ಸಾಮಾನ್ಯ	205	157
7	ಫಾರಜ್ ಶರೀಫ್ ಫ್ರೂಟ್ಸ್ ಹಣ್ಣು ಮತ್ತು ತರಕಾರಿ ಮಂಡಿ, ಮಾ//ಫಾರಜ್ ಶರೀಫ್	ಸಾಮಾನ್ಯ	186	149
8	ಅಮ್ಜದ್‌ಖಾನ್ ಹಣ್ಣು ಮತ್ತು ತರಕಾರಿ, ಮಾ// ಅಮ್ಜದ್‌ಖಾನ್	ಸಾಮಾನ್ಯ	185	158
9	ಅಬ್ದುಲ್ ರಹೀಂ ಶೇಕ್, ಮಾ// ಅಬ್ದುಲ್, ರಹೀಂ ಶೇಕ್, ಹಣ್ಣು ಮತ್ತು ತರಕಾರಿ ದಲ್ಲಾಳರು	ಸಾಮಾನ್ಯ	174	153
10	ಎ.ಆರ್.ಹೈದರಾಲಿ ಮಾ// ಎಚ್.ಖಾಜ್ ಮೊಯಿದಿನ್, ಹಣ್ಣು ಮತ್ತು ತರಕಾರಿ ದಲ್ಲಾಳರು	ಸಾಮಾನ್ಯ	159	p–09
11	ಮಂಜುಳ ಹಣ್ಣು ಮತ್ತು ತರಕಾರಿ ಮಂಡಿ, ಮಾ// ಮಂಜುಳ	ಸಾಮಾನ್ಯ	152	154
12	ನಿಂಗಣ್ಣ ತರಕಾರಿ ಮಂಡಿ, ಮಾ// ನಿಂಗಣ್ಣ ಹಣ್ಣು ಮತ್ತು ತರಕಾರಿ ದಲ್ಲಾಳರು,	ಸಾಮಾನ್ಯ	149	151
13	ಶ್ರೀ ನಂಜುಂಡೇಶ್ವರ ಟ್ರೇಡರ್ಸ್, ಮಾ// ದೇವೇಂದ್ರ,	ಸಾಮಾನ್ಯ	149	155
14	ಶ್ರೀ ಚಾಮುಂಡೇಶ್ವರಿ ಟ್ರೇಡರ್ಸ್, ಮಾ// ಆನಂದ ಕುಮಾರ.ಆರ್	ಸಾಮಾನ್ಯ	147	156
15	ಅಶೋಕ ಎಸ್ ಹಣ್ಣು ಮತ್ತು ಬಾಳೆಕಾಯಿ, ಮಾ// ಅಶೋಕ ಎಸ್	ಸಾಮಾನ್ಯ	123	161
16	ಜಮಶೀದ್ ಅಹ್ಮದ್ ಹಣ್ಣು ಮತ್ತು ತರಕಾರಿ, ಮಾ// ಜಮೀರ್ ಅಹ್ಮದ್	ಸಾಮಾನ್ಯ	115	p / 17
17	ಎನ್.ಎಮ್.ಎ ಟ್ರೇಡರ್ಸ್, ಹಣ್ಣು ಮತ್ತು ತರಕಾರಿ, ಮಾ// ಪಲ್ಲವಿ.ಟಿ.ಎಂ,	ಸಾಮಾನ್ಯ	109	p / 14
18	ಎಸ್.ಎಂ.ಎ.ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ಶಾಂತಿ	ಸಾಮಾನ್ಯ	109	p / 8
19	ಪ್ರವೀಣ ಹಣ್ಣು ಮತ್ತು ತರಕಾರಿ, ಮಾ// ಪ್ರವೀಣ	ಸಾಮಾನ್ಯ	107	p / 13
20	ಎ.ಎಸ್.ಜೆ. ತರಕಾರಿ ಮಂಡಿ, ಮಾ//ತಸ್ಲಿಮ್ ಪಾಷ ಹಣ್ಣು ಮತ್ತು ತರಕಾರಿ ದಲ್ಲಾಳರು	ಸಾಮಾನ್ಯ	104	p / 7
21	ಜೆ.ರವಿ ಹಣ್ಣು ಮತ್ತು ತರಕಾರಿ, ಮಾ//ಜೆ.ರವಿ	ಸಾಮಾನ್ಯ	103	p / 12
22	ಕುಮಾರ.ಕೆ. ಹಣ್ಣು ಮತ್ತು ತರಕಾರಿ, ಮಾ// ಕುಮಾರ,	ಸಾಮಾನ್ಯ	61	p / 1
23	ಶ್ರೀಕಂಠೇಶ್ವರ ಪ್ರಸನ್ನ ಹಣ್ಣು ಮತ್ತು ತರಕಾರಿ ಮಂಡಿ, ಮಾ//ಸಿದ್ದಯ್ಯ.	ಪರಿಶಿಷ್ಟ ಜಾತಿ	59	147
24	ಎಮ್.ಎಸ್.ಟ್ರೇಡರ್ಸ್ ಮಾ// ಮಹಮ್ಮದ್, ಸಖ್ಲೈನ	ಸಾಮಾನ್ಯ	38	p / 05
25	ಶ್ರೀ ಮಹದೇಶ್ವರ ಬಾಳೆಕಾಯಿ ಹಣ್ಣು ಮತ್ತು ತರಕಾರಿ ಮಂಡಿ, ಮಾ//ಶ್ರೀ ಬಿ.ಎಂ.ಮಹೇಶ	ಸಾಮಾನ್ಯ	34	p / 4
26	ಮಂಜುನಾಥ.ಎಂ ಹಣ್ಣು ಮತ್ತು ತರಕಾರಿ, ಮಾ// ಮಂಜುನಾಥ.ಎಂ	ಸಾಮಾನ್ಯ	33	p / 19
27	ಶ್ರೀ ಭೈರವೇಶ್ವರ ಟ್ರೇಡರ್ಸ್, ಮಾ//ಬೀರಲಿಂಗೇಗೌಡ	ಸಾಮಾನ್ಯ	32	p / 24
28	ಶ್ರೀ ಮುನೇಶ್ವರ ಟ್ರೇಡರ್ಸ್, ಮಾ//ಶ್ರೀನಿವಾಸ.ಜಿ. ಹಣ್ಣು ಮತ್ತು ತರಕಾರಿ ದಲ್ಲಾಳರು	ಸಾಮಾನ್ಯ	32	p / 20
29	ಶ್ರೀ ಕಾಲಭೈರವೇಶ್ವರ ಕೃಪೆ, ಹಣ್ಣು ಮತ್ತು ತರಕಾರಿ ಮಾ// ಅಭಿಲಾಷ,	ಸಾಮಾನ್ಯ	23	p / 2
30	ಗಜಲಕ್ಷ್ಮೀ ಗ್ರೀನ್ ಮರ್ಚೆಂಟ್ಸ್, ಮಾ//ರಘು.ಜಿ	ಸಾಮಾನ್ಯ	22	p / 22
31	ಮಲ್ಲಿಕಾರ್ಜುನ ಸ್ವಾಮಿ ಹಣ್ಣು ಮತ್ತು ತರಕಾರಿ ಮಂಡಿ, ಮಾ// ಜಯಂತಿ.ಹೆಚ್.ಟಿ	ಸಾಮಾನ್ಯ	22	p / 15
32	ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಮಾ// ಶ್ರೀನಿವಾಸ	ಪರಿಶಿಷ್ಟ ಜಾತಿ	21	152
33	ಬೀರೇಶ್ವರ ಸ್ಟಾಲ್ ಹಣ್ಣು ಮತ್ತು ತರಕಾರಿ, ಮಾ// ಸಿದ್ದಮ್ಮ	ಸಾಮಾನ್ಯ	18	p / 23
34	ಶ್ರೀ ಬಿಳಿಗಿರಿರಂಗನಾಥಸ್ವಾಮಿ ಪ್ರಸನ್ನ ಮಾ// ಶಿವಸ್ವಾಮಿ.ಕೆ	ಪರಿಶಿಷ್ಟ ಜಾತಿ	16	159
35	ಶ್ರೀ ಸಾಯಿ ವೆಜಿಟೆಬಲ್ಸ್, ಬನಾನ ಮತ್ತು ಫ್ರೂಟ್ಸ್ ಮಾರ್ಕೇಟ್, ಮಾ//ಶರತ್ ಗೌಡ.ಬಿ	ಸಾಮಾನ್ಯ	2	p / 16
36	ಎಂ.ಸೋಮಪ್ಪ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ಎಂ.ಸೋಮಪ್ಪ	ಸಾಮಾನ್ಯ	2	p / 10
37	ಮಹದೇವ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ// ಮಹದೇವ	ಅಂಗವಿಕಲರು	2	160
38	ಶ್ರೀ ಕಾಲ ಬೈರವೇಶವರ ಹಣ್ಣು, ತರಕಾರಿ ಮತ್ತು ಬಾಳೆಕಾಯಿ ಮಂಡಿ, ಮಾ//ಜೋಗಿಸಿದ್ದಯ್ಯ	ಪರಿಶಿಷ್ಟ ಜಾತಿ	2	p / 11
39	ಗಿರಿಧರ ಟಿ.ಜಿ ಹಣ್ಣು ಮತ್ತು ತರಕಾರಿ, ಮಾ// ಗಿರಿಧರ.ಟಿ.ಜಿ,	ಪರಿಶಿಷ್ಟ ಜಾತಿ	0	p / 18
40	ಯಶ್ವಂತ ಕುಮಾರ ಎಸ್. ಹಣ್ಣು ಮತ್ತು ತರಕಾರಿ, ಮಾ// ಯಶ್ವಂತ ಕುಮಾರ.ಎಸ್	ಪರಿಶಿಷ್ಟ ಜಾತಿ	0	p / 3
41	ನವೀನ ಹಣ್ಣು ಮತ್ತು ತರಕಾರಿ ಮಾ// ಸುನೀಲ್ ಕುಮಾರ.ಡಿ.ಎಸ್	ಪರಿಶಿಷ್ಟ ಜಾತಿ	0	p / 21
42	ಚೆನ್ನಕೇಶವ ಹಣ್ಣು ಮತ್ತು ತರಕಾರಿ ಮತ್ತು ಬಾಳೆಕಾಯಿ ಟ್ರೇಡರ್ಸ್	ಪರಿಶಿಷ್ಟ ಪಂಗಡ	0	p / 6

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ., ಮೈಸೂರು
ಸಹಿ/- ಆಡಳಿತಾಧಿಕಾರಿ, ಕೃ.ಉ.ಮಾ.ಸ., ಮೈಸೂರು